ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೮ನೇ ಮಾರ್ಚ್ ೧೯೯೦, ಚೈತ್ರ ೭, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು.]

ಹೊಸ ವರ್ಷದ ಶುಭಾಶಯಗಳು

ಅಧ್ಯಕ್ಷರು.—ಸನ್ಮಾನ್ಯ ಸದಸ್ಯರೇ, ಶ್ರೀ ಪ್ರಮೋದೂತನಾಮ ಸಂವತ್ಸರದ ಮೊದಲನೇ ದಿವಸ ನಾವೆಲ್ಲಾ ಇಲ್ಲಿ ಸೇರುತ್ತಾ ಇದ್ದೇವೆ. ಮಾನ್ಯ ಸದಸ್ಯರಿಗೆ ಮತ್ತು ರಾಜ್ಯದ ಎಲ್ಲರಿಗೂ ಈ ಸಂವತ್ಸರ ಸುಖ ಸಂತೋಷಗಳನ್ನು ತರಲಿ ಎಂದು ಹಾರೈಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಸದಸ್ಯರ ಪರವಾಗಿ ತಮಗೂ ಶ್ರೀ ಪ್ರಮೋದೂತನಾಮ ಸಂವತ್ಸರ ಸುಖ ಸಂತೋಷಗಳನ್ನು ತರಲಿ ಎಂದು ಹಾರೈಸುತ್ತೇನೆ.

ಅಧ್ಯಕ್ಷರು.—ಈ ಆಯವ್ಯಯದ ಮೇಲೆ ಒಟ್ಟು ೧೨೬೦ ನಿಮಿಷಗಳ ಚರ್ಚೆಯಾಗಿದೆ. ಒಟ್ಟು ೪೩ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಅದರಲ್ಲಿ ಕಾಂಗ್ರೆಸ್ ಸದಸ್ಯರು ಕೇವಲ ೫೪೨ ನಿಮಿಷ ಮಾತ್ರ ತೆಗೆದುಕೊಂಡಿದ್ದಾರೆ. ಜನತಾದಳದ ಸದಸ್ಯರು ೪೩೩ ನಿಮಿಷ ಬಿ.ಜೆ.ಪಿ ಸದಸ್ಯರು ೬೫ ನಿಮಿಷ ಜನತಾ ಪಕ್ಷದ ಸದಸ್ಯರು ೭೫ ನಿಮಿಷ, ರೈತ ಸಂಘದ ಸದಸ್ಯರು ೬೫ ನಿಮಿಷ, ಮುಸ್ಲಿಂಲೀಗ್‌ನವರು ೨೫ ನಿಮಿಷ, ಎಐಡಿಎಂಕೆ ಪಕ್ಷದ ಸದಸ್ಯರು ೩ ನಿಮಿಷ ಪಕ್ಷೇತರರು ೫೨ ನಿಮಿಷಗಳನ್ನು ತೆಗೆದುಕೊಂಡಿದ್ದಾರೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

(ಮಂತ್ರಿಯವರಿಂದ ಉತ್ತರ)

† ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೆ. ನಾನು ೧೯೯೦-೯೧ ಸಾಲಿನ ಬಜೆಟ್ ಮಂಡನೆ ಮಾಡಿದ ಮೇಲೆ ಈ ಸಭೆಯ ಮಾನ್ಯ ಸದಸ್ಯರು ಯಾವ ಸದ್ದುಗದ್ದಲ ಇಲ್ಲದೆ ಶಾಂತಯುತವಾಗಿ ಚರ್ಚೆಯನ್ನು ನಡೆಸಿದ್ದಾರೆ. ಅವರು ಚರ್ಚೆ ಮಾಡುವ ಕಾಲದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಈ ಸಾಲಿನ ಬಜೆಟ್ ಅನ್ನು ಮಂಡಿಸುವ ಕಾಲದಲ್ಲಿ ಬಜೆಟ್ ಕೊರತೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿದ್ದೇವೆ. ಇದರ ಮೂಲ ಉದ್ದೇಶವೇನೆಂದರೆ ಬಜೆಟ್ ಕೊರತೆ ಜಾಸ್ತಿ ಇದ್ದರೆ ಅದು ಯಾವಾಗಲೂ ಹಣದುಬ್ಬರಕ್ಕೆ ನಾಂದಿಯನ್ನು ಹಾಕಿದ ಹಾಗೆ. ಹಣದುಬ್ಬರ ಕಡಿಮೆ ಮಾಡಬೇಕೆಂಬ ಸದುದ್ದೇಶದಿಂದ ಕೊರತೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿದ್ದೇವೆ. ಈ ವಿಚಾರವನ್ನು ಅನೇಕ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಯಾವ ರಾಜ್ಯದ ಬಜೆಟನ್ನು ತೆಗೆದುಕೊಂಡು ನೋಡಿದರೂ ಎಲ್ಲ ರಾಜ್ಯಗಳಲ್ಲಿಯೂ ಈ ರೀತಿಯ ಕೊರತೆಯನ್ನು ಬಹಳ ಮಟ್ಟಿಗೆ ಜಾಸ್ತಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಕೂಡ ಹಿಂದೆ ಕೊರತೆ ಜಾಸ್ತಿ ಇತ್ತು. ಈ ಬಗ್ಗೆ ಅಂಕಿಅಂಶಗಳನ್ನು ಕೊಡುವುದಾದರೆ ೧೯೮೭–೮೮ರಲ್ಲಿ ೧೪೭.೯೫ ಕೋಟಿ ಕೊರತೆ ಇತ್ತು. ೧೯೮೮–೮೯ರಲ್ಲಿ ೩೨೭.೮೮ ಕೋಟಿ ಕೊರತೆ ಇತ್ತು. ೧೯೮೯/೯೦ ರಲ್ಲಿ ೧೬೭.೮೯ ಕೋಟಿ ಕೊರತೆ ಇತ್ತು. ಈ ರೀತಿ ಬಜೆಟನ್ನು ಮಂಡಿಸಿರ ತಕ್ಕದ್ದು ರಾಜ್ಯ ಸರ್ಕಾರವಾಗಲೀ ಅಥವಾ ಮತ್ತೆ ಯಾವುದೇ ಸರ್ಕಾರವಾಗಲೀ ಹಣಕಾಸಿನ ಬಗ್ಗೆ ಡಿಸಿಪ್ಲಿನ್ ಇರಬೇಕು ಇಲ್ಲದಿದ್ದರೆ ಈಗ ನಾನು ಏನು ಹೇಳುತ್ತೇನೆ ಅದಕ್ಕೆ ವಿರುದ್ಧವಾಗಿ ಹೋದಂತಾಗುತ್ತದೆ. ಈ ಒಂದು ಕೊರತೆ ಬಜೆಟ್ಟನ್ನು ಮಂಡನೆ ಮಾಡಿ ಖರ್ಚಿಗೆ ಹಣ ಇಲ್ಲದೆ ಓವರ್ ಡ್ರಾಫ್ಟ್‌ಗೆ ಹೋದರು. ಅನೇಕಸಾರಿ ಈ ರಾಷ್ಟ್ರದಲ್ಲಿ ಓವರ್ ಡ್ರಾಫ್ಟ್ ತೆಗೆದುಕೊಳ್ಳುತ್ತಾರೆ ಪ್ರತಿ ಸಾರಿಯೂ ಕೇಂದ್ರ ಸರ್ಕಾರದವರು ಏನು ಮಾಡುತ್ತಿದ್ದರೆಂದರೆ ಓವರ್ ಡ್ರಾಫ್ಟ್ ಆದಾಗಲೆಲ್ಲ ಅದನ್ನು ಲೋನ್ ಎಂದು ಟ್ರೀಟ್ ಮಾಡಿ ರಾಜ್ಯಸರ್ಕಾರಕ್ಕೆ ಕೊಡುತ್ತಾ ಬಂದರು. ಇದರಿಂದ ಫೈನಾನ್ಷಿಯಲ್ ಇನ್‌ಡಿಸಿಪ್ಲಿನ್‌ಗೆ ಪ್ರಿಮಿಯಂ ಕೊಟ್ಟಂತಾಗಿದೆ ಎಂದು ತೋರಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಹಣ ಸಹಾಯ ಬರಬಹುದು ಎಂಬ ದೃಷ್ಟಿಯಿಂದ ಎಲ್ಲರೂ ಕೊರತೆ ಬಜೆಟ್ ಪ್ರಸೆಂಟ್ ಮಾಡುವುದಕ್ಕೆ ಹೋದರು. ಇದು ಕೇಂದ್ರ ಬಜೆಟ್‌ನಲ್ಲಿ ರಿಫ್ಲೆಕ್ಟ್ ಆಗುತ್ತದೆ. ಕೇಂದ್ರ ಬಜೆಟ್‌ನಲ್ಲಿ ಈ ಸಾಲಿನ ಕೊರತೆ ನೋಡಿದರೆ ಎಷ್ಟಾಗಿದೆ ಎಂದರೆ ೧೯೮೫–೮೬ರಲ್ಲಿ ೯೯೩೭ ಕೋಟಿ ರೂಪಾಯಿ ಕೊರತೆಯಾಗಿದೆ. ಕೇಂದ್ರ ಸರ್ಕಾರದವರು ರಿಜರ್ವ್ ಬ್ಯಾಂಕಿನ ಫಂಡ್ ಅಂದರೆ ನೋಟ್‌ಗಳನ್ನು ಪ್ರಿಂಟ್ ಮಾಡಿಸಿ ೬೧೯೦ ಕೋಟಿ ಕೊಟ್ಟಿದ್ದಾರೆ. ೧೯೮೬–೮೭ರಲ್ಲಿ ೮೨೬೧ ಕೋಟಿ ಕೊರತೆಯಾಗಿದ್ದು ಕೇಂದ್ರ ಸರ್ಕಾರದವರು ರಿಜರ್ವ್ ಬ್ಯಾಂಕಿನ ಫಂಡ್ ರೂಪದಲ್ಲಿ ೭೯೯೧ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ೧೯೮೭–೮೮ರಲ್ಲಿ ೫೮೬೧ ಕೋಟಿ ರೂಪಾಯಿ ಕೊರತೆಯಾಗಿದ್ದು ಕೇಂದ್ರ ಸರ್ಕಾರದವರು ರಿಜರ್ವ್ ಬ್ಯಾಂಕ್ ಫಂಡ್‌ನಿಂದ ೬೧೧೯ ಕೋಟಿ ಕೊಟ್ಟಿದ್ದಾರೆ. ೧೯೮೮–೮೯ರಲ್ಲಿ ೫೬೪೨ ಕೋಟಿ ರೂಪಾಯಿ ಕೊರತೆ ಇದ್ದು ೬೫೦೩ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ರಿಜರ್ವ್ ಬ್ಯಾಂಕ್ ಫಂಡ್‌ನಿಂದ ಕೊಟ್ಟಿದ್ದಾರೆ. ೧೯೮೯–೯೦ ೧೧ ೭೫೦ ಕೋಟಿ ಕೊರತೆ ಇದ್ದು ರಿಜರ್ವ್ ಬ್ಯಾಂಕ್‌ನವರು ಕೊಟ್ಟಿರುವುದು ೧೪.೩೦೦ ಕೋಟಿ ರೂಪಾಯಿಗಳು ೯೦–೯೧ ಸಾಲಿನಲ್ಲಿ ೭೨೦೦ ಕೋಟಿ ಡೆಫಿಸಿಟ್ ಬಜೆಟ್ ತೋರಿಸಿದ್ದಾರೆ. ಈ ರೀತಿ ಕ್ರೆಡಿಟ್ ಕೊಟ್ಟು ಡೆಫಿಸಿಟ್ ಬಜೆಟ್ ಮಾಡುತ್ತಾ, ಮಾಡುತ್ತಾ ಹೋಗಿ ಈ ಡೆಫಿಸಿಟ್ ಫೈನಾನ್ಷಿಯಲ್ ಬಜೆಟ್ ಕನ್ವರ್ಟ್ ಮಾಡುತ್ತಾ ಹೋದರೆ ಈ ರಾಷ್ಟ್ರದಲ್ಲಿ ಹಣದುಬ್ಬರ ಜಾಸ್ತಿಯಾಗಿ ಜನಗಳ ಜೀವನ ಬಹಳ ಮಟ್ಟಿಗೆ ಅಸ್ತವ್ಯಸ್ಥವಾಗುತ್ತದೆ.

The cost of living goes up and Standard of living comes down. ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಈ ಸಾರಿ ನಾನು ಬಜೆಟ್ ಮಂಡಿಸುವಂಥ ಕಾಲದಲ್ಲಿ ಕೇವಲ ೫೪ ಕೋಟಿ ರೂಪಾಯಿ ಕೊರತೆ ಬಜೆಟ್ ಇಟ್ಟಿದ್ದೇನೆ. ಇದರಿಂದ ನನ್ನ ಬಜೆಟ್ ಸರ್‌ಪ್ಲಸ್ ಆಗುತ್ತದೆ. ಟ್ಯಾಡಿ ಸೇಲ್ಸ್ ಬ್ಯಾನ್ ಮಾಡಿದ್ದರಿಂದ ೬೦ ಕೋಟಿ ಹೋಯಿತು. ೧೧೨೦ ಕೋಟಿ ಪ್ಲಾನ್ ಇದ್ದುದನ್ನು ೨೫ ಕೋಟಿ ಜಾಸ್ತಿ ಮಾಡಿ ೧೧೪೫ ಕೋಟಿ ಮಾಡಿದ್ದರಿಂದ ಅಲ್ಲಿ ೨೫ ಕೋಟಿ ಹೋಯಿತು. ಅದು ಇಲ್ಲದೇ ಹೋಗಿದ್ದರೆ, ನಮ್ಮ ಬಜೆಟ್ ಸರ್‌ಪ್ಲಸ್ ಬಜೆಟ್ ಆಗುತ್ತಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಈ ಬಜೆಟ್ ನಲ್ಲಿ ಯಾವ ವಿಧವಾದಂಥ ಪಾಲಿಸಿ ಮ್ಯಾಟರ್ ಇಲ್ಲ ಇದು ರೈತರ ವಿರೋಧಿ ಬಜೆಟ್ ಇದರಲ್ಲಿ ವೀಕರ್ ಸೆಕ್ಷನ್‌ಗೆ ಏನು ಇಲ್ಲವೆಂದು ಹೇಳಿದರು, ನಾನು ಅವರು ಹೇಳುವಂಥ ವಾದವನ್ನು ಒಪ್ಪತಕ್ಕವನಲ್ಲ. ನನ್ನ ಬಜೆಟ್ ಭಾಷಣದಲ್ಲಿ ಫೈನಾನ್ಷಿಯಲ್ ಪಾಲಿಸಿ ಏನು ಎನ್ನುವುದನ್ನು ಹೇಳಿದ್ದೇನೆ. In para 17, 18, 19 and 20 of the budget speech., I read para 20 now.

> So in essence, our financial policy should aim at avoiding revenue deficit, containing non-essential plan and non-plan expenditure, thereby maximising capital investment and resorting to external and local borrowing selectively with emphasis on a proper evaluation of the costs and benefits. To this end, we shall reorient our policies and programmes."

We have given special importance for irrigation and power generation. ಬಜೆಟ್ ಭಾಷಣದಲ್ಲಿ ಹಣಕಾಸಿನ ಪಾಲಿಸಿ ಬಗ್ಗೆ ನಾನಾ ರೀತಿಯೊಳಗೆ ಹೇಳಿದ್ದೇನೆ. ಆದ್ದರಿಂದ ಇಲ್ಲ ಎಂದು ಅವರು ಹೇಳತಕ್ಕಂಥಾದ್ದು ಸತ್ಯಕ್ಕೆ ದೂರವಾದಂಥ ಮಾತು. ಮತ್ತೆ ರೈತರ ಬಗ್ಗೆ ಏನು ಹೇಳಿಲ್ಲವೆಂದು ಅವರು ಏನು ವಾದ ಮಾಡಿದರು ಅದು ಕೂಡ ಸತ್ಯಾಂಶಕ್ಕೆ ದೂರವಾದುದು. ಇರಿಗೇಷನ್‌ಗೆ ೨೧೦ ಕೋಟಿ ಅಲ್ಲ. ೩೨೨.೩೮ ಕೋಟಿ ಕೊಟ್ಟಿರ ತಕ್ಕಂಥಾದ್ದು ಇದು ರೈತರ ಭೂಮಿಗೆ ನೀರು ಕೊಡತಕ್ಕ ಸದುದ್ದೇಶದಿಂದ ಅಲ್ಲವೇ? ನಮ್ಮ ದೇಶದಲ್ಲಿ ರೈತರು ಒಣ ಬೇಸಾಯ ಮಾಡುತ್ತಾರೆ. ಮಳೆಯನ್ನೇ ನಂಬಿಕೊಂಡು ವ್ಯವಸಾಯ ಮಾಡಬೇಕು. ಇದು ಬಹಳ ಕಷ್ಟಕರವಾದ ಕಸಬು, ರೈತನಿಗೆ ಅನುಕೂಲ ಮಾಡಿ ಕೊಟ್ಟಷ್ಟೂ ಅವರು ರಾಷ್ಟ್ರಕ್ಕೆ ಹೆಚ್ಚು ಆಹಾರವನ್ನು ಬೆಳೆದುಕೊಡುತ್ತಾರೆ. ಇದಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ೩೨೨ ಕೋಟಿಯನ್ನು ಇರಿಗೇಷನ್‌ಗೆ ಇಟ್ಟಿದ್ದೇವೆ. ನಾನು ಕೇಳುತ್ತೇನೆ, ಇದು ರೈತರಿಗೆ ಉಪಯುಕ್ತವಾದ ಕಾರ್ಯಕ್ರಮವಲ್ಲವೇ ಎಂದು. ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ತೆಗೆದುಕೊಂಡಿರತಕ್ಕ ಸಾಲದ ಮೇಲೆ ಬಡ್ಡಿ ರಿಯಾಯಿತಿ ತೋರಿಸುವ ಉದ್ದೇಶ ಇದೆ ನನ್ನ ಮನಸ್ಸಿನಲ್ಲಿರುವುದು ಐದೂವರೆಯಿಂದ ಆರು ಪರ್ಸೆಂಟ್ ಬಡ್ಡಿ ರಿಯಾಯಿತಿ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಇವರು ಕೊಟ್ಟಿದ್ದು ಕೇವಲ ೪ ಪರ್ಸೆಂಟ್ ಮಾತ್ರ, ಕ್ರಾಪ್ ಲೋನ್ ತೆಗೆದುಕೊಂಡಿರುವಂಥ ರೈತರುಗಳಿಗೆ ಐದೂವರೆಯಿಂದ ೬ ಪರ್ಸೆಂಟ್ ಬಡ್ಡಿ ರಿಯಾಯಿತಿ ಕೊಡುತ್ತೇವೆ. ಇದು ಕೂಡ ರೈತರಿಗೆ ಅನುಕೂಲವಾಗತಕ್ಕ ಕಾರ್ಯಕ್ರಮವಲ್ಲವೇ? ತಮಗೆಲ್ಲಾ ಗೊತ್ತಿರುವಂತೆ ಹಳ್ಳಿಗಳಲ್ಲಿ ಸ್ಕೂಲ್ ಬಿಲ್ಡಿಂಗ್ ಅಭಾವ ಬಹಳ ಮಟ್ಟಿಗೆ ಇದೆ. ರೈತರ ಮಕ್ಕಳು, ಇತರೆಯವರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಶಾಲಾ ಕಟ್ಟಡಗಳಿಗಾಗಿ ೧೦೦ ಕೋಟಿ ಇಟ್ಟಿದ್ದೇವೆ, ಇದು ರೈತರ ಮಕ್ಕಳು ಓದತಕ್ಕ ಶಾಲೆಗೋಸ್ಕರ ಅಲ್ಲವೆ? ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಹೆರಿಗೆ ವಾರ್ಡ್‌ಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದು ರೈತರ ಮನೆಯ ಹೆಣ್ಣು ಮಕ್ಕಳಿಗೆ ಉಪಯುಕ್ತವಾದ ಕಾರ್ಯಕ್ರಮವಲ್ಲವೆ, ಇದರ ಜೊತೆಗೆ ಹಳ್ಳಿ ಪ್ರದೇಶದಲ್ಲಿ ಶೌಚಾಲಯಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ, ಆರೋಗ್ಯ ದೃಷ್ಟಿಯಿಂದ ಹಳ್ಳಿಯ ಜನರಿಗೆ ಅದರಲ್ಲಿಯೂ ಹೆಣ್ಣು ಮಕ್ಕಳಿಗೆ ಅನುಕೂಲವಾಗುವ ಸದುದ್ದೇಶದಿಂದ ಒಂದು ಲಕ್ಷ ಶೌಚಾಲಯಗಳನ್ನು ಕಟ್ಟುವ ಏರ್ಪಾಡು ಮಾಡಿರತಕ್ಕದ್ದು ಹಳ್ಳಿಯಲ್ಲಿರತಕ್ಕ ರೈತರ ಕುಟುಂಬಗಳಿಗೆ ಅನುಕೂಲವಾಗುವುದಿಲ್ಲವೇ? ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಅದು ಸರಿಯಿಲ್ಲವೆಂದು ಹೇಳುತ್ತೇನೆ. ಇನ್ನು ವೀಕರ್‌ಸೆಕ್ಷನ್ ಬಗ್ಗೆ ಏನೂ ಹೇಳಿಲ್ಲ ಎಂದು ಹೇಳಿದರು. ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗಗಳ ಹಾಸ್ಟಲ್ ನಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಚಾರ್ಜಸ್ ನೂರು ರೂಪಾಯಿ ಇದ್ದುದನ್ನು ನೂರೈವತ್ತು ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ನೂರೈವತ್ತು ರೂಪಾಯಿ ಇದ್ದುದನ್ನು ಇನ್ನೂರು ರೂಪಾಯಿಗೆ ಹೆಚ್ಚು ಮಾಡಿದ್ದೇವೆ. ಇನ್ನು ಜವಾಹರ್ ರೋಜ್‌ಗಾರ್ ಯೋಜನೆ, ಹಳ್ಳಿಯಲ್ಲಿರತಕ್ಕ ಅವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಕೊಡಲು ಜವಾಹರ್ ರೋಜ್‌ಗಾರ್ ಯೋಜನೆಯನ್ನು ನಮ್ಮ ಸರ್ಕಾರ ಅಳವಡಿಸಿಕೊಂಡಿದೆ. ಇನ್ನು ರೂರಲ್ ಹೌಸಿಂಗ್ ಸ್ಕೀಮ್ ಹಳ್ಳಿಯಲ್ಲಿ ಬಡವರಿಗೋಸ್ಕರ ಮನೆಗಳನ್ನು ಕಟ್ಟತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದು ಬಡವರಿಗೆ ಅನುಕೂಲ ಅಲ್ಲವೆ? ಇನ್ನು ಫುಡ್‌ಗ್ರೈನ್ಸ್ ಸಬ್ಸಿಡಿಯನ್ನು ೪೪ ಕೋಟಿ ರೂಪಾಯಿವರೆಗೆ ಕೊಡುತ್ತಿದ್ದೇವೆ. ೩೦ ಲಕ್ಷ ಗ್ರೀನ್‌ಕಾರ್ಡ್ ಹೋಲ್ಡರ್ಸ್‌ಗೆ ೪೪ ಕೋಟಿ ರೂಪಾಯಿ ಸಬ್ಸಿಡಿ ಹಣವನ್ನು ಕೊಡುತ್ತಿದ್ದೇವೆ. ಇದು ವೀಕರ್‌ಸೆಕ್ಷನ್‌ಗೆ ಅನುಕೂಲ ಆಗತಕ್ಕ ಯೋಜನೆ ಅಲ್ಲವೆ? ಮಾನ್ಯ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಿ ಹೇಳಬೇಕು. ಬಹುಶ: ಇದನ್ನು ಮಾನ್ಯ ಸದಸ್ಯರು ಕರೆಕ್ಟಾಗಿ ಓದಿದ್ದರೆ, ಈ ಒಂದು ಸನ್ನಿವೇಶ ಅವರು ಆಡಿದ ಮಾತು ಅವರ ಬಾಯಿಂದ ಬರುತ್ತಾ ಇರಲಿಲ್ಲ, ಈ ಸಂದರ್ಭದಲ್ಲಿ ಒಂದು ಜೋಕ್ ನನಗೆ ಜ್ಞಾಪಕಕ್ಕೆ ಬರುತ್ತದೆ. There was one Sardarji who was a very intelligent person, highly cultured and hospitable. He lost his thinking power. So, somebody suggested that he should go to a neuro surgeon and consult him. He went to a neuro surgeon The Doctor advised him to under go mental operation. So, he fixed a date also and said within 45 days he should come back and undergo a brain operation. On the appointed day Sardarji went back to the doctor and said. "Well doctor, thank you very much for your diagnosing, but now I do not need any mental operation. Doctor

said, why? Sardarji replied. "I have been elected as a leader of the opposition". So I do not need.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಪ್ಪುವುದಾ ನನ್ನದು ಒಂದು ಜೋಕು ಇದೆ, ಅದನ್ನು ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಯೀಲ್ಡ್ ಆಗಿದ್ದಾರಾ?

ಶ್ರೀ ಎಂ. ರಾಜಶೇಖರಮೂರ್ತಿ.—ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ದಯಮಾಡಿ ಅವಕಾಶ ಕೊಡಿ.

ಶ್ರೀ ಎಂ. ರಾಜಶೇಖರಮೂರ್ತಿ.—ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ.

ಸಭಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ಯೀಲ್ಡ್ ಆಗಿಲ್ಲ. ನಾನು ಅವರನ್ನು ನಿಮ್ಮ ಪರವಾಗಿ ಕೂರಿಸಲಿಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಒಂದೇ ಒಂದು ನಿಮಿಷ ಹೇಳಿಬಿಡುತ್ತೇನೆ. ಮಾನ್ಯ ಮಂತ್ರಿಗಳು ಒಂದು ನಿಮಿಷ ಯೀಲ್ಡ್ ಆಗಬೇಕು. ಸ್ವಾಮಿ, ಕರ್ನಾಟಕದವರು ಒಬ್ಬರು ವಿದೇಶದ ಒಂದು ಆಸ್ಪತ್ರೆಗೆ ಮೆದುಳಿನ ಆಪರೇಷನ್‌ಗೋಸ್ಕರ ಹೋಗಿ ಅಲ್ಲಿಯ ಆಸ್ಪತ್ರೆಗೆ ಸೇರಿದರು. ಮೆದುಳನ್ನು ತೆಗೆದು ಚೆಕ್ ಮಾಡಲಿಕ್ಕೆ ಒಬ್ಬ ವೈದ್ಯ ಪ್ರಾರಂಭ ಮಾಡಿ ಅದನ್ನು ತೆಗೆದಿಟ್ಟ. ಅಷ್ಟರಲ್ಲಿ ಆ ವೈದ್ಯನಿಗೆ ಬೇರೆ ಫೋನ್ ಕರೆ ಬಂತು ಅವರು ಫೋನ್ ನೋಡಲಿಕ್ಕೆ ಹೋದರು. ಇನ್ನೊಬ್ಬ ವೈದ್ಯರು ಬಂದು ಆ ಮೆದುಳನ್ನು ಸೇರಿಸದೆ ಹಾಗೆಯೇ ಬಿಟ್ಟು ಇವರ ತಲೆ ಬುರುಡೆಯನ್ನು ಸೇರಿಸಿಬಿಟ್ಟರು. ಅಷ್ಟರಲ್ಲಿ ಮೊದಲು ಆಪರೇಷನ್ ಮಾಡಿದ್ದ ವೈದ್ಯರು ಬಂದು ನೋಡಿ ಏನು ಈ ಪರಿಸ್ಥಿತಿ ಆಗಿದೆ ಅಂದಾಗ ಇನ್ನೊಬ್ಬ ವೈದ್ಯರು ಏನೂ ತೊಂದರೆಪಡಬೇಕಾಗಿಲ್ಲ. ಮೆದುಳು ಇಲ್ಲದೇ ಹೋದರೂ ಕರ್ನಾಟಕ ಸರ್ಕಾರದಲ್ಲಿ ಮಂತ್ರಿಗಳು ಆಗಬಹುದು ಎಂದು ಹೇಳಿದರಂತೆ.

SRI M. RAJASHEKHARA MURTHY.—I do not want to join controvarsy with that person. ಮಾನ್ಯ ವಿರೋಧಪಕ್ಷದನಾಯಕರು ಸಮವಸ್ತ್ರ ವಿತರಣೆಯ ಬಗ್ಗೆ ಟೆಕ್ಸ್ಟ್‌ಬುಕ್ ಫ್ರೀ ಸಪ್ಲೈ ಮಾಡತಕ್ಕ ಬಗ್ಗೆ, ಸೀರೆ, ಧೋತಿ ಯೋಜನೆಯ ಬಗ್ಗೆ ಮಾತನಾಡುತ್ತಾ ಸಮವಸ್ತ್ರ ಸಮಾನತೆಯ ಸಂಕೇತ. ಈ ಸಮವಸ್ತ್ರ ವಿತರಣೆ ಮಾಡತಕ್ಕದ್ದು ನಿಲ್ಲಿಸಿದರೆ ಸಮಾನತೆಯ ಭಾವನೆಗೆ ಧಕ್ಕೆ ಬಂದೀತು ಎಂದು ಹೇಳಿದರು. ಆದರೆ ಇಲ್ಲಿ ಆಗತಕ್ಕಂತಹ ಅವ್ಯವಹಾರಗಳು ಏನಿವೆ ಮತ್ತು ಸರಿಯಾದ ಗುಣಮಟ್ಟದ ವಸ್ತ್ರಗಳು ವಿತರಣೆಯಾಗದೇ ಇದ್ದು ಮತ್ತು ಆ ವಿತರಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಬಹಳ ಮಟ್ಟಿಗೆ ವಿಳಂಬವಾಗುತ್ತಿತ್ತು ಈ ಕಾರಣಗಳಿಗೋಸ್ಕರ ಇದನ್ನು ನಿಲ್ಲಿಸಿದ್ದು ಸರಿ ಎಂದು ನಮ್ಮ ಪಕ್ಷದ ಅನೇಕ ಸ್ನೇಹಿತರುಗಳು ಈ ಕಡೆಯಿಂದ ವಾದ ಮಾಡಿದರು. ವಿರೋಧ ಪಕ್ಷದ ಸದಸ್ಯರು ಮಾತನಾಡಿದ ವಾದ ಮಾಡಿದ ದೃಷ್ಟಿಯಿಂದಲೂ ಕೂಡ ನಾನು ಇದನ್ನು ನಿಲ್ಲಿಸಿಲ್ಲ ಅಥವಾ ನಮ್ಮ ಪಕ್ಷದ ಕಡೆಯಿಂದ ವಾದ ಮಾಡಿದಂತಹ ಜನ ಏನು ಹೇಳಿದರು ಆ ದೃಷ್ಟಿಯಿಂದಲೂ ಕೂಡ ಈ ಸ್ಕೀಮನ್ನು ನಾನು ನಿಲ್ಲಿಸಿಲ್ಲ. ಇದನ್ನು ನಿಲ್ಲಿಸಿದ ಮೂಲ ಉದ್ದೇಶವೇನೆಂದರೆ, ಯಾವುದೇ ರಾಜಕೀಯ ಪಕ್ಷವಾಗಲಿ ಸರಕಾರದ ಹಣವನ್ನು ತಮ್ಮ ಪಕ್ಷದ ಸ್ವಾರ್ಥತೆಗಾಗಿ ಇಲ್ಲವೇ ಸ್ಟಂಟ್‌ಗಾಗಿ ಬಳಸತಕ್ಕಂಥಾದ್ದು ಏನು ಇದೆ ಅದು ನನ್ನ ದೃಷ್ಟಿಯಿಂದ ಯೋಗ್ಯವಾದ ಮಾರ್ಗ ಅಲ್ಲ. They are all only ballot-box oriented schemes. ಇದರಲ್ಲಿ ಯಾವ ನೈತಿಕ ವ್ಯವಹಾರ ಕೂಡ ಇಲ್ಲ. ಆ ದೃಷ್ಟಿಯಿಂದ ನಾನು ನಿಲ್ಲಿಸಿದೆನೇ ಹೊರತು ಮತ್ತೆ ಬೇರೇನೂ ಅಲ್ಲ. ಸರಕಾರದ ಹಣಕಾಸಿನ ಸಾಧಕಬಾಧಕಗಳನ್ನು ನೋಡದೆ ಈ ತರಹದ ಸ್ಕೀಮ್‌ಗಳನ್ನು ಜಾರಿಗೆ ತಂದು ಸರಕಾರದ ಹಣವನ್ನು ಪೋಲು ಮಾಡತಕ್ಕಂಥಾದ್ದು ರಾಜಕೀಯ ಭ್ರಷ್ಟಾಚಾರ ಆಗುತ್ತದೆ. ಇಂತಹ ರಾಜಕೀಯ ಭ್ರಷ್ಟಾಚಾರಕ್ಕೆ ಬದಲಾಗಿ ರಾಜಕೀಯ ಸನ್ಯಾಸವೇ ಶ್ರೇಷ್ಠಕರವಾದುದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಬ್ಯಾಟಲ್ ಆಫ್ ಇರಿಗೇಷನ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಕೂಡ ಹೇಳಿದರು. ಈ ಬಾಬಿಗೆ ಬಹಳ ಮಟ್ಟಿಗೆ ಕಡಿಮೆ ಹಣವನ್ನು ಇಟ್ಟಿದ್ದಾರೆ. ಕಾವೇರಿ ಕಣಿವೆ ಬಗ್ಗೆ ಏನೇನು ಯೋಜನೆಗಳನ್ನು ತೆಗೆದುಕೊಂಡಿದ್ದೇವೆ ಅದರ ಬಗ್ಗೆ ಒಂದು ಮಾತನ್ನೂ ಕೂಡ ಆಡಿಲ್ಲ ಎಂದು. ಇದರಲ್ಲಿ ಇರಿಗೇಷನ್‌ಗೆ ಏನು ಇಟ್ಟಿದ್ದೇವೆಂದು ತೋರಿಸಿದ್ದೇವೆ ಇದು ಕೇವಲ ಪ್ಲಾನ್‌ನಲ್ಲಿ ಹಾಕಿರತಕ್ಕಂತಹ ಯೋಜನೆಗಳಿಗೆ ಮಾತ್ರ. ಇದಕ್ಕೆ ೨೧೨.೩೩ ಕೋಟಿಯಾಗುತ್ತದೆ ಕಾವೇರಿ ಕಣಿವೆಗೆ ಒದಗಿಸಿರತಕ್ಕಂಥಾದ್ದು ಪ್ಲಾನ್‌ನಲ್ಲಿ ಬರುವುದಿಲ್ಲ, ನಾನ್ ಪ್ಲಾನ್‌ನಲ್ಲಿ ಬರುತ್ತದೆ. ೧೧೦ ಕೋಟಿ ರೂಪಾಯಿಗಳನ್ನು ಇದಕ್ಕೆ ಒದಗಿಸಿದ್ದೇವೆ, ಒಟ್ಟು ೩೨೨.೩೩

ಲಕ್ಷದಷ್ಟು ಹಣವನ್ನು ಇದಕ್ಕೆ ಒದಗಿಸಿದ್ದೇವೆ. ಹಿಂದೆಂದೂ ಯಾವ ಸರಕಾರವೂ ಕೂಡ ಇಷ್ಟು ಹಣವನ್ನು ಒದಗಿಸಿರಲಿಲ್ಲ. ಹಿಂದೆ ಅವರ ಸರಕಾರವಿದ್ದಾಗ ಇದಕ್ಕೆ ೩೦೦ ಕೋಟಿ ರೂಪಾಯಿ ಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹಠ ಹಿಡಿದರು. ನಂತರ ಕೊನೆಗೆ ಜಗಳವಾಗಿ ಅಧಿಕಾರ ಕಳೆದುಕೊಂಡು ಮನೆಗೆ ಹೋದರು. ಇಷ್ಟೊಂದು ಹಣವನ್ನು ಒದಗಿಸಲಿಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಆ ಕೆಲಸವನ್ನು ನಾನು ಮಾಡಿ ತೋರಿಸಿದ್ದೇನೆ. ೩೨೦ ಕೋಟಿ ರೂಪಾಯಿಯನ್ನು ನೀರಾವರಿಗೆ ಒದಗಿಸಿಕೊಟ್ಟಿದ್ದೇನೆ. ಇರಿಗೇಷನ್‌ಗೆ ಇಷ್ಟು ಹಣವನ್ನು ಒದಗಿಸುವುದರ ಜೊತೆಗೆ ಲಿಫ್ಟ್ ಇರಿಗೇಷನ್ ಅನ್ನು ಕೂಡ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೇನೆ. ರೈತರ ದೃಷ್ಟಿಯಿಂದ ಇದು ಬಹಳ ಮುಖ್ಯವಾದಂತಹ ಯೋಜನೆಯಾಗಿದೆ. ಸೊಸೈಟಿ ಮಾಡಿಕೊಂಡು ಲಿಫ್ಟ್ ಇರಿಗೇಷನ್ ಕೆಲಸವನ್ನು ಆ ಮೂಲಕ ಮಾಡಬೇಕೆಂದು ಅವರು ವಿಚಾರ ಮಾಡಿದ್ದರು. ಆದರೆ ಆಗ ಅನೇಕ ಅಡ್ಡಿ ಆತಂಕಗಳು ಬಂದವು. ಆ ದೃಷ್ಟಿಯಿಂದ ಸರಕಾರವೇ ನೇರವಾಗಿ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಬೇಕೆಂದು ಯೋಚನೆ ಮಾಡಿ ಅದನ್ನು ಕಾರ್ಯಗತ ಮಾಡಲಿಕ್ಕೆ ಈಗಾಗಲೇ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಏನು ಇದೆ ಅವರಿಗೆ ವಹಿಸಿದ್ದೇವೆ ಇದಕ್ಕಾಗಿ ಹಣವನ್ನು ಒದಗಿಸುವುದಕ್ಕೆ ಸಿದ್ಧವಾಗಿದ್ದೇವೆ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಕೇವಲ ೪-೫ ತಿಂಗಳಲ್ಲಿ ಒಂದೊಂದು ಪ್ರಾಜೆಕ್ಟ್ ಅನ್ನು ಪೂರ್ತಿ ಮಾಡಬಹುದು. ಎಲ್ಲೆಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಂತಹ ಕಡೆಗಳಲ್ಲಿ ನದಿ ದಡದಲ್ಲಿ ಲಿಫ್ಟ್ ಇರಿಗೇಷನ್ ಅನ್ನು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಇದು ಬಹಳ ಅತ್ಯುತ್ತಮವಾದುದು ಮತ್ತು ರೈತರಿಗೆ ಬೇಕಾದಂತಹ ಯೋಜನೆಯಾಗಿದೆ, ಇದನ್ನು ನಿಷ್ಠೆಯಿಂದ ಜಾರಿಗೆ ತರಲಿಕ್ಕೆ ಪ್ರಯತ್ನ ಪಡುತ್ತೇನೆ. ಮಾನ್ಯ ಸದಸ್ಯರುಗಳು ಇದರ ಬಗ್ಗೆ ಎಷ್ಟು ಸಹಕಾರವನ್ನು ಕೊಡುತ್ತಾರೆ ಅದನ್ನು ಉಪಯೋಗಿಸಿಕೊಂಡು ಇದಕ್ಕೆ ಬೇಕಾದಂತಹ ಹಣವನ್ನು ಖರ್ಚು ಮಾಡಿ ಈ ಕಾರ್ಯವನ್ನು ಕೈಗೂಡಿಸಲಿಕ್ಕೆ ಪ್ರಯತ್ನ ಪಡುತ್ತೇನೆ. ಇನ್ನು ಅನೇಕ ಸದಸ್ಯರು ಮಾತನಾಡುತ್ತಾ ಪವರ್ ಬಗ್ಗೆ ಹೇಳಿದರು.

ಶ್ರೀ ಡಿ. ಬಿ. ಚಂದ್ರೇಗೌಡ.—ಕಾವೇರಿ ಯೋಜನೆಗೆ ಪ್ರತಿವರ್ಷ ಬಜೆಟ್‌ನಲ್ಲಿ ಇಂಡಿಕೇಟ್ ಮಾಡುತ್ತಿದ್ದರು, ಆದರೆ ಈ ವರ್ಷ ಇಂಡಿಕೇಟ್ ಮಾಡಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ನಿಮಗೆ ಕೊಟ್ಟಿರತಕ್ಕ ಬಜೆಟ್ ಏನಿದೆ ಅದು ಕೇವಲ ಪ್ಲಾನ್ ಸ್ಕೀಮಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಅದರಲ್ಲಿ ಇದನ್ನು ಸೇರಿಸಲಿಲ್ಲ. ಇದನ್ನು ಪ್ರತ್ಯೇಕವಾಗಿ ಇಂಡಿಕೇಟ್ ಮಾಡುತ್ತೇವೆ. ನಮ್ಮ ನೆರೆ ರಾಜ್ಯಗಳಲ್ಲಿ ಪವರ್‌ಗೆ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ, ಆದರೆ ನಮ್ಮ ರಾಜ್ಯದಲ್ಲಿ ಇದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಈ ಪವರ್‌ಗೋಸ್ಕರ ಅತ್ಯಂತ ಹೆಚ್ಚಿನ ಹಣವನ್ನು ನಾವು ಮೀಸಲಿಟ್ಟಿದ್ದೇವೆ. ಆದರೆ ನೀವು ಹೇಳುವ ದೃಷ್ಟಿಯಲ್ಲಿ ಅಥವಾ ನನ್ನ ದೃಷ್ಟಿಯಲ್ಲೇ ಹೇಳುವುದಾದರೂ ನಾವು ತೆಗೆದಿಟ್ಟಿರುವ ಹಣ ಸಾಲದು ಎಂದು ಹೇಳಬಯಸುತ್ತೇನೆ. ಏಕೆಂದರೆ ತಮಿಳುನಾಡಿನಲ್ಲಿ ಇದುವರೆಗೂ ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಒದಗಿಸುತ್ತಾ ಬಂದಿದ್ದರು. ಈಗ ಅದೆಲ್ಲಾ ಮುಗಿಯುತ್ತಾ ಬಂದಿದೆ, ಪ್ರಾಜೆಕ್ಟ್ ಕೆಲಸಗಳನ್ನೆಲ್ಲಾ ಮುಗಿಸಿದ್ದಾರೆ ಆದ್ದರಿಂದ ಈಗ ಅವರಲ್ಲಿರತಕ್ಕ ಹಣವನ್ನೆಲ್ಲಾ ಪವರ್‌ನ ಉತ್ಪಾದನೆಗೋಸ್ಕರ ಹೆಚ್ಚು ಹೆಚ್ಚು ಖರ್ಚು ಮಾಡುತ್ತಿದ್ದಾರೆ ಅದೇ ರೀತಿ ಆಂಧ್ರಪ್ರದೇಶದಲ್ಲಿ ಕೂಡ ಇರಿಗೇಷನ್‌ಗೋಸ್ಕರ ಹೆಚ್ಚು ಹೆಚ್ಚು ಹಣವನ್ನು ಇದುವರೆಗೂ ಖರ್ಚು ಮಾಡಿದ್ದಾರೆ. ಈಗ ಪವರ್‌ಗೆ ಹೆಚ್ಚು ಹಣವನ್ನು ಒದಗಿಸುತ್ತಿದ್ದಾರೆ. ಆದರೆ ನಾವು ಇನ್ನೂ ೧೦-೧೫ ವರ್ಷಕಾಲ ಈ ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ಇದನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಇರಿಗೇಷನ್ ಮತ್ತು ಪವರ್‌ಗೆ ಹೆಚ್ಚಿನ ಹಣವನ್ನು ಹೊರಗಿನಿಂದ ಸಾಲ ತಂದು ಆದರೂ ಆದಷ್ಟು ಬೇಗ ಈ ಕೆಲಸಗಳನ್ನು ಮುಗಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇದಕ್ಕಾಗಿ ನಾವು ಪತ್ರ ವ್ಯವಹಾರಗಳನ್ನೂ ಕೂಡ ಮಾಡಿದ್ದೇವೆ. ನಾವು ಈ ಹಣವನ್ನು ಔಟ್ ಸೈಡ್ ದಿ ಪ್ಲಾನ್ ಅಸಿಸ್ಟೆನ್ಸನ್ನು ಲೋನ್ ಎಂದು ಟ್ರೀಟ್ ಮಾಡಿ ತಂದು ಹಾಕಿದರೆ ಸಾಧ್ಯವಾಗುತ್ತದೆ. ಈ ಉದ್ದೇಶಕ್ಕಾಗಿಯೇ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ 'ದೆಹಲಿಗೆ ಹೋಗಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ಮಧುದಂಡವತೆಯವರನ್ನು ಭೇಟಿ ಮಾಡಿ ಈ ವಿಚಾರವನ್ನು ತಿಳಿಸಿದ್ದೇವೆ. ಎಕ್ಸ್‌ಟರ್ನಲ್ ಸೋರ್ಸಸ್‌ನಿಂದ ಬರತಕ್ಕ ಹಣವನ್ನು ಔಟ್‌ಸೈಡ್‌ದಿ ಪ್ಲಾನ್ ಅಸಿಸ್ಟೆನ್ಸನ್ನು ಲೋನ್ ಎಂದು ಟ್ರೀಟ್ ಮಾಡಿ ಕೊಟ್ಟರೆ ನಾವು ನಮ್ಮ ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಕೇಳಿಕೊಂಡಿದ್ದೇವೆ. ಅವರೂ ಕೂಡ ನಮಗೆ ಅನುಕೂಲಕರವಾಗಿಯೇ ಹೇಳಿದ್ದಾರೆ ಅಲ್ಲದೆ ಔಟ್ ಸೈಡ್ ದಿ ಪ್ಲಾನ್ ಅಸಿಸ್ಟೆನ್ಸ್ ರೂಪದಲ್ಲಿ ಹಣವನ್ನು ಒದಗಿಸುವುದಾಗಿ ಅವರೂ ಸಹ ಹೇಳಿದ್ದಾರೆ. ನಮ್ಮ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ೨೦೦೦ನೇ

ಇಸವಿಯೊಳಗಾಗಿ ಮುಗಿಸಬೇಕಾದರೆ ಕನಿಷ್ಟ ೩೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಸ್ಕಲೇಷನ್ ಕಾಸ್ಟನ್ನೂ ಲೆಕ್ಕ ಹಾಕಿದರೆ ಸುಮಾರು ೪೦೦೦ ಕೋಟಿ ಅಥವಾ ೪೫೦೦ ಕೋಟಿ ರೂಪಾಯಿಗಳಾಗಬಹುದು. ನಾವು ಪ್ರತಿವರ್ಷವೂ ೧೨೦ ಕೋಟಿ ರೂಪಾಯಿಗಳಂತೆ ಈ ಬಾಬಿಗೆ ಹಣವನ್ನು ಖರ್ಚು ಮಾಡುತ್ತಾ ಹೋದರೆ ಖಂಡಿತವಾಗಿಯೂ ೨೦೦೦ನೇ ಇಸವಿಯೊಳಗೆ ಇದನ್ನು ಪೂರ್ಣ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದಲೇ ನಾವು ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟ್‌ಗಳಿಗೋಸ್ಕರ ಎಕ್ಸಟರ್ನಲ್ ಸೋರ್ಸಸ್‌ನಿಂದ ಹಣವನ್ನು ತಂದು ಹಾಕಿ ಆದಷ್ಟು ಬೇಗ ಇದನ್ನು ಮುಗಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಇನ್ನು ಕೆಲವು ಮಾನ್ಯ ಸದಸ್ಯರು ೭ನೇ ಪಂಚವಾರ್ಷಿಕ ಯೋಜನೆಯ ೫ನೇ ವರ್ಷದಿಂದ ೧೦೫೦ ಕೋಟಿ ರೂಪಾಯಿ ಇಂಡಿಕೇಟ್ ಮಾಡಲಾಗಿತ್ತು. ಆದರೆ ಈಗ ಅದು ೮೭೦ ಕೋಟಿ ರೂಪಾಯಿಗೆ ಇಳಿದಿದೆ ಎಂದು ಹೇಳಿದರು. ಅವರು ಹೇಳಿದ್ದು ನಿಜ. ಇದಕ್ಕೆ ಕಾರಣರು ಯಾರು ಎಂದರೆ ನಾವಲ್ಲ. ಅವರೇ ಜವಾಬ್ದಾರರು. ಏಕೆಂದರೆ ಹಿಂದಿನ ಸರ್ಕಾರದವರು ೧೯೮೯ನೇ ಮಾರ್ಚ್ ೩೧ನೇ ತಾರೀಖಿನವರೆಗೆ ೧೩೦ ಕೋಟಿ ರೂಪಾಯಿಗಳ ಬಿಲ್ಲನ್ನು ಪಾವತಿ ಮಾಡಬೇಕಾದ್ದನ್ನು ಹಾಗೆಯೇ ಬಿಟ್ಟು ಹೋಗಿದ್ದರು. ಆ ಹಣವನ್ನು ನಾವು ಬಂದ ಮೇಲೆ ಪೇಮೆಂಟ್ ಮಾಡಬೇಕಾಗಿ ಬಂತು. ನಮ್ಮ ಸಂಪನ್ಮೂಲಗಳಿಂದ ೧೩೦ ಕೋಟಿ ರೂಪಾಯಿಗಳನ್ನು ಪೇಮೆಂಟ್ ಮಾಡಿದ್ದೇವೆ. There was impounded deposit in the Treasury. There was deposit belonging to various department to the tune of Rs. 160 crores. ಇದರ ಜೊತೆಗೆ, ಬೇರೆ ಇಲಾಖೆಗಳಿಂದ ತಂದಿದ್ದಂಥ ಹಣವನ್ನು ವಾಪಸ್ಸು ಕೊಡಬೇಕೆಂದು ಅವರು ಬಂದು ಒತ್ತಾಯ ಮಾಡಿದ್ದರಿಂದ ನಾವು ಅವರಿಗೆ ೧೬೦ ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಟ್ಟಿದ್ದೇವೆ. ಅಂದರೆ ಪೆಂಡಿಂಗ್ ಇದ್ದ ೧೩೦ ಕೋಟಿ ರೂಪಾಯಿಗಳ ಬಿಲ್‌ಗಳನ್ನು ಪೇಮೆಂಟ್ ಮಾಡಿದ್ದು ಹಾಗೂ ಬೇರೆ ಬೇರೆ ಇಲಾಖೆಗಳಿಗೆ ವಾಪಸ್ಸು ಕೊಟ್ಟ ಸಾಲ ೧೦೦ ಕೋಟಿ ರೂಪಾಯಿಗಳು ಇವೆರಡನ್ನೂ ಸೇರಿಸಿದರೆ ಒಟ್ಟು ೩೯೦ ಕೋಟಿ ರೂಪಾಯಿಗಳನ್ನು ನಾವು ನಮ್ಮ ಸಂಪನ್ಮೂಲದಿಂದ ಕೊಟ್ಟಂತೆ ಆಯಿತು. ಇದು ನಮ್ಮ ತಪ್ಪಿನಿಂದಾಗಿ ಆಗಿರತಕ್ಕದಲ್ಲ. ಹಿಂದಿನ ಸರ್ಕಾರದ ತಪ್ಪಿನಿಂದಾಗಿ ಆಗಿರತಕ್ಕದ್ದು ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು.

೧೧-೩೦ ಎ.ಎಂ.

ಇನ್ನು ಇಂಡಸ್ಟ್ರೀಸ್ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ, ನಮ್ಮಲ್ಲಿ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳು ಏನು ಇವೆ ಅವು ಗೌವರ್ನ್‌ಮೆಂಟ್‌ದಾಗಲಿ ಅಥವಾ ಕಾರ್ಪೊರೇಶನ್‌ದಾಗಲಿ ಅಥವಾ ಜಾಯಿಂಟ್ ಸೆಕ್ಟರ್ ಪ್ರಾಜೆಕ್ಟ್‌ಗಳಾಗಲಿ, ಸುಮಾರು ೬೨ ಕಾರ್ಪೊರೇಷನ್‌ಗಳಿವೆ. ಈ ೬೨ ಕಾರ್ಪೊರೇಷನ್‌ಗಳು ಈ ವರ್ಷದ ಅಂತಿಮಕ್ಕೆ ಅಂದರೆ ೩೧-೩-೧೯೯೦ಕ್ಕೆ ಇಂದು ಬಜೆಟ್‌ನಲ್ಲಿ ಕೊಟ್ಟಿರುವುದು ೩೧-೩-೧೯೮೯ಕ್ಕೆ ಫಿಗರ್ಸ್ ಈ ವರ್ಷದ ಲೆಕ್ಕಕ್ಕೆ ಇಟ್ಟುಕೊಂಡರೆ ಸುಮಾರು ೯೦೦ ಕೋಟಿ ರೂಪಾಯಿಗಳು ಲಾಸ್ ಆಗುತ್ತದೆ. ಅಕ್ಯುಮಲೇಟೆಡ್ ಲಾಸ್ ೯೦೦ ಕೋಟಿ ರೂಪಾಯಿಗಳು. ನಿಮ್ಮಲ್ಲಿ ೭೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆ ೭೫೦ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ೧೯೮೯ನೇ ಮಾರ್ಚ್ ೩೧ಕ್ಕೆ ಈಗ ನಾನು ಹೇಳತಕ್ಕಂಥದ್ದು ೧೦೩೧ ಕೋಟಿ ರೂಪಾಯಿಗಳು ಮಾರ್ಚ್ ೧೯೯೦ಕ್ಕೆ, ಈ ವರ್ಷದ ನಷ್ಟವನ್ನು ಸೇರಿಸಿಕೊಳ್ಳಲೇಬೇಕು. ಅದನ್ನು ಸೇರಿಸಿದರೆ ಸುಮಾರು ೯೦೦ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಆದ್ದರಿಂದ ಅನೇಕ ಫ್ಯಾಕ್ಟರಿಗಳು ಮುಚ್ಚಲಾಗಿವೆ. ಸಿಕ್ ಯೂನಿಟ್‌ಗಳು ಮುಚ್ಚಿ ಹೋಗಿವೆ. ಸ್ಪಿನಿಂಗ್ ಮಿಲ್ಸ್‌ಗಳು ಮುಚ್ಚಿವೆ. ಶುಗರ್ ಫ್ಯಾಕ್ಟರಿಗಳಿಂದ ಬಹಳವಾಗಿ ನಷ್ಟವಾಗಿದೆ. ಈ ರೀತಿ ಫ್ಯಾಕ್ಟರಿಗಳು ಮುಚ್ಚಿರುವ ಪರಿಣಾಮವಾಗಿ ರಾಷ್ಟ್ರಕ್ಕೆ ಉತ್ಪಾದನೆ ಇಲ್ಲ. ಇದು ಮೊದಲನೆಯದು. ಎರಡನೆಯದಾಗಿ ರೆವಿನ್ಯೂ ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಮ್‌ಟ್ಯಾಕ್ಸ್ ರೂಪದಲ್ಲಿ ಬರತಕ್ಕಂಥ ಟ್ಯಾಕ್ಸ್ ಸರ್ಕಾರಕ್ಕೆ ಬರುತ್ತಿಲ್ಲ. ಮೂರನೆಯದು ಅಲ್ಲಿರತಕ್ಕಂಥ ಕೂಲಿಗಾರರುಗಳಿಗೆ ಕೆಲಸವಿಲ್ಲ. ಅವರುಗಳು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೂ ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಕೆಲವರು ಹಲವಾರು ರೀತಿಯಲ್ಲಿ ಮಾತನಾಡಿದರು. ಏತಕ್ಕೆಂದರೆ ಇದರಲ್ಲಿಯೇ ನಾನು ಇಂಡಿಕೇಷನ್ ಕೊಟ್ಟಿದ್ದೇನೆ. ಕ್ರಾನಿಕ್ ಸಿಕ್‌ನೆಸ್ ಇರತಕ್ಕಂಥವುಗಳನ್ನು ಪ್ರೈವೇಟ್‌ಸೈಷನ್ ಮಾಡಿದರೂ ಮಾಡಬೇಕಾಗುತ್ತದೆಂದು. ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಅವರೆಲ್ಲರೂ ಕೂಡ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಕೆಲವರು ಅದನ್ನು ಪಬ್ಲಿಕ್ ಸೆಕ್ಟರ್‌ನಲ್ಲಿ ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ.

ಇನ್ನು ಕೆಲವರು ಹೆದರಿಕೆಯಿಂದ ಸುಮ್ಮನೆ ಕುಳಿತರೆ ಸರ್ಕಾರಕ್ಕೆ ಇನ್ನೂ ನಷ್ಟವಾಗುತ್ತದೆ, ಆದಕ್ಕೆ ಏನಾದರೂ ಒಂದು ಅಫೈರ್ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿದ್ದಾರೆ. ಸೈದ್ಧಾಂತಿಕವಾಗಿ ಮಾತನಾಡಿದ್ದಾರೆ ಮತ್ತು ನಾನಾ ದೃಷ್ಟಿಯಿಂದ ಅವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಯಾವುದೇ ರಾಷ್ಟ್ರ ಅಭಿವೃದ್ಧಿಗೆ ಬರಬೇಕಾದರೆ ಬರೇ ಘೋಷಣೆಗಳಿಂದ ಬರುವುದಿಲ್ಲ. ಕಷ್ಟಪಟ್ಟು ದುಡಿಮೆ ಮಾಡಬೇಕು. ಪ್ರಾಕ್ಟಿಕಲ್ ಆಗಿ ರಿಯಾಲೆಸ್ಟಿಕ್ ಆಗಿ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಸಾಧ್ಯವಾಗುತ್ತದೆ. ನಮಗೆ ಏನಾಗಿದೆ ಎಂದರೆ We are the prisoners of our own thoughts and policies. We do not want to get out of it. We do not want te make efforts to get out of it. ಎಷ್ಟು ದಿವಸಗಳ ಕಾಲ ಇದೇ ರೀತಿಯಲ್ಲಿ ಫಿಲಾಸಫಿಗೆ ಅಂಟಿಕೊಂಡು ಕುಳಿತುಕೊಳ್ಳಲು ಸಾಧ್ಯ. ನನಗಾದರೂ ಇದು ಅರ್ಥವಾಗುವುದಿಲ್ಲ. ಇಡೀ ಪ್ರಪಂಚದಲ್ಲಿ ಯಾವ ರಾಷ್ಟ್ರವನ್ನೇ ತೆಗೆದುಕೊಂಡರೂ ಒಂದೇ ರೀತಿಯಲ್ಲಿ ಇದು ಉಳಿದುಕೊಂಡು ಬಂದಿಲ್ಲ. ಬ್ರಿಟನ್‌ನಲ್ಲಿ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳು ಏನಿವೆ, ಅವುಗಳನ್ನೆಲ್ಲವನ್ನೂ ಈಗ ಬಂದಿರತಕ್ಕಂಥ ಪ್ರೈಮಿನಿಸ್ಟರ್ ಮಾರ್ಗರೇಟ್ ಥ್ಯಾಚರ್‌ರವರು ಖಾಸಗೀಕರಣ ಮಾಡಿಬಿಟ್ಟರು. ರಷ್ಯಾದಲ್ಲಿಯೂ ಕೂಡ ಈ ಬಗ್ಗೆ ಒಂದು ಮಹಾಕ್ರಾಂತಿಯಾಯಿತು. ಅಲ್ಲಿ ಕಮ್ಯುನಿಸ್ಟ್ ಗೌವರ್ನ್‌ಮೆಂಟ್ ಹೋಗಿ ಡೆಮಾಕ್ರೆಟಿಕ್ ಪಕ್ಷ ಅಧಿಕಾರಕ್ಕೆ ಬಂದಿತು. ಆಗ ರಾಜಕೀಯ ಬದಲಾವಣೆಯಾಯಿತು. ಅದೇ ರೀತಿ ಚೈನಾಕ್ಕೆ ಇಟಲಿಯವರು ಹೋಗಿ ಸ್ಟೇಟ್ ಇಂಡಸ್ಟ್ರೀಸ್‌ಗಳನ್ನು ಆರ್ಗನೈಸ್ ಮಾಡಿದರು. ಇಟಲಿ ಕ್ಯಾಪಿಟಲಿಸ್ಟ್ ಕಂಟ್ರಿಯಾಗಿದೆ. They have inve sted money and came back to their country and organised the automobile industry, ಚೈನಾದೇಶಕ್ಕೆ ಅಮೇರಿಕಾದವರು ಹೋಗಿ ಫರ್ಟಿಲೈಸರ್ ಇಂಡಸ್ಟ್ರೀಗಳನ್ನು ಸೆಟ್‌ಅಪ್ ಮಾಡಿದ್ದಾರೆ. ಇಂಜಿನಿಯರಿಂಗ್ ಇಂಡಸ್ಟ್ರಿಗಳನ್ನು ಸೆಟ್‌ಅಪ್ ಮಾಡಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ಡಿಫೆನ್ಸ್ ಇಂಡಸ್ಟ್ರೀಸ್‌ಗಳನ್ನು ಅವರು ಸ್ಥಾಪನೆ ಮಾಡಿದ್ದಾರೆ. ಈ ಎರಡು ಥಿಯರಿಗಳು ಏನಿವೆ ಒಂದು ಪಬ್ಲಿಕ್ ಸೆಕ್ಟರ್‌ನವರು ಇಟ್ಟುಕೊಂಡಿರುವುದು ಒಂದು ಪ್ರೈವೇಟ್ ಸೆಕ್ಟರ್‌ನವರು ಇಟ್ಟುಕೊಂಡಿರುವುದು ಅಥವಾ ಒಂದು ಡೆಮಾಕ್ರೆಟಿಕ್ ಬ್ಲಾಕ್ ಎನ್ನುವುದು, ಇನ್ನೊಂದು ಕಮ್ಯುನಿಸ್ಟ್ ಬ್ಲಾಕ್ ಎನ್ನುವುದು, ಈ ಸಿದ್ಧಾಂತಗಳೆಲ್ಲಾ ಪೂರ್ಣವಾಗಿ ಉಳಿದು ಬಂದಿಲ್ಲ. ಈ ಸಿದ್ಧಾಂತಗಳೆಲ್ಲಾ ಆಡಲ್ಟ್ರೇಷನ್ ಆಗಿವೆ. ಎಲ್ಲಾ ಕ್ಲೋಸ್‌ಅಪ್ ಆಗಿ ಬರುತ್ತಿದೆ. ಆದ್ದರಿಂದ ಇವುಗಳನ್ನು ಖಾಸಗಿಯವರಿಗೆ ಕೊಟ್ಟುಬಿಟ್ಟರೆ ಏನಾಗುತ್ತದೋ ಎನ್ನುವ ಭಯವನ್ನು ತಾವುಗಳು ಇಟ್ಟುಕೊಳ್ಳಬಾರದು. ಈ ಬಗ್ಗೆ ತಾವು ಅಪನಂಬಿಕೆ ಇಟ್ಟುಕೊಳ್ಳಬಾರದು ನಾವು ಯಾವ ಕೆಲಸವನ್ನು ಮಾಡಿದರೂ ಅದರಿಂದ ಸರ್ಕಾರಕ್ಕೆ ಒಳ್ಳೆಯದಾಗಬೇಕು ಸರ್ಕಾರಕ್ಕೆ ನಷ್ಟವಾಗುವುದನ್ನು ಕಡಿಮೆ ಮಾಡಬೇಕೆನ್ನುವ ಪ್ರಜ್ಞೆಯಿಂದ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ನಾನು ಹೇಳುತ್ತೇನೆ. ಜನರು ಅಪಪ್ರಚಾರ ಮಾಡಿದರು ಎಂದು ಹೆದರಿಸಿಕೊಂಡು ಈ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳದೆ ಹೋದರೆ ಸರ್ಕಾರಕ್ಕೆ ಆಗತಕ್ಕಂಥ ನಷ್ಟ ಮತ್ತಷ್ಟು ಮುಂದುವರಿಯುತ್ತಾ ಹೋಗುತ್ತದೆ. ಮುಂದೆ ಈ ನಷ್ಟ ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಏನಾದರೂ ಒಂದು ಕೊನೆಯ ತೀರ್ಮಾನವಾಗಬೇಕು. ಪ್ರೈವೇಟ್ ಸೆಕ್ಟರ್ ಪಬ್ಲಿಕ್ ಸೆಕ್ಟರ್, ಟೆಕ್ನೋಕ್ರೆಟಿಕ್, ಬ್ಯೂರೋಕ್ರಾಟಿಕ್ ಎಂಬ ನಾನಾ ರೀತಿಯ ಭಾವನೆಗಳನ್ನು ಬಿಟ್ಟು ಸರ್ಕಾರಕ್ಕೆ ಆಗತಕ್ಕಂಥ ನಷ್ಟವನ್ನು ತಪ್ಪಿಸಲು ನಾವು ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ, ಡಾ. ಆಳ್ವರವರು ಒಂದು ಸಲಹೆ ಕೊಟ್ಟಿದ್ದಾರೆ. ಈ ಮನೆಯ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಶಿಫಾರಸ್ಸು ರೂಪದಲ್ಲಿ ಕೊಡಲಿ ಎಂದು ಹೇಳಿದ್ದಾರೆ. ಆ ಸಲಹೆಯನ್ನು ನಾನು ಒಪ್ಪಿದ್ದೇನೆ. ಸದನದ ಸಮಿತಿಯನ್ನು ರಚನೆ ಮಾಡುತ್ತೇವೆ. ಅವರು ಸೂಕ್ತ ಶಿಫಾರಸ್ಸನ್ನು ಈ ಸದನಕ್ಕೆ ಮಾಡಲಿ. ಇದರ ಬಗ್ಗೆ ಆಮೇಲೆ ತಿಳಿಸುತ್ತೇನೆ. ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ವಿರೋಧ ಪಕ್ಷದ ನಾಯಕರು ಕೂಡ ಪ್ರಸ್ತಾಪ ಮಾಡಿದ್ದಾರೆ. ಬಳ್ಳಾರಿ ಬಗ್ಗೆಯೂ ಒಂದು ಮಾತು ಹೇಳಿದರು. ಹೆಗಡೆಯವರನ್ನು ಅವರು ೪೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಅಭಿನಂದಿಸಿದರು. ಅವರನ್ನು ಅಭಿನಂದಿಸುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಸಂತೋಷ. ಇದರ ವಿಚಾರವಾಗಿ ಹೇಳುವುದಾದರೆ, ೧೦೮೦ ಕೋಟಿ ರೂಪಾಯಿಗಳನ್ನು ಮೊದಲು ಅಲೋಕೇಟ್ ಮಾಡಿದರು. ಅದರಲ್ಲಿ ೪೦ ಕೋಟಿ ರೂಪಾಯಿ ಸೆಪರೇಟ್ ಆಗಿತ್ತು, ಈಗ ಅದನ್ನು ಸೇರಿಸಿದರು. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್‌ಗೆ ೪೦ ಕೋಟಿ ರೂಪಾಯಿ ಎಂದು ೧೧೨೦ ಕೋಟಿ ರೂಪಾಯಿ ಮಾಡಿಕೊಳ್ಳಿ ಅಂದರು. ಎರಡಕ್ಕೂ ಕೇಂದ್ರದ ಅಸಿಸ್ಟೆನ್ಸ್ ಬರುತ್ತದೆ ಎಂದು ಅವರು ಏನೂ ಹೇಳಲಿಲ್ಲ. ಬಹುಶಃ ಈ ಬಗ್ಗೆ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪತ್ರ ಬರೆದಿರಬಹುದು

ದೆಂದು ತಿಳಿದುಕೊಂಡಿದ್ದೇನೆ. ೪೦ ಕೋಟಿ ರೂಪಾಯಿಗಳಿಗೆ ಅವರು ಏನು ಅಸಿಸ್ಟೆನ್ಸ್ ಕೊಡುತ್ತಾರೆ ಅದೇ ಪ್ಯಾಟರ್ನ್‌ನಲ್ಲಿ ೧೦೪೦ ಕೋಟಿ ರೂಪಾಯಿಗಳಿಗೂ ಅಸಿಸ್ಟೆನ್ಸ್ ಕೊಡುತ್ತೇವೆಂದು ಹೇಳಿದರೆ ಅವರ ಜೊತೆಯಲ್ಲಿ ಹೆಗಡೆಯವರನ್ನು ಅಭಿನಂದಿಸುವುದಕ್ಕೆ ನಾನೂ ಸಿದ್ಧನಿದ್ದೇನೆ. ದಯವಿಟ್ಟು ಆ ಕೆಲಸ ಮಾಡಿಕೊಡಲಿ ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ ಅವರನ್ನು ಅಭಿನಂದಿಸುವುದರ ಜೊತೆಗೆ ಆ ಕೆಲಸ ಆದರೆ ಚಂದ್ರೇಗೌಡರನ್ನು ಕೂಡ ಅಭಿನಂದಿಸುತ್ತೇನೆ. ಬಳ್ಳಾರಿ ಅದರಲ್ಲಿ ಸೇರಿಲ್ಲವೆಂದರು, ಬಳ್ಳಾರಿ ಹಿಂದುಳಿದ ಭಾಗ, ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಬಳ್ಳಾರಿ ಹಿಂದುಳಿದ ಭಾಗ, ಅದಕ್ಕೂ ಕೆಲಸ ಕಾರ್ಯ ಮಾಡಬೇಕಾಗುತ್ತದೆ. ಹಿಂದೆ ಅದು ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಆಗ ಯಾವ ವಿಧವಾದ ಅಭಿವೃದ್ಧಿ ಕೆಲಸ ಕಾರ್ಯವೂ ಆಗಲಿಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಅದಕ್ಕೂ ಅನುಕೂಲ ಮಾಡಿಕೊಡಬೇಕೆಂಬುದು ಅವರ ಮನಸ್ಸಿನಲ್ಲಿದೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಉತ್ತರಿಸುವ ಕಾಲದಲ್ಲಿ ವಿಷದವಾಗಿ ಹೇಳುತ್ತಾರೆಂದು ಭಾವಿಸಿ ಆ ಬಗ್ಗೆ ಹೆಚ್ಚು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಎಕ್ಸೈಜ್ ಬಾಬಿನಿಂದ ೬೦ ಕೋಟಿ ರೂಪಾಯಿ ಏನು ಬರುತ್ತಿತ್ತು ಆ ೬೦ ಕೋಟಿ ರೂಪಾಯಿ ನಷ್ಟವಾದರೂ ಚಿಂತೆ ಇಲ್ಲ. ಜನರ ಆರೋಗ್ಯ ಮುಖ್ಯ ಎಂದು ಟಾಡಿ ಸೇಲ್ ಮಾಡುವುದನ್ನು ನಿಷೇಧ ಮಾಡಿದೆವು. ಬಹಳ ಜನ ಟಾಡಿಯನ್ನು ಕುಡಿದು ಆಸ್ಪತ್ರೆಗೆ ಹೋಗಿ ಸತ್ತಿರುವುದು ನನಗೆ ತಿಳಿದು ಬಂದಿದೆ. ನಿಜವಾಗಿ ಇದು ಟಾಡಿ ಅಲ್ಲ, ವಿಷ ಕ್ಲೋರಲ್ ಹೈಡ್ರೇಟ್ ಕೆಮಿಕಲ್ ಅನ್ನು ನೀರಿನಲ್ಲಿ ಮಿಕ್ಸ್ ಮಾಡಿ ಜನರಿಗೆ ಕೊಟ್ಟು ಹಣ ಸಂಪಾದನೆ ಮಾಡುತ್ತಿದ್ದರು. ಇದನ್ನು ಪೂರ್ಣವಾಗಿ ನಿಷೇಧ ಮಾಡಬೇಕೆಂದು ೬೦ ಕೋಟಿ ರೂಪಾಯಿ ಆದಾಯ ಹೋದರೂ ಚಿಂತೆ ಇಲ್ಲವೆಂದು ಈ ತೀರ್ಮಾನ ಕೈಗೊಂಡಿದ್ದೇವೆ. ಇವರು ಸಂಪಾದನೆ ಮಾಡುವುದು ಯಾವ ವರ್ಗಕ್ಕೆ ಹಾನಿಯಾಗುತ್ತದೆಂದರೆ ಈ ಸಮಾಜದಲ್ಲಿ ಏನು ತೀರಾ ಗರೀಬರು, ಹರಿಜನ–ಗಿರಿಜನರು, ದುರ್ಬಲ ವರ್ಗದವರು ಇದ್ದಾರೆ ಆ ಜನರು ಇದನ್ನು ಕುಡಿದು ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿದ್ದರು. ಹೆಂಡತಿ ಮಕ್ಕಳಿಗೆ ಕಿರುಕುಳ ಕೊಡುತ್ತಿದ್ದರು. ಹೊಡೆಯುವುದು, ಬಡಿಯುವುದು ಮಾಡುತ್ತಿದ್ದರು. ಇದು ಎಲ್ಲ ತಪ್ಪಲಿ ಎಂದು ಮಾನವೀಯತೆ ದೃಷ್ಟಿಯಿಂದ ಟಾಡಿ ಮಾರಾಟವನ್ನು ನಿಷೇಧ ಮಾಡಿದ್ದೇವೆ. ಇದೇ ಸಂದರ್ಭದಲ್ಲಿ ಮಾತನಾಡುತ್ತಾ ಆಳ್ವರವರು ಹೇಳಿದರು, ಅಲ್ಲದೆ ಅವರು ಹೇಳುವುದರ ಜೊತೆಗೆ ಒಂದು ಅಪಾದನೆಯನ್ನು ಮಾಡಿದರು. ಅವರ ಭಾಷಣ ಕೂಡ ನನ್ನ ಹತ್ತಿರ ಇದೆ. ಸರ್ಕಾರಕ್ಕೆ ೩ ಕೋಟಿ ರೂಪಾಯಿ ಕೈಬಿಟ್ಟು ಹೋಗುತ್ತಿದೆ, ಜನರು ಗುಸುಗುಸು ಅನ್ನುತಿದ್ದಾರೆಂದು ಹೇಳಿದ್ದಾರೆ, ಆ ರೀತಿ ಏನಾದರೂ ನಾವು ಮಾಡಬೇಕೆಂದು ಇದ್ದರೆ ಈ ಟಾಡಿಯನ್ನು ಏಕೆ ಪ್ರಾಹಿಬಿಟ್ ಮಾಡುತ್ತಿದ್ದೆವು ? ಇದನ್ನು ಪ್ರಾಹಿಬಿಟ್ ಮಾಡುವ ಪ್ರಶ್ನೆಯೇ ಇರಲಿಲ್ಲ. ಅವರಿಗೆ ಅಂದರೆ ಎಕ್ಸೈಜ್ ಕಂಟ್ರಾಕ್ಟರಿಗೆ ಅನುಕೂಲವಾಗಬೇಕು ಎಂದರೆ ಈ ತೀರ್ಮಾನ ತೆಗೆದುಕೊಳ್ಳುತ್ತಿರಲಿಲ್ಲ. ಐ.ಎಂ.ಎಲ್.ಗೆ ಏನು ಎಕ್ಸ್‌ಪೋರ್ಟ್ ಡ್ಯೂಟಿ ಹೆಚ್ಚಿಗೆ ಮಾಡಿದ್ದೇವೆ ಅದನ್ನು ಕೂಡ ಮಾಡುತ್ತಿರಲಿಲ್ಲ.

ಮತ್ತು ಸೇಲ್ಸ್ ಟ್ಯಾಕ್ಸ್ ಏನು ಅರಾಕ್‌ಗೆ ಜಾಸ್ತಿ ಮಾಡಿದ್ದೇವೆ ಆ ಕೆಲಸ ನಾವು ಮಾಡುವುದಕ್ಕೆ ಹೋಗುತ್ತಾ ಇರಲಿಲ್ಲ. ನಾವು ಅವರಿಗೆ ಅನುಕೂಲ ಮಾಡಿಕೊಡಬೇಕು ಎಂಬ ದೃಷ್ಟಿಯಿಂದ ಅಥವಾ ಈ ಅಪಾದನೆ ನಿಜ ಎಂದು ತಿಳಿದುಕೊಂಡಿದ್ದರೆ ಈ ಕೆಲಸ ನಾವು ಮಾಡುತ್ತಾ ಇರಲಿಲ್ಲ. ಎಕ್ಸೈಜ್ ಕಂಟ್ರಾಕ್ಟರ್ ಜೊತೆಯಲ್ಲಿ ಜೀಗತನ ಬೆಳೆಸಿದವರು ನಾವಲ್ಲ. ಎಕ್ಸೈಜ್ ಕಂಟ್ರಾಕ್ಟರ್ ಜೊತೆಯಲ್ಲಿ ಅನೈತಿಕ ಸಂಬಂಧವನ್ನು ಇಟ್ಟುಕೊಂಡವರು ನಾವಲ್ಲ. ಹೆಂಡದ ದೊರೆಗಳು ಎಂದು ಏನು ಹೇಳುತ್ತಾರೆ ಆ ಹೆಂಡದ ದೊರೆಗಳ ಬ್ರೀಫ್‌ಕೇಸ್‌ನಲ್ಲಿದ್ದ ಸರ್ಕಾರ ನಮ್ಮದಲ್ಲ.

(ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿದರು)

ಶ್ರೀ ಎಂ. ರಾಜಶೇಖರ ಮೂರ್ತಿ.—ಇದ್ಯಾವುದೂ ನಮ್ಮದಲ್ಲ ಅದೆಲ್ಲಾ ನಮ್ಮದಾಗಿದ್ದರೆ ಈ ರೀತಿ ಹೆಚ್ಚಿಗೆ ಟ್ಯಾಕ್ಸ್ ಹಾಕುವುದಕ್ಕೆ ಹೋಗುತ್ತಾ ಇರಲಿಲ್ಲ. ಆವತ್ತಿನ ದಿವಸ ಅವರು ವಾದ ಮಾಡಿದ ವೈಖರಿ ನೋಡಿದರೆ ನಮ್ಮ ಕಡೆ ಒಂದು ಗಾದೆ ಇದೆ, * * *

ಶ್ರೀ ವಾಟಾಳ್ ನಾಗರಾಜ್.—ನಾನು ಅಧ್ಯಕ್ಷರನ್ನು ಕೇಳುತ್ತೇನೆ, * ಎನ್ನತಕ್ಕ ಪದವನ್ನು ಈ ಸಭೆಯಲ್ಲಿ ಉಪಯೋಗಿಸಬಹುದೇ ?

ಒಬ್ಬ ಸದಸ್ಯರು.—ಅದು ಗಾದೆ.

---

* ಈ ಪದಗಳನ್ನು ಸಭಾಧ್ಯಕ್ಷರ ಅಪ್ಪಣೆಯ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ತಾವು ಹೇಳಬೇಕು* ಎಂದರೆ ಬೇರೆ ಪದಗಳೂ ಬರುತ್ತವೆ.

ಶ್ರೀ ಎಂ. ಮಹದೇವ್.—ನಾಣ್ನುಡಿ ಅದು.

ಶ್ರೀ ವಾಟಾಳ್ ನಾಗರಾಜ್.—*ಎಂಬ ಪದವನ್ನು ಇಲ್ಲಿ ಉಪಯೋಗಿಸಬಹುದೇ ? ಅದು ಸಂಸದೀಯ ಪದವೇ ? ದಯಮಾಡಿ ಅದರ ಬಗ್ಗೆ ಹೇಳಿ.

(ಹಲವಾರು ಸದಸ್ಯರು ಒಮ್ಮೆಲೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾನೇನಾದರೂ ಆ ತರಹ ಅಂದಿದ್ದರೆ ನಾನು ಕ್ಷಮಾಪಣೆ ಕೇಳಿ ಹಿಂತೆಗೆದುಕೊಳ್ಳುತ್ತೇನೆ ಅಂಥ ಯಾವುದೇ ಪದ ಉಪಯೋಗಿಸಿದರೂ ನಾನು ವಾಪಸ್ ತೆಗೆದುಕೊಳ್ಳುತ್ತೇನೆ* ಎಂಬುದು ಸರಿಯೆ ?

(ಗೊಂದಲ)

ಶ್ರೀ ಎಂ. ಮಹದೇವ್.—ಅವರು ಗಾದೆ ಮಾತು ಹೇಳಿದ್ದಾರೆ.

ಅಧ್ಯಕ್ಷರು.—ನನ್ನನಲ್ಲ ಅವರು ಕೇಳುತ್ತಿದ್ದಾರೆ. ನೀವುಗಳೆಲ್ಲಾ ಏತಕ್ಕೆ ಉತ್ತರ ಕೊಡುತ್ತೀರಿ ? ಅದನ್ನು ತೀರ್ಮಾನ ಮಾಡತಕ್ಕವನು ನಾನು ಆ ಅಧಿಕಾರವನ್ನು ನನಗೆ ನೀವು ಕೊಟ್ಟಿದ್ದೀರಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಸ್ಪೈಫೆಂಡರಿ...

ಶ್ರೀ ವಾಟಾಳ್ ನಾಗರಾಜ್.—ನಾನು ತಮ್ಮ ಗಮನ ಸೆಳೆದಿದ್ದೇನೆ. ಈ ಸಭೆಯಲ್ಲಿ ಆ ರೀತಿ ಹೇಳಬಹುದು ಅಂದರೆ ಸಂತೋಷ.

ಅಧ್ಯಕ್ಷರು.—ಅವರು ಗಾದೆಯನ್ನು ಉದಾಹರಿಸಿದರು. ಅದು ಒಂದು ಹಳ್ಳಿ ಗಾದೆ. ಆದ್ದರಿಂದ ಇದರ ಬಗ್ಗೆ ನಾನು ಯೋಚನೆ ಮಾಡಿ ತಿಳಿಸುತ್ತೇನೆ ಮಾನ್ಯ ಅರ್ಥ ಸಚಿವರು ಯಾರನ್ನೂ ಉದ್ದೇಶಿಸಿ ಇದು ಹೇಳಿಲ್ಲ. ಹಳ್ಳಿಯ ಗಾದೆಯೊಂದನ್ನು ಅವರು ಉದಾಹರಿಸಿದರು.

ಶ್ರೀ ಜೀವರಾಜ್ ಆಳ್ವ.—ಹಿರಿಯ ಸದಸ್ಯರು ಗಾದೆಯನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಹೇಳಿದರೂ ಕೂಡ ಅದರಲ್ಲಿರುವ ಗಾಥ ಹಿನ್ನೆಲೆಯನ್ನು ಹೇಳಬೇಕಾಗುತ್ತದೆ ಆ ಗಾಥ ಹಿನ್ನೆಲೆ ಎಂದರೆ ಎಕ್ಸೈಜ್ ಲಾಬಿಯಲ್ಲಿ ಎಷ್ಟು ಬರುತ್ತದೆ..

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ತಮಗೆ ಮನವಿ ಮಾಡುತ್ತಿದ್ದೇನೆ. ಇದರ ಬಗ್ಗೆ ತೀರ್ಪನ್ನು ತಾವು ಕೊಡಬೇಕು.

ಅಧ್ಯಕ್ಷರು.—ನೀವು ಮಾಡಿದ್ದೀರಿ ಸರಿ. ಆದರೆ ಈಗ ಡಾಕ್ಟರ್ ಆಳ್ವ ಅವರು ನಿಂತಿದ್ದಾರೆ.

ಶ್ರೀ ಜೀವರಾಜ್ ಆಳ್ವ.—ಇದರ ಹಿನ್ನೆಲೆ, ಈ ಎಕ್ಸೈಜ್ ಲಾಬಿ ಎಂಬುದು ಒಂದು ಲಾಬಿ ಅಲ್ಲ ಅಧ್ಯಕ್ಷರೆ, ಅದರಲ್ಲಿ ಟಾಡಿ ಲಾಬಿ, ಅರಾಕ್ ಲಾಬಿ, ಐ.ಎಂ.ಎಫ್.ಎಲ್. ಲಾಬಿ ಇದೆ. ಈ ಮೂರು ವರ್ಗಗಳು ಒಂದರ ಹಿಂದೆ ಒಂದು ತರಹದಲ್ಲಿ ಪಿತೂರಿ ನಡೆಸುವಂಥದ್ದು ನಡೆದಿದೆ ಇವತ್ತು ಇಂಥ ಮಾತು ಬಂದಿದ್ದರಿಂದ ಇದನ್ನು ಹೇಳುತ್ತಿದ್ದೇನೆ ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲದೇ ಇರಬಹುದು. ಮಾನ್ಯ ಆರ್ಥಿಕ ಮಂತ್ರಿಗಳಿಗೆ ಗೊತ್ತಿಲ್ಲದೇ ಇರಬಹುದು. With all responsibility I say, ಮೂರು ಕೋಟಿ ರೂಪಾಯಿಗಳನ್ನು ಇಬ್ಬರು ಎಕ್ಸೈಜ್ ಕಂಟ್ರಾಕ್ಟರ್‌ಗಳು ಧಾವನ್ ಅವರಿಗೆ ಮಾಜಿ ಶಾಸಕರ ಮೂಲಕ ತಲುಪಿಸಿದ್ದಾರೆ ಎಂದು ಹೇಳುತ್ತೇನೆ. I can prove it. Let there be a judicial enquiry.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾಯಿಂಟ್ ಆಫ್ ಆರ್ಡರ್. ಅಧ್ಯಕ್ಷರೆ, ಅವರು ರಾಜ್ಯ ಸಭಾ ಸದಸ್ಯರು. Can he take his name.

ಶ್ರೀ ಜೀವರಾಜ ಆಳ್ವ.—ಎಲ್ಲಿಂದ ಡೈರೆಕ್ಷನ್ ಬಂದಿದೆ I want it to be placed on record. And I shall place it.

---

*ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು.—ಅವರು ಏನು ಹೇಳುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಜೀವರಾಜ್ ಆಳ್ವ.—ನಾನು ರಿಪೀಟ್ ಮಾಡುತ್ತೇನೆ. Let me repeat. I am going to take any punishment that has to come. If you have to expunge it, expunge it.

(INTERRUPTION)

SHRI MALLIKARJUNA M. KHARGE.—This is highly objectionable,

ಶ್ರೀ ಜೀವರಾಜ ಆಳ್ವ.—೩ ಕೋಟಿ ರೂಪಾಯಿಗಳು ಯಾರಿಗೆ ಸಂದಾಯವಾಗಿದೆಯೆಂಬುದನು ತಾವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ.

SRI MALLIKARJUNA M. KHARGE.—Shri R. K. Dhavan is not a member of this House. He is a Member of the Rajya Sabha. How can he bring his name and point out ?

MR. SPEAKER.—I will not allow the mention of any Member of either House of Parliament which should be derogatory to the Members of those Houses.

SRI JEEVARAJ ALVA.— One of the great leaders of the Congress' ಎಂದು ಹೇಳುತ್ತೇನೆ. My rights are to be protected. I will withdraw the name and I will say a great adviser to the former Prime Minister of this country. ಮುಖ್ಯಮಂತ್ರಿಗಳಿಗಾಗಲೀ ಮಾನ್ಯ ಅರ್ಥ ಮಂತ್ರಿಗಳಿಗಾಗಲೀ ಇದು ಗೊತ್ತಿಲ್ಲದೇ ಇರಬಹುದು. ಆದರೆ ಅವರ ಹಿಂದೆ ನಡೆದ ವ್ಯವಹಾರವನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. when I made this accusation, I said, 'whispering campaign'. ಎಂದು ಹೇಳಿದೆ. ಇದಕ್ಕೆ ಕಾರಣ ಏನೆಂದರೆ, ಒಂದು ಜವಾಬ್ದಾರಿ ಸ್ಥಾನದಲ್ಲಿ ವಿರೋಧ ಪಕ್ಷದಲ್ಲಿ ಇರುವಾಗ ಸುಮ್ಮನೆ ಏನೋ ಹೇಳಬಾರದು ಎಂದು. ಆದರೆ ತಾವು ಅಪ್ಪಣೆ ಕೊಟ್ಟರೆ ನಿಮ್ಮ ಚೇಂಬರ್‌ಗೆ ಬರುತ್ತೇನೆ. ಯಾವ ಯಾವ ಕಂಟ್ರಾಕ್ಟರ್ಸ್ ಹೋಗಿದ್ದರು, ಯಾರನ್ನು ಕರೆದುಕೊಂಡು ಹೋಗಿದ್ದರು ಎಂದು ಹೇಳುವುದಕ್ಕೆ ನಾನು ತಯಾರು ಇದ್ದೇನೆ.

MR. SPEAKER.—The Chair is certainly not interested in trying to find out who met whom and who gave what. I don't want the Chair to be dragged in this controversy at all.

ಶ್ರೀ ಬಿ. ಬಸವಲಿಂಗಪ್ಪ.—ಒಂದೇ ಒಂದು ವಿಷಯ. ಡಾ. ಆಳ್ವರವರು ಯಾರ ಮೇಲೆ ಆಪಾದನೆ ಮಾಡಿದ್ದಾರೋ ಅವರು ಈ ಮನೆಯ ಸದಸ್ಯರು ಅಲ್ಲ. ಇದೇ ರೀತಿ ಹಿಂದಿನ ಸರ್ಕಾರದಲ್ಲಿ ರಾಮಕೃಷ್ಣ ಹೆಗ್ಡೆಯವರ ವಿರುದ್ಧ ಸಾವಿರಾರು ಇದ್ದಾವೆ. ನಾವು ಅವನ್ನೆಲ್ಲಾ ಹೇಳಿದ್ದೇವಾ ಈಗ ? ಅವರಿಗೆ ಇದೆಲ್ಲಾ ತಿಳಿದಿದ್ದು ಸಹ ಅವರ ಮೇಲೆ ಹೇಳುವುದಕ್ಕೆ ಏಕೆ ಹೊರಟಿದ್ದಾರೆ ?

(ಗೊಂದಲ)

ಶ್ರೀ ಜೀವರಾಜ ಆಳ್ವ.—ಮೊನ್ನೆ ನಾನು ಹೇಳಿದೆ ? With all humility, with all restraint I made a complaint. I said, there is a whispering campaign. ಆದರೆ ಇವತ್ತು ಈ ಭಾಗವನ್ನು ಪೂರ್ಣವಾಗಿ ನಿಂದಿಸಿ, ಅನೈತಿಕತೆ, ಸುಳ್ಳೆ, 'ಡೆವಿಲ್ ಕೋಟಿಂಗ್ ಸ್ಕ್ರಿಪ್ಚರ್ಸ್' ಎಂದು ಹೇಳತಕ್ಕ ಮಾತು ಬಂದಿರುವುದರಿಂದ when I say with all respect......ಇಲ್ಲದಿದ್ದರೆ ಈ ಮಾತನ್ನು ಹೇಳುತ್ತಾ ಇರಲಿಲ್ಲ. With total restraint here, we are aware, but ಈ ಪಕ್ಷದಲ್ಲಿ ಏನಾಗಿದೆ ಎಂದರೆ, ಅದನ್ನು ಹೇಳಬಾರದು. ಈಗಿನ ಪೊಲಿಟಿಕಲ್ ಸಿಸ್ಟಮನ್ನು vitiate ಮಾಡಬಾರದು ಎನ್ನುವ ಒಂದೇ ಒಂದು ಕಾರಣಕ್ಕೆ I restrained myself. That is not to be construed as a weakness. I shall prove it.

---

* ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

SRI B. BASAVALINGAPPA.—We will also prove it. ಮಾನ್ಯ ರಾಜಶೇಖರ ಮೂರ್ತಿಯವರು ಯಾರ ಹೆಸರನ್ನೂ ಹೇಳಲಿಲ್ಲ. ನಾವೂ ಕೂಡಾ ಯಾವುದೇ ಹೆಸರನ್ನು ಎತ್ತಿ ಹೇಳುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಸದಸ್ಯರಾದ ಜೀವರಾಜ ಆಳ್ವರವರ ಬಗ್ಗೆ ರೆಫರೆನ್ಸ್ ಮಾಡಿ ಸೂಳೆ ಎಂದು ಹೇಳಿದ್ದಾರೆ. It cannot be tolerated.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲಿ ಹೇಳಿದೆ ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಅದನ್ನು ಅವರು ಹೇಳಿದ್ದು. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಆಗಿದೆ ಎಂದು ಹೇಳಿದರು. ತೆಗೆದುಕೊಂಡಿದ್ದೀರಾ, ಅದಕ್ಕೆ ಹೆಸಿಟೇಟ್ ಮಾಡುತ್ತೀರಾ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೇ, ಈ ವಿಚಾರದಲ್ಲಿ ವಾಗ್ವಾದ ನಡೆಯುವಾಗ ಮಾನ್ಯ ಹಣಕಾಸಿನ ಸಚಿವರು ಒಂದು ಗಾದೆ ಮಾತನ್ನು ಹೇಳುವುದರ ಮೂಲಕ ಈ ವಿಷಯ ಬಂದಿದೆ. ಅವರು ಉಲ್ಲೇಖ ಮಾಡಿದ್ದು ಗಾದೆ ಹೌದು. ಅವರು ಹೇಳಿದ್ದು ಗಾದೆ ಮಾತು. ಗಾದೆಯನ್ನು ಯಾರೂ ಕೋಡಿಫಿಕೇಷನ್ ಮಾಡಿಲ್ಲ. ಆ ಕೆಲಸವನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಮಾಡಿದರೆ ಬಹಳ ಸಂತೋಷವಾಗುತ್ತದೆ. ಕನ್ನಡದಲ್ಲಿ ಬೇಕಾದಷ್ಟು ಗಾದೆಗಳು ಇವೆ. ಪ್ರತಿಯೊಂದು ಗಾದೆಗೂ ಕೂಡಾ ಚರಿತ್ರೆ ಇದೆ. ಡಾ. ಜೀವರಾಜ ಆಳ್ವ ಅವರು ಹೇಳಿದಹಾಗೆ ಗಾದೆಗಳಿಗೆ ಬಹಳ ಗಾಢವಾದ ಹಿನ್ನೆಲೆ ಕೂಡಾ ಇರುತ್ತದೆ. ಆದ್ದರಿಂದ ಕಂಪೈಲ್ ಮಾಡಿ. ತಾವು ಸಹ ಸಮಯ ಸಿಕ್ಕಿದರೆ ಮಾಡಿ ನಮಗೂ ಉಪಕಾರ ಮಾಡಿದಂತಾಗುತ್ತದೆ. ಆಗಾಗ ಗಾದೆಗಳು ಅದು ಅವರು ಹೇಳಿದಹಾಗೆ ಆಗೊಲ್ಲ. ಮತ್ತೆ ಯಾವುದೇ ಗಾದೆಯಾಗಲಿ ಮಾನ್ಯ ಸದಸ್ಯರಿಗೆ ನೀವು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಆಗಲಿ ಅವರಿಗೆ ನೋವು ಉಂಟುಮಾಡತಕ್ಕ ಗಾದೆಗಳನ್ನು ಆದಷ್ಟು ಅವಾಯಿಡ್ ಮಾಡುವುದಾದರೆ, ಈ ಸಭೆಯಲ್ಲಿ ಸಾಮರಸ್ಯ ಸೌಹಾರ್ದವನ್ನುಂಟು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—*ಎನ್ನತಕ್ಕ ಪದವನ್ನು ಉಪಯೋಗಿಸಬಹುದೆ ? ಅದನ್ನು ತಾವೇ ಹೇಳಿ ?

ಅಧ್ಯಕ್ಷರು.—ಅದರ ಬಗ್ಗೆ ಒಂದು ವಿಚಾರ ಹೇಳುತ್ತೇನೆ......

"Prostitution or 'Vyabichara' or 'Soole' unparliamentary if it is used with bad motive."

SRI P. G. R. SINDHIA.—Then it must be expunged.

(INTERRUPTION)

MR. SPEAKER.—I will look certainly into the context when the Proverb was utilised in the speech and then I will take proper decision.

(INTERRUPTION)

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಉದ್ದೇಶವೇನು ? ಯಾವ ಉದ್ದೇಶದಿಂದ ಈ ಪದವನ್ನು ಉಪಯೋಗಿಸಿದ್ದೀರಿ ?

ಒಬ್ಬ ಮಾನ್ಯ ಸದಸ್ಯರು.—ಕುಂಬಳಕಾಯಿ ಕಳ್ಳ ಅಂದರೆ ಹೆಗಲ ಮುಟ್ಟಿಕೊಂಡು ನೋಡಿಕೊಂಡ ಎನ್ನುವ ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅರ್ಥ ಸಚಿವರು ಉತ್ತರವನ್ನು ಕೊಟ್ಟ ನಂತರ ಸಾರಾಯಿ ಹೆಂಡದ ಬಗ್ಗೆ ಮಾತನಾಡತಕ್ಕದ್ದು ಇದೆ. ಆದರೆ ಇವತ್ತು ನಮ್ಮ ಸರ್ಕಾರ ನಿಮ್ಮ ಸರ್ಕಾರ ಎಂದು ಹೇಳಿ, ನಿಮ್ಮ ಸರ್ಕಾರ ಹೆಂಡದ ದೊರೆಗಳ ಬ್ರೀಫ್‌ಕೇಸ್‌ನಲ್ಲಿತ್ತು ಎನ್ನತಕ್ಕ ಮಾತನ್ನು ಹೇಳಿದರೆ, ಜೀವರಾಜ ಆಳ್ವರವರ ಮೇಲೆ ಮಾಡತಕ್ಕ ಆಪಾದನೆಗಳು, ಜೀವರಾಜ ಆಳ್ವರವರ ಹೆಸರನ್ನು ತೆಗೆಯುವಾಗ ಯಾವ ಮೋಟಿವ್ ಇತ್ತು? Clear intentions are there.

MR. SPEAKER.—That is exactly what I am going to look into. I will certainly look into the context in which the word was used in the debate and take proper decision.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಮಗೆ ಅಲ್ಲ, ಅದು ನಿಮಗೆ. ಎರಡೂವರೆ ಕೋಟಿ ರೂಪಾಯಿ ವ್ಯವಹಾರ ನಡೆದಿದೆಯೆಂದು ಹೇಳುವುದು ಈಗಿನ ಅರ್ಥಸಚಿವರಿಗೆ ಅನ್ವಯಿಸಿದ್ದು. ಪ್ರಚಾರ ಮಾಡಿದರು, ದಿನಕ್ಕೆ 2 ಕೋಟಿ ರೂಪಾಯಿಯೆಂದು ಪ್ರಚಾರ ಮಾಡಿದರು. ನಿಮ್ಮ 200 ಕೋಟಿ ರೂಪಾಯಿ ಎಲ್ಲಿದೆ? ಎಲ್ಲಿಂದ ಬಂತು ಅದನ್ನು ತೋರಿಸಿ?

SRI M. RAJASHEKHARA MURTHY.–The allegations made by Dr. Alva and also Mr. Sindhia are nothing but a deliberately calculated black-mail campaign. I do not want to say much more.

SRI P. G. R. SINDHYA.—What for we should blackmail you? Do you think we are blackmailers? ನಿಮ್ಮ ಹತ್ತಿರ ಏನು ಕೆಲಸಕ್ಕೆ ಬಂದಿದ್ದೇವೆ? ಟ್ರಾನ್ಸ್‌ಫರ್‌ಗೆ ಬಂದಿದ್ದೇವೆಯೇ? ಏತಕ್ಕೆ ಬಂದಿದ್ದೇವೆ ರೀ? ಬ್ಲಾಕ್‌ಮೇಲ್ ಏತಕ್ಕೆ ಮಾಡಬೇಕು? ನಾವು ಮುಖ್ಯಮಂತ್ರಿಗಳ ಹತ್ತಿರ ಬಂದಿದ್ದೇವೆಯೋ ನಿಮ್ಮ ಹತ್ತಿರ ಬಂದಿದ್ದೇವೆಯೋ, ನಿಮ್ಮ ಹತ್ತಿರ ಏನು ಕೆಲಸಕ್ಕೆ ಬಂದಿದ್ದೇವೆ? ಏತಕ್ಕೆ ಬಂದಿದ್ದೇವೆ ದಯವಿಟ್ಟು ಅದಕ್ಕೆ ಉತ್ತರ ಕೊಡಿ? ನೀವು ಬಾಯಿಗೆ ಬಂದದ್ದನ್ನು ಹೇಳಿದರೆ ಅದನ್ನು ಇಲ್ಲಿ ಎಂ.ಎಲ್.ಎ.ಗಳಾಗಿ ಕುಳಿತುಕೊಂಡು ಕೇಳುವುದಕ್ಕೆ ಬಂದಿಲ್ಲ. ನಮಗೂ ಹೇಳುವುದಕ್ಕೆ ಬಾಯಿ ಇದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ಸದಸ್ಯರುಗಳಲ್ಲಿ ಒಂದು ವಿಜ್ಞಾಪನೆ. ನೀವು ಭಾಷಣ ಮಾಡತಕ್ಕ ಕಾಲದಲ್ಲಿ ಆಡಳಿತ ಪಕ್ಷದವರು ಯಾವ ವಿಧವಾದ ಅಡೆತಡೆಗಳನ್ನು ಮಾಡಲಿಲ್ಲ. ಅರ್ಥ ಮಂತ್ರಿಗಳು ಭಾಷಣ ಮಾಡುತ್ತಿದ್ದಾರೆ. ನೀವು ಹೇಳಿದಂತಹ ಪಾಯಿಂಟ್ಸ್ ನೋಟ್ ಮಾಡಬೇಕಾಗುತ್ತದೆ. ಕ್ಲಾರಿಫಿಕೇಶನ್ ಏನಾದರೂ ಇದ್ದರೆ ಅವರ ಭಾಷಣ ಮುಗಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈ ತರಹ ಮಧ್ಯ ಮಧ್ಯೆ ಮಾತನಾಡಿದರೆ ಅವರ ಭಾಷಣದ ಧಾಟಿಯನ್ನು ಕೆಡಿಸುವುದು ಬೇಡ.

(ಗೊಂದಲ)

ಅಧ್ಯಕ್ಷರು.—ಈ ಸಭೆ ಇರತಕ್ಕದ್ದು ಆರೋಪ ಮಾಡುವುದಕ್ಕೆ, ಪ್ರತಿ ಆರೋಪ ಮಾಡುವುದಕ್ಕೆ. ಆದ್ದರಿಂದ ನೀವೂ ಆರೋಪ ಮಾಡುತ್ತೀರಿ, ಅವರೂ ಆರೋಪ ಮಾಡುತ್ತಾರೆ.

ಶ್ರೀ ಎಚ್. ಏಕಾಂತಯ್ಯ.—ಅವರೂ ಪ್ರತಿಭಟನೆ ಮಾಡುತ್ತಾರೆ. ನಾವೂ ಮಾಡುತ್ತೇವೆ.

ಅಧ್ಯಕ್ಷರು.—ಪ್ರತಿಭಟನೆ ಮಾಡಬಹುದು. ಶ್ರೀ ಏಕಾಂತಯ್ಯನವರೇ ಪ್ರತಿಭಟನೆ ಮಾಡುವುದಕ್ಕೂ ಒಂದು ವಿಧಾನ ಇದೆ. ಆ ವಿಧಾನದ ಚೌಕಟ್ಟಿನಲ್ಲಿ ಪ್ರತಿಭಟನೆ ಮಾಡಬಹುದು.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಅವಕಾಶ ಕೊಟ್ಟರೆ...

MR. SPEAKER.—If the Hon. Finance Minister were to yield, I have no objection.

SRI R.L. JALAPPA.—If you could kindly yield for a minute— ನಾವು ಭಾಷಣ ಮಾಡುವಾಗ ನಾವು ಎಲ್ಲೂ ಮೀರಿ ಎಲ್ಲಿಯೂ ಈ ತರಹ ಭಾಷೆಯನ್ನು ಉಪಯೋಗಿಸಿಲ್ಲ. ಬೇಕಾದರೆ ರೆಕಾರ್ಡ್ಸ್ ತೆಗೆದುನೋಡಿ. ನಾವು ಏನು ಮಾತನಾಡಿದ್ದೇವೆ, ಬೇರೆಯವರು ಏನು ಮಾತನಾಡಿದ್ದಾರೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಏನು ಒಂದೇ ಒಂದು...

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೇ, ನಾನು ಹೇಳುವುದು...

ಶ್ರೀ ಆರ್. ಎಲ್. ಜಾಲಪ್ಪ.—ಹೀಗೆ ಬುಡಬುಡಕೆಯವರ ತರಹ ಮಾತನಾಡಿದರೆ ಹೇಗೆ? ಹೊಸದಾಗಿ ಬಂದಿದ್ದಾರೆ...

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿಮ್ಮ ಪಕ್ಷದವರು ಯಾವ ಪದಗಳನ್ನು ಉಪಯೋಗಿಸಿದ್ದಾರೆ ಎಂಬುದನ್ನು ಕಡತ ತೆಗಿಸಿ ನೋಡಿ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು 'ಕೆಳಗಡೆ ಕಡಿಯುತ್ತದಾ?' ಎಂದು ಹೇಳಿದ್ದರು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನಾನು ಮಾತನಾಡುವಾಗ, ಈ ಸದನದಲ್ಲಿ ಹಿಂದೆ ಏನಾಗಿತ್ತೋ ಅದು ಬೇಕಾಗಿಲ್ಲ. ಮೊನ್ನೆ ಈ ಸದನದಲ್ಲಿ ನಾವು ಬಜೆಟ್‌ಮೇಲೆ ಮಾತನಾಡುವಾಗ ಹದ್ದುಬಸ್ತಿನಲ್ಲಿ ಮಾತನಾಡಿದ್ದೇವೆ. ಸಿಕ್ಕಾಪಟ್ಟೆ ನಾವು ಶಬ್ದಗಳನ್ನು ಉಪಯೋಗಿಸಿಲ್ಲ. ನನಗೆ ಒಂದು ಅರ್ಥವಾಗುತ್ತಿಲ್ಲ. ಸೀನಿಯರ್ ಮೆಂಬರ್ ಮತ್ತು ಬಹಳ ಜವಾಬ್ದಾರಿ ಇರುವವರು ಏಕೆ ಈ ಸಣ್ಣ ಪದವನ್ನು ಉಪಯೋಗಿಸುತ್ತಿದ್ದಾರೆ? Is it out of frustration. It cannot be. Why should he? You said blackmail. Have we come here to blackmail? What is it that we want from you. We are not asking you anything. ಅದು ಬಿಟ್ಟು ಬಿಟ್ಟು ಬ್ಲಾಕ್‌ಮೇಲ್ ಮಾಡುವುದಕ್ಕೆ ಎಂದರೆ There must be some reason. You just say, why you have removed it. That is all. You explain it. ಬ್ಲಾಕ್‌ಮೇಲ್ ಏಕೆ ಮಾಡಬೇಕು ? ನಮಗೆ ಗೊತ್ತಿರೇವ ಸಮಸ್ಯೆಯನ್ನು ನಾವು ಹೇಳುತ್ತೇವೆ. Ultimate point ಮೇಲೆ ಟ್ಯಾಕ್ಸ್ ತೆಗೆಯಬೇಕಾದರೆ ಏನು ಕಾರಣ?

(Interruption)

MR. SPEAKER.—I have not called you.

ಶ್ರೀ ಎಂ. ರಾಜಶೇಖರಮೂರ್ತಿ.—ಸೇಲ್ಸ್‌ಟ್ಯಾಕ್ಸ್‌ನ್ನು ಲಾಸ್ಟ್ ಪಾಯಿಂಟ್‌ನಿಂದ ಫಸ್ಟ್ ಪಾಯಿಂಟ್‌ಗೆ ಹಾಕಿದ್ದು ಏತಕ್ಕೋಸ್ಕರ, ಇದರ ಸಂದರ್ಭದಲ್ಲಿ ಮೋಟಿವ್ ಇಂಪ್ಯೂಟ್ ಮಾಡಿದ್ದು ಎಂದು ಹೇಳಿದಿರಿ. ಇವತ್ತು ಐ.ಎಂ.ಎಲ್. ಮೇಲೆ ೨೦ ರೂಪಾಯಿ ಟ್ಯಾಕ್ಸ್ ಹಾಕಿದರೆ ತೊಂದರೆಯಾಗುತ್ತದೆ, ಅದನ್ನು ಕಡಿಮೆ ಮಾಡಬೇಕು ಎಂದು ಹೇಳಿದಿರಲ್ಲ ಯಾರು ವಾದ ಮಾಡಿದವರು ಎಂದರೆ ಶ್ರೀಮಾನ್ ಜಾಲಪ್ಪನವರು, ಶ್ರೀ ಸಿಂಧ್ಯಾರವರು ಮತ್ತು ಶ್ರೀ ದೇಶಪಾಂಡೆಯವರು. ಅವರು ವಾದ ಮಾಡಿದರು. ನಾವು ಆಗ ಮೋಟಿವ್ ಇಂಪ್ಯೂಟ್ ಎಂದು ಮಾಡಬಹುದಿತ್ತು. ಆದರೆ ನಾನು ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—He is not imputing any motive.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಹೇಳಿರುವುದು ಒಂದೇ ಒಂದು. ನೀವು ಟ್ಯಾಕ್ಸ್ ಹಾಕಿ ಎಂದು ಕೇಳಲಿಲ್ಲ, ನಾನು ಹೇಳಿದ್ದು ಏನೆಂದರೆ ಇಂಪೋರ್ಟ್ಸ್‌ಗೆ ಜಾಸ್ತಿಮಾಡಿ ಎಕ್ಸ್‌ಪೋರ್ಟ್ಸ್‌ಗೆ ಕಡಿಮೆ ಮಾಡಿ ಎಂದು. ರೆಕಾರ್ಡ್ಸ್ ತೆಗೆಸಿ ನೋಡಿ. ಲೋಕಲ್ ಇಂಡಸ್ಟ್ರೀಸ್ಸನ್ನು ಡೆವಲಪ್ ಮಾಡಬೇಕಾದರೆ ಇಂಪೋರ್ಟ್ಸ್ ಮೇಲೆ ಟ್ಯಾಕ್ಸ್ ಜಾಸ್ತಿ ಹಾಕಬೇಕು. ಎಕ್ಸ್‌ಪೋರ್ಟ್ಸ್ ಮೇಲೆ ಕಡಿಮೆ ಮಾಡಬೇಕೆಂದು ಹೇಳಿದ್ದೇನೆಯೇ ವಿನಹ...I did not urge it. I only suggested.

ಶ್ರೀ ವಾಟಾಳ್ ನಾಗರಾಜ್.—ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಇದರಲ್ಲಿ ಏನೂ ಅನುಮಾನ ಪಡಬೇಕಾಗಿಲ್ಲ. ಧೈರ್ಯಮಾಡಿ ಇದನ್ನು ಸಂಪೂರ್ಣವಾಗಿ ಜಾರಿಗೆ ತೆಗೆದುಕೊಂಡು ಬನ್ನಿ.

ಶ್ರೀ ಎಂ. ರಾಜಶೇಖರಮೂರ್ತಿ.—ಹೆಂಡ ಮಾರುವುದನ್ನು ನಿಷೇಧ ಮಾಡಿದ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅನೇಕರು ಈ ಉದ್ಯೋಗದಲ್ಲಿದ್ದವರು ಕಷ್ಟದಲ್ಲಿದ್ದಾರೆ. ಅವರ ಸಂಖ್ಯೆ ಬಹಳಮಟ್ಟಿಗೆ ಇದೆ. ಸಾವಿರಾರು ಜನರು ಇದ್ದಾರೆ. ಈಗ ಇವರೆಲ್ಲ ನಿರುದ್ಯೋಗಿಗಳಾಗುತ್ತಾರೆ. ಅವರಿಗೆ ಏನು ಮಾಡಬೇಕು ಎನ್ನತಕ್ಕಂಥ ಸಮಸ್ಯೆ ಇದೆ. ಅವರಿಗೆ ಏನು ಮಾಡಬೇಕೆಂದು ನಾವು ಈಗಾಗಲೇ ಯೋಚನೆ ಮಾಡುತ್ತಿದ್ದೇವೆ. ಈಗ ಅನೇಕ ತೆಂಗಿನಮರಗಳು ನಮ್ಮ ರಾಜ್ಯದಲ್ಲಿವೆ. ಫೆನ್ನಿ ತಯಾರು ಮಾಡತಕ್ಕಂಥವರು ಇದ್ದಾರೆ. ಫೆನ್ನಿ ತಯಾರು ಮಾಡಲು ಸುಮಾರು ೨೧ ಜನರಿಗೆ ಲೈಸೆನ್ಸ್ ಕೊಟ್ಟಿದ್ದೇವೆ. ಫೆನ್ನಿ ಮ್ಯಾನುಫ್ಯಾಕ್ಚರ್ ಮಾಡಬೇಕಾದರೆ ತೆಂಗಿನಮರದ ಎಳನೀರು ಏನಿದೆ ಅದು ಬೇಕಾಗುತ್ತದೆ. ಅದನ್ನು ರಾಮೆಟೀರಿಯಲ್ ಆಗಿ ಫೆನ್ನಿ

ತಯಾರು ಮಾಡುವುದಕ್ಕೆ ಉಪಯೋಗಿಸುತ್ತಾರೆ. ಅವರಿಗೆ ತೆಂಗಿನಮರಗಳನ್ನು ಅಲಾಟ್ ಮಾಡಬೇಕೆಂದು ಸರ್ಕಾರದ ಯೋಚನೆಯಲ್ಲಿದೆ. ಮತ್ತು ಏನು ಇಲ್ಲಿ ನಿರುದ್ಯೋಗಿಗಳಾಗುತ್ತಾರೆ ಅವರೆಲ್ಲರೂ ನಮ್ಮ ರಾಜ್ಯದವರು ಅಲ್ಲ. ಅನೇಕರು ತಮಿಳುನಾಡಿನಿಂದ ಕೂಡ ಬಂದವರು ಇದ್ದಾರೆ.

೧೨-೦೦ ಮಧ್ಯಾಹ್ನ

ಇಲ್ಲಿ ಉದ್ಯೋಗ ಇಲ್ಲ ಎಂದರೆ, ತಮಿಳುನಾಡಿಗೆ ವಾಪಸ್ ಹೋಗುತ್ತಾರೆ. ಉಳಿದವರು ನಮ್ಮ ರಾಜ್ಯದಲ್ಲಿಯೇ ಇನಿರುತ್ತಾರೆ, ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಬೇರೆ ಬೇರೆ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳುತ್ತೇವೆ. ಅನೇಕರು ನನ್ನ ಹತ್ತಿರ ಬಂದಿದ್ದರು; ಅವರು ಕೆಲವು ಸಲಹೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರುದ್ಯೋಗ ನಿವಾರಣೆ ಮಾಡುವುದಕ್ಕೆ ಪ್ರಯತ್ನಪಡುತ್ತೇವೆ.

ಇನ್ನು ಕೊಂಕಣ ರೈಲ್ವೆ ಬಗ್ಗೆ ಸರ್ಕಾರದಿಂದ ಯಾವ ನೆರವೂ ನೀಡಿಲ್ಲ, ಇವರೂ ಕೂಡ ಸಹಕರಿಸಬೇಕಾಗಿತ್ತು ಎಂದು ಹೇಳಿದ್ದಾರೆ. ರೈಲ್ವೆ ನಮಗೆ ಸಂಬಂಧಪಟ್ಟದ್ದಲ್ಲ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ನಮ್ಮಿಂದ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಯಾವ ನೆರವು ಬೇಕೋ ಅದನ್ನು ನಾವು ಕೊಡುತ್ತೇವೆ. ಫೈನಾನ್‌ಷಿಯಲ್ ಕಮಿಟ್‌ಮೆಂಟ್ ಅಥವಾ ಇನ್ನೇನಾದರೂ ವ್ಯವಸ್ಥೆ ಮಾಡಬೇಕೆಂದರೆ ಕಷ್ಟವಾಗುತ್ತದೆ, ನಾವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ರೋಡ್ಸ್ ಬಗ್ಗೆ ಅನೇಕ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಹೇಳತಕ್ಕಂಥಾದ್ದು ನಿಜ. ಸುಮಾರು ೭-೮ ವರ್ಷಗಳಿಂದ ರಸ್ತೆಗಳು ಕೆಟ್ಟು ಹೋಗಿದ್ದು, ಅವುಗಳ ರಿಪೇರಿ ಕೆಲಸ ಆಗಿಲ್ಲ. ರಸ್ತೆಗಳಲ್ಲಿ ಬಹು ಭಾಗವನ್ನು ಜಿಲ್ಲಾ ಪರಿಷತ್ತಿಗೆ ವಹಿಸಲಾಗಿದೆ. ಜಿಲ್ಲಾ ಪರಿಷತ್ತಿನಲ್ಲಿ ಎಷ್ಟು ಹಣ ಖರ್ಚು ಮಾಡಿದರೂ ಈ ರಸ್ತೆಗಳ ದುರಸ್ತಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಒಮ್ಮೆ, ನಮ್ಮ ಜಿಲ್ಲಾಪರಿಷತ್ತಿನಲ್ಲಿ, ಅಧ್ಯಕ್ಷರನ್ನು ಕೇಳಿದೆ. ನೀವು ಏಕೆ ರಸ್ತೆಗಳ ದುರಸ್ತಿ ಕಾರ್ಯವನ್ನು ಮಾಡಿಲ್ಲ ಎಂದು. ಅದಕ್ಕೆ ಅವರು ನಮಗೆ ಹಣ ಬರುವುದು ಸಾಕಾಗುವುದಿಲ್ಲವೆಂದೂ ನಮ್ಮ ಬಜೆಟ್ ೮೦ ಕೋಟಿಯಲ್ಲಿ ನೌಕರರ ಸಂಬಳಕ್ಕೆ ಸುಮಾರು ೪೧ ಕೋಟಿ ಖರ್ಚಾಗುತ್ತಿದೆ ಎಂದು ಹೇಳಿದರು. ಇದರಿಂದ, ಜಿಲ್ಲಾಪರಿಷತ್ತಿಗೆ ಸರ್ಕಾರದಿಂದ ಹೋದಂಥ ಹಣ ಎಷ್ಟರಮಟ್ಟಿಗೆ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಮತ್ತು ನಾನ್ ಡೆವಲಪ್‌ಮೆಂಟ್‌ಗೆ ಖರ್ಚಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಇದೇ ರೀತಿಯಾದ ಸಮಸ್ಯೆಗಳು ಬೇರೆ ಬೇರೆ ಜಿಲ್ಲಾಪರಿಷತ್ತಿನಲ್ಲೂ ಇರಬಹುದು. ಈ ರಸ್ತೆಗಳ ದುರಸ್ತಿ ಆಗಬೇಕಾದರೆ ಏನು ಮಾಡಬೇಕು, ಹೇಗೆ ಮಾಡಬೇಕು ಎಂಬುದು ಬಹಳ ಮುಖ್ಯವಾದುದು. ಒಂದು ವಿಷಯ ನನ್ನ ಮನಸ್ಸಿಗೆ ಹೊಳೆಯಿತು. ಜಿಲ್ಲಾ ಪರಿಷತ್ತಿಗೆ ಕೊಟ್ಟಿರತಕ್ಕ ಕೆಲವು ರಸ್ತೆಗಳು ಏನಿವೆ, ಅವುಗಳನ್ನು ಪಿ. ಡಬ್ಲ್ಯೂ. ಡಿ. ಗೆ ವರ್ಗಾವಣೆ ಮಾಡಿ, ಅವರ ಮುಖಾಂತರ ಈ ಕೆಲಸವನ್ನು ಮಾಡಬೇಕೆಂಬುದು ಒಂದೇ ಮಾರ್ಗ. ಮತ್ತೆ ಜಿಲ್ಲಾಪರಿಷತ್ತುಗಳಿಗೆ ಇನ್ನೂ ಹೆಚ್ಚು ಹಣವನ್ನು ಕೊಟ್ಟು, ಅವರ ಮುಖಾಂತರವೂ ಕೆಲವು ಕೆಲಸಗಳನ್ನು ಮಾಡಿಸಬೇಕೆಂಬುದು ಎರಡನೇ ಮಾರ್ಗ. ಈ ರೀತಿ ಜಿಲ್ಲಾಪರಿಷತ್ತಿನಿಂದ ರಸ್ತೆಗಳ ಕೆಲಸವನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಬೇಕೆಂದು ಹೇಳುತ್ತಿರುವುದು, ಜಿಲ್ಲಾಪರಿಷತ್ತಿನ ಕೆಲಸವನ್ನು ಮೊಟಕು ಮಾಡಬೇಕೆಂದಲ್ಲ. ಜಿಲ್ಲಾಪರಿಷತ್ತಿಗೆ ಕೆಲವು ತೊಂದರೆಗಳಿವೆ. ಜಿಲ್ಲಾಪರಿಷತ್ತು, ಆ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಂತೆ ಮಾತ್ರ ಕೆಲಸ ಮಾಡಬೇಕು. ಆದ್ದರಿಂದ ಕೆಲವು ರಸ್ತೆಗಳನ್ನು ರೀಟ್ರಾನ್ಸ್‌ಫರ್ ಮಾಡಿದರೆ, ಒಳ್ಳೆಯದು ಮತ್ತು ಎಲ್ಲೆಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ, ಅಂತಹ ಕಡೆ ಪಿ.ಡಬ್ಲ್ಯೂ.ಡಿ.ಗೆ ವರ್ಗಾವಣೆ ಮಾಡಿದರೆ ಅನುಕೂಲವಾಗುತ್ತದೆಂದು ಕಾಣುತ್ತದೆ. ನಾನು ಈ ವಿಚಾರದಲ್ಲಿ ಪಿ.ಡಬ್ಲ್ಯೂ.ಡಿ ಮಂತ್ರಿಗಳ ಜೊತೆ ಮಾತುಕತೆ ಮಾಡಿದ್ದೇನೆ. ಅಂತಿಮ ತೀರ್ಮಾನ ಕೈಗೊಳ್ಳುವ ಹಂತದಲ್ಲಿ ಇದ್ದೇವೆ...

ಶ್ರೀ ಟಿ. ಎಂ. ಮಂಜುನಾಥ್.— ಇವತ್ತು ಪಿ.ಡಬ್ಲ್ಯೂ.ಡಿ ನವರಿಗೆ ಕೆಲಸ ಇಲ್ಲ. ಈ ರೀತಿ ರಸ್ತೆಗಳ ಕೆಲಸವನ್ನು ಪಿ.ಡಬ್ಲ್ಯೂ.ಡಿ. ನವರಿಗೆ ವರ್ಗಾವಣೆ ಮಾಡಿದರೆ ಒಳ್ಳೆಯದು...

ಶ್ರೀ ಎಂ. ರಾಜಶೇಖರಮೂರ್ತಿ.— ಮತ್ತೆ ಕಾಫಿ ಬಗ್ಗೆ ಪರ್ಚೇಸ್ ಟ್ಯಾಕ್ಸ್ ವಜಾ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಒತ್ತಾಯಪೂರ್ವಕವಾಗಿ ಹೇಳಿದರು. ನಮ್ಮ ದೇಶದಲ್ಲಿ ಕಾಫಿ ಬೆಳೆ, ಸುಮಾರು ಶೇಕಡ ೭೦ ರಷ್ಟು ನಮ್ಮ ರಾಜ್ಯದಲ್ಲಿಯೇ ತಯಾರಾಗುತ್ತಿದೆ. ಬಾಕಿ ೩೦ ರಷ್ಟು ತಮಿಳುನಾಡು, ಕೇರಳ ಈ ಪ್ರದೇಶಗಳಲ್ಲಿ ತಯಾರಾಗುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ಬೇರೆ ಬೇರೆ ರಾಜ್ಯಗಳಲ್ಲಿ ಸೇಲ್ಸ್ ಟ್ಯಾಕ್ಸ್ ೬ ಪರ್ಸೆಂಟ್ ಇದೆ, ಆ ಮಟ್ಟಕ್ಕೆ ನಮ್ಮ ರಾಜ್ಯದ ಪರ್ಚೇಸ್ ಟ್ಯಾಕ್ಸ್‌ನ್ನು ಇಳಿಸಬೇಕೆಂದು ಹೇಳಿದ್ದಾರೆ.

ಬೇರೆ ರಾಜ್ಯಗಳಲ್ಲಿ ಅದರ ಉತ್ಪನ್ನ ಪ್ರಮಾಣ ಕಡಿಮೆ ಇರುವುದರಿಂದ ಅವರು ತೆರಿಗೆ ಕಡಿಮೆ ಮಾಡಿದರೂ ಅವರಿಗೆ ನಷ್ಟ ಆಗುವುದಿಲ್ಲ, ಆದರೆ ನಮ್ಮ ರಾಜ್ಯದಲ್ಲಿ ಇದು ಬಹಳ ಮುಖ್ಯವಾದ ಕಮಾಡಿಟಿ ಆಗಿರುವುದರಿಂದ ಪರ್ಚೇಸ್ ಟ್ಯಾಕ್ಸ್ ಕಡಿಮೆ ಮಾಡಿದರೆ ಅದರಿಂದ ೧೫ ಕೋಟಿ ರೂಪಾಯಿಗಳ ಆದಾಯ ಏನು ನಮಗೆ ಬರುತ್ತಿದೆ ಅದಕ್ಕೆ ಧಕ್ಕೆ ಬರುತ್ತದೆ. ಅವರ ವಾದ ಏನೆಂದರೆ, ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಕಾಫಿ ಬೆಲೆ ಬಹಳ ಕಡಿಮೆಯಾಗಿದೆ, ಅಲ್ಲಿ ಬೆಲೆ ಕಡಿಮೆಯಾಗಿರುವುದರಿಂದ ನಮ್ಮ ಕಾಫಿ ಪ್ರೊಡಕ್ಷನ್ ಕಡಿಮೆಯಾಗಿದೆ, ಬೆಲೆ ಕಡಿಮೆಯಾಗಿದೆ. ರೈತರಿಗೆ ತೊಂದರೆಯಾಗಿದೆ, ಆದುದರಿಂದ ಟ್ಯಾಕ್ಸ್ ಕಡಿಮೆ ಮಾಡಿ ಎಂದು ಅವರ ವಾದ, ನಿಜ ಎರಡೂ ಆಗಿದೆ, ನಾನು ಒಪ್ಪಿಕೊಳ್ಳುತ್ತೇನೆ, ಕಾಫಿ ಬೆಲೆ ಕಡಿಮೆಯಾಗಿದೆ ಮತ್ತು ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ನಮ್ಮ ಕಾಫಿಗೆ ಡಿಮ್ಯಾಂಡೂ ಕಡಿಮೆಯಾಗಿದೆ. ಇದಕ್ಕೆ ಕಾರಣ ಬೇರೆ ಇದೆ. ಬರೀ ಪರ್ಚೇಸ್ ಟ್ಯಾಕ್ಸ್ ಕಡಿಮೆ ಮಾಡುವುದರಿಂದ ಈ ಕಷ್ಟ ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಿವಾರಣೆ ಮಾಡುವ ಮಾರ್ಗ ಏನೆಂದರೆ, ಕಾಫಿ ಬಗ್ಗೆ ಇಂಟರ್‌ನ್ಯಾಷನಲ್ ಕೋಟಾ ಸಿಸ್ಟಮ್ ಇದೆ. ೧೯೬೨ನೇ ಇಸವಿಯ ಇಂಟರ್‌ನ್ಯಾಷನಲ್ ಅಗ್ರಿಮೆಂಟ್ ಪ್ರಕಾರ ಪ್ರತಿಯೊಂದು ದೇಶಕ್ಕೂ ಒಂದೊಂದು ಕೋಟಾ ಇದೆ. ರಷ್ಯಾ ಮತ್ತು ರಷ್ಯನ್ ಬ್ಲಾಕ್‌ನಲ್ಲಿರುವ ದೇಶಗಳು ಇದಕ್ಕೆ ಸೇರಿಲ್ಲ. ಅವು ಕೋಟಾ ಸಿಸ್ಟಮ್‌ಗೆ ಒಪ್ಪುವುದಿಲ್ಲ. ಬಾಕಿ ದೇಶಗಳು ಕೋಟಾ ಸಿಸ್ಟಮ್‌ಗೆ ಬರುತ್ತವೆ. ಇದಕ್ಕೋಸ್ಕರ ಇಂಟರ್‌ನ್ಯಾಷನಲ್ ಕಾಫಿ ಕೌನ್ಸಿಲ್ ಎಂದು ಇದ್ದು ಲಂಡನ್‌ನಲ್ಲಿ ಅದರ ಆಫೀಸ್ ಇದೆ. ಅವರು ಈ ಕೋಟಾ ಸಿಸ್ಟಮ್ ಮಾಡುತ್ತಾರೆ. ಆದರೆ ಈ ಕೋಟಾ ಸಿಸ್ಟಮ್ ಈಗ ಪೂರ್ತಿ ಕೊಲ್ಯಾಪ್ಸ್ ಆಗಿದೆ. ಅದು ಕೆಲಸ ಮಾಡುತ್ತಿಲ್ಲ. ಏತಕ್ಕೆಂದರೆ, ನಾನ್ ಕೋಟಾ ಕಂಟ್ರೀಸ್ ಏನಿವೆ ಅವು ಬೇರೆ ಬೇರೆ ದೇಶಗಳಲ್ಲಿ ಕಾಫಿ ಕೊಂಡು ಕೊಂಡು, ಕೋಟಾ ಕಂಟ್ರೀಸ್‌ಗೆ ಎಕ್ಸ್‌ಪೋರ್ಟ್ ಮಾಡುತ್ತಿವೆ. ಎರಡನೆಯದಾಗಿ ಕಾಫಿ ಪ್ರೊಡಕ್ಷನ್ ಜಾಸ್ತಿಯಾಗಿದೆ, ಸೆಲೆಕ್ಟಿವ್ ಬೇಸಿಸ್ ಮೇಲೆ ಅವರು ಬೈ ಮಾಡುತ್ತಿದ್ದಾರೆ. ಕೆನ್ಯಾ, ಉಗಾಂಡಾ ಬ್ರೆಜಿಲ್ ದೇಶಗಳಿಂದ ಒಳ್ಳೆಯ ಕಾಫಿ ಬರುತ್ತದೆ, ಆ ಕಾಫಿಗೆ ಡಿಮ್ಯಾಂಡ್ ಇರುತ್ತದೆ. ಅದನ್ನು ಕೊಂಡುಕೊಳ್ಳುತ್ತಾರೆ. ನಮ್ಮ ಕಾಫಿಯನ್ನು ಕೇಳುವವರೇ ಇಲ್ಲ. ಹೀಗೆ ನಾನಾ ಕಾರಣಗಳಿಗಾಗಿ ಈ ರೀತಿ ಆಗಿದೆ. ಬೇರೆ ದೇಶಗಳಲ್ಲಿ ಅಂದರೆ ಕೆನ್ಯಾ 'ಉಗಾಂಡಾ' ಕೊಲಂಬಿಯಾ, ಬ್ರೆಜಿಲ್, ಇಂಡೋನೇಷ್ಯಾ ಮುಂತಾದ ದೇಶಗಳಲ್ಲಿ ಕಾಫಿ ಉತ್ಪನ್ನ ಜಾಸ್ತಿಯಾಗಿ ಅವರು ನಮ್ಮ ರಾಷ್ಟ್ರದ ಕಾಫಿ ಮೇಲೆ ಕಾಂಪಿಟೇಷನ್ ಮಾಡುತ್ತಿರುವುದರಿಂದ ಕಾಫಿ ಮಾರ್ಕೆಟ್ ಬಹಳ ಕುಗ್ಗಿದೆ. ನಮ್ಮ ರಾಜ್ಯದಲ್ಲೂ ಕಾಫಿ ಪ್ರೊಡಕ್ಷನ್ ಕುಗ್ಗಿದೆ. ತೆರಿಗೆ ಕಡಿಮೆ ಮಾಡುವುದರಿಂದ ಈ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಎಂದು ನನ್ನ ಅನಿಸಿಕೆ. ಇದು ಉತ್ತಮವಾಗಬೇಕಾದರೆ ಏನು ಮಾಡಬೇಕೆಂದರೆ, ಇಂಡಿಯಾ ಸರಕಾರದವರು ಕೋಟಾ ಸಿಸ್ಟಮ್‌ಗೆ ಒತ್ತಾಯ ಮಾಡಬೇಕು. ಇದು ಹೊಸದೇನಲ್ಲ. ಹಿಂದೆಯೂ ಇಂತಹ ಪರಿಸ್ಥಿತಿ ಬಂದಿತ್ತು. ಹಿಂದೆ ಟೆಕ್ಸ್‌ಟೈಲ್ ಪ್ರಾಡೆಕ್ಟ್ಸನ್ನು ಇಂಡಿಯಾದಿಂದ ಎಕ್ಸ್‌ಪೋರ್ಟ್ ಮಾಡತಕ್ಕಂಥ ಕಾಲದಲ್ಲಿ, ಅಮೇರಿಕಾದವರು ಕೋಟಾ ಸಿಸ್ಟಮ್ ತೆಗೆದ ಮೇಲೆ ನಮ್ಮ ದೇಶದ ರೆಡಿಮೇಡ್ ಗಾರ್ಮೆಂಟ್ಸ್ ಹಾಗೂ ಟೆಕ್ಸ್‌ಟೈಲ್ ಪ್ರಾಡೆಕ್ಟ್ಸನ್ನು ಯಾರೂ ಕೊಂಡುಕೊಳ್ಳುವುದಕ್ಕೆ ಹೋಗುತ್ತಿರಲಿಲ್ಲ. ಆಗ ಇಂಡಿಯಾ ಗೌರ್ನಮೆಂಟ್‌ನವರು, ಅಮೇರಿಕಾ ಗೌರ್ನಮೆಂಟ್ ಜೊತೆ ನೆಗೋಷಿಯೇಟ್ ಮಾಡಿ ಕೋಟಾ ಸಿಸ್ಟಮ್ ಜಾರಿ ಮಾಡಲೇಬೇಕೆಂದು ಮತ್ತೆ ಅದನ್ನು ಜಾರಿಗೆ ತಂದುದರಿಂದ, ಇವತ್ತು the textile industry has gone up and we are earning a lot of foreign exchange from it. So, I also suggest in this connection to the Leader of Opposition to approach the Government of India so that they insist the American Government to have a quota system and allow the Indian coffee to other countries.

(ಶ್ರೀ ಬಿ.ಎಂ, ಇದಿನಬ್ಬ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇದು ಪರ್ಮನೆಂಟ್ ಸಲ್ಯೂಷನ್ ಆಗುತ್ತದೆ. ಆದುದರಿಂದ ಕೇಂದ್ರದಲ್ಲಿ ಅವರದ್ದೇ ಆದ ಸರಕಾರ ಇದೆ. ಅಲ್ಲಿ ಹೋಗಿ ಒತ್ತಾಯ ಮಾಡಿ, ಕೋಟಾ ಸಿಸ್ಟಮ್ ರೆಸ್ಟೋರ್ ಮಾಡಿಸಿಕೊಳ್ಳುವುದು ಉತ್ತಮವಾದ ಮಾರ್ಗ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿ ಬೆಲೆ ಕುಸಿದಿದೆ, ಅಂತರಿಕವಾಗಿಯೂ ಇದಕ್ಕೆ ಬೆಲೆ ಇಲ್ಲ. ಆದುದರಿಂದ ನೀವು ಈಗ ಸ್ವಲ್ಪ ರೈತರ ಸಹಾಯಕ್ಕೆ ಬನ್ನಿ. ಕೋಟಾ ಸಿಸ್ಟಮ್ ಬರಬೇಕು' ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಿಸಬೇಕೆಂಬುದರಲ್ಲಿ ನಮ್ಮ ಪ್ರಯತ್ನ ನಡೆದಿದೆ.

ಮಾಡುತ್ತಿದ್ದೇವೆ. ಆದರೆ ತತ್‌ಕ್ಷಣ ಸಹಾಯ ಮಾಡುವುದಕ್ಕೆ ಸಾಧ್ಯವೇ ? ಇಲ್ಲದಿದ್ದರೆ ಇಂಡಸ್ಟ್ರೀ ಹೋಗುತ್ತದೆ. That is all my point. The industry should not collapse. ನೀವು ಈಗಲೂ ರೈತರ ಸಹಾಯಕ್ಕೆ ಬರದೇ ಇದ್ದರೆ ಹೇಗೆ ? ಹಿಂದೆ ಒಳ್ಳೆಯ ಕಾಲದಲ್ಲೇ ಕೊಟ್ಟಿದ್ದಾರೆ. ಮುಂದೆ ಪರ್ಮನೆಂಟ್ ಸಲ್ಯೂಷನ್ ಮಾಡೋಣ. ಆದರೆ ಪರಿಸ್ಥಿತಿ ಸರಿಹೋಗುವವರೆಗೆ ಇದೊಂದು ವರ್ಷವಾದರೂ ನೀವು ಒಂದು ಟ್ಯಾಕ್ಸ್ ಹಾಕಿದೇ ಅಥವಾ ಬೇರೆ ಏನೂ ಮಾಡದೇ ಇದ್ದರೆ ಬಹಳ ಕಷ್ಟಕ್ಕೆ ಬರುತ್ತದೆ. This is all I can say.

ಈ ಕಷ್ಟ ತಾತ್ಕಾಲಿಕ ಒಂದು ವರ್ಷವಿರಬಹುದು. ಸ್ವಲ್ಪ ಕಷ್ಟಪಟ್ಟುಕೊಂಡು ಹೊತ್ತುಕೊಂಡು ಹೋದರೆ ಮುಂದೆ ಸರಿ ಹೋಗುತ್ತದೆ. ಈ ವರ್ಷ ಎಗ್‌ಜಮ್‌ಷನ್‌ಗೆ ಒಪ್ಪಿಕೊಂಡರೆ ಬಹಳ ಕಷ್ಟವಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟ ಇದೆ.

ಶ್ರೀ ವಾಟಾಳ್‌ನಾಗರಾಜ್.—ನಮ್ಮ ಹಣಕಾಸಿನ ಸಚಿವರು ಪಕ್ಕ ಮಾರವಾಡಿ ಇದ್ದ ಹಾಗೆ, ಅವರು ಒಪ್ಪಿಕೊಳ್ಳುವುದಿಲ್ಲ ಬಿಡಿ.

ಶ್ರೀ ಎಂ. ರಾಜಶೇಖರಮೂರ್ತಿ.— ಇನ್ನು ತೆರಿಗೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಯಾರಿಗೆ ರಿಯಾಯಿತಿ ತೋರಿಸಿದ್ದೇವು ಅಂದರೆ ಸಣ್ಣಪುಟ್ಟ ವ್ಯಾಪಾರಸ್ಥರಿಗೆ. ಅವರಿಗೆ ಆಫೀಸಿನಲ್ಲಿ ಬಹಳ ಕಿರುಕುಳ ಇತ್ತೆಂದು ದೂರುಗಳು ಬಂದಿದ್ದರಿಂದ ಒಂದು ಲಕ್ಷ ರೂಪಾಯಿಗಳವರೆಗಿನ ಟರ್ನ್‌ಓವರ್‌ಗೆ ಒಳಪಟ್ಟು ಏನು ಇದೆ ಅಂತಹವರು ಆಫೀಸಿಗೆ ಹೋಗಬೇಕಾಗಿಲ್ಲ ಮತ್ತು ಅಸೆಸ್ ಮಾಡತಕ್ಕಂಥ ಅಧಿಕಾರಿಗಳಿಗೆ ಬುಕ್ಸ್ ಆಫ್ ಅಕೌಂಟ್ಸ್ ಪ್ರೆಸೆಂಟ್ ಮಾಡದೆ ಕ್ಲೋಜ್ ಮಾಡಬಹುದು. ಎನ್ನತಕ್ಕಂಥ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ಇದರಿಂದ ಬಹಳಷ್ಟು ಜನ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಅನುಕೂಲವಾಗುತ್ತದೆ. ಇನ್‌ಕಮ್ ಟ್ಯಾಕ್ಸ್‌ನಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಅನುಸರಿಸಿ ಇದನ್ನು ಕಮರ್ಷಿಯಲ್ ಟ್ಯಾಕ್ಸ್‌ನಲ್ಲೂ ಅನುಸರಿಸುವಂತೆ ತೀರ್ಮಾನ ಮಾಡಿದ್ದೇವೆ. ಇದರಿಂದ ಬಹಳಷ್ಟು ಕಿರುಕುಳ ಕಡಿಮೆಯಾಗುತ್ತದೆ. ಮತ್ತು ಇದಕ್ಕೆ ಸಂಬಂಧಪಟ್ಟಂತಹ ಅನೇಕ ಅವ್ಯವಹಾರಗಳು ಕೂಡ ಕಡಿಮೆ ಆಗುತ್ತದೆ. ಇನ್ನು ಟರ್ನ್‌ಓವರ್ ಟ್ಯಾಕ್ಸ್ ೫ ಲಕ್ಷಕ್ಕಿಂತಲೂ ಜಾಸ್ತಿ ಹೊರರಾಜ್ಯಗಳಲ್ಲಿ ಇದೆ. ಅದನ್ನು ನಾವು ೫ ಲಕ್ಷ ರೂಪಾಯಿಗಳಿಂದ ೧೦ ಲಕ್ಷ ರೂಪಾಯಿಗಳವರೆಗೆ ಏರಿಸಿದ್ದೇವೆ. ಏಕೆಂದರೆ ಟರ್ನ್‌ಓವರ್ ಟ್ಯಾಕ್ಸ್ ಅವರ ಲಾಭದಿಂದ ಕೊಡತಕ್ಕಂಥ ತೆರಿಗೆ ವಸೂಲಿ ಮಾಡಿ ಕೊಡತಕ್ಕಂಥಾದ್ದು ಅಲ್ಲ. ಇನ್ನು ರಿಜಿಸ್ಟ್ರೇಶನ್ ಮಾಡತಕ್ಕಂಥ ಡೀಲರ್ಸ್ ವಾರ್ಷಿಕ ವಹಿವಾಟು ೭೫ ಸಾವಿರ ರೂಪಾಯಿಗಳಿಂದ ೧ ಲಕ್ಷಕ್ಕೆ ಜಾಸ್ತಿ ಮಾಡಿದ್ದೇನೆ. ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಪಾಟೀಲ್‌ರವರು ಮಾತನಾಡುತ್ತಾ ಪ್ರಸ್ತಾಪ ಮಾಡಿದರು ಅದೇನೆಂದರೆ ಶುಗರ್ ಕೇನ್ ವಿಚಾರದಲ್ಲಿ ತಾವೇನು ಈಗ ನಿಗದಿ ಮಾಡಿರುವ ೧೦ ಪರ್ಸೆಂಟ್ ad-valorem duty ಜಾಸ್ತಿ ಆಯಿತು ಅದನ್ನು ಕಡಿಮೆ ಮಾಡಬೇಕೆಂದು ಹೇಳಿದರು ಈಗ ಶುಗರ್ ಕೇನ್ ಪರ್ಚೇಸ್ ಟ್ಯಾಕ್ಸ್ ಏನು ಬರುತ್ತದೆ ಅದನ್ನು ಸರ್ಕಾರ ಇಟ್ಟುಕೊಳ್ಳುವುದಿಲ್ಲ. ಅದರಲ್ಲಿ ೧೨ ರೂಪಾಯಿಗಳನ್ನು ರೈತರಿಗೆ ವಾಪಸ್ ಕೊಡುತ್ತೇವೆ. ಬೇರೆ ರಾಜ್ಯಗಳಲ್ಲಿ ಈ ಟ್ಯಾಕ್ಸ್‌ನಲ್ಲಿ ಬಂದಂತಹ ಹಣವನ್ನು ರೈತರಿಗೆ ವಾಪಸ್ ಕೊಡುವುದಿಲ್ಲ. ಬೇರೆ ರಾಜ್ಯಗಳಲ್ಲಿ ಈ ರೀತಿ ಕೊಡುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ಆ ಬಗ್ಗೆ ನಾನು ತಿಳಿದುಕೊಳ್ಳುವುದಕ್ಕೂ ಹೋಗಲಿಲ್ಲ.

ಶ್ರೀ ಸಿ. ಬೈರೇಗೌಡ.— ಯಾವ ರೀತಿ ವಾಪಸ್ ಕೊಡುತ್ತೀರಿ. ಏತಕ್ಕೆ ಕೊಡುತ್ತೀರಿ ?

ಶ್ರೀ ಎಂ. ರಾಜಶೇಖರಮೂರ್ತಿ.— ಈ ಸಿಸ್ಟಂ ಮೊದಲಿನಿಂದಲೂ ಬಂದಿದೆ. ನಾವು ಮುಂದುವರಿಸುತ್ತಿದ್ದೇವೆ. ಮತ್ತೆ ಪರ್ಚೇಸ್ ಟ್ಯಾಕ್ಸ್ ರೈತರ ಮೇಲೆ ಬೀಳುತ್ತದೆ ಎಂದು ನನಗೆ ಅನೇಕ ಮನವಿಗಳು ಬಂದಿದ್ದರಿಂದ ಈ ತೆರಿಗೆಯನ್ನು ೧೦ ಪರ್ಸೆಂಟ್‌ನಿಂದ ೮ ಪರ್ಸೆಂಟ್‌ಗೆ ಕಡಿಮೆ ಮಾಡಲಿಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಇನ್ನು ೫೦ ಸಿಸಿ ಮೋಟಾರು ವಾಹನಗಳಿಂದ ೩೦೦ ಸಿಸಿ ವಾಹನಗಳವರೆಗೆ ನಾನು ವಿಧಿಸಿದ್ದ ತೆರಿಗೆ ೮೫೦ ರೂಪಾಯಿಗಳಿಂದ ೧೫೦೦ ರೂಪಾಯಿಗಳು ಎಂದು ಈ ತೆರಿಗೆ ಬಹಳ ಜಾಸ್ತಿ ಆಯಿತು, ಇದನ್ನು ಕಡಿಮೆ ಮಾಡಿ ಎಂದು ಅನೇಕ ಮನವಿಗಳು ಬಂದಿದ್ದರಿಂದ ೮೫೦ ರಿಂದ ೧೨೦೦ ರೂಪಾಯಿಗಳಿಗೆ ಇಳಿಸಿದ್ದೇನೆ ಇದರಲ್ಲಿ ಸುಮಾರು ೩೦೦ ರೂಪಾಯಿಗಳ ರಿಯಾಯಿತಿ ತೋರಿಸಿದ್ದೇನೆ. ಇನ್ನು ಸಿಲ್ಕ್ ಬಗ್ಗೆ ಮಾತನಾಡುತ್ತಾ ಈ ರೇಷ್ಮೆ ಕೈಗಾರಿಕೆ ಬಹಳ ಮುಖ್ಯವಾದುದು ಇದು ಒಂದು ಗೃಹ ಕೈಗಾರಿಕೆ, ಇದು ವ್ಯವಸಾಯ ಅಭಿವೃದ್ಧಿಗೆ ಹೊಂದಿಕೊಂಡಿರುವಂತಹ ಕೈಗಾರಿಕೆ ಇದು ಒಂದು ರೀತಿ ಅಗ್ರೋ ಇಂಡಸ್ಟ್ರಿ ಇದ್ದ ಹಾಗೆ ಈ ಸಿಲ್ಕ್‌ಗೆ ಹೆಚ್ಚಿನ ತೆರಿಗೆ ಹಾಕಿರುವುದನ್ನು ಈ ಇಂಡಸ್ಟ್ರಿಗೆ ಸ್ವಲ್ಪ ಧಕ್ಕೆ ಬರಬಹುದು ಇದರ ಬಗ್ಗೆ ಸ್ವಲ್ಪ ರಿಯಾಯಿತಿ ತೋರಿಸಬೇಕೆಂದು ಹೇಳಿದರು

ಹಾಗೂ ಈ ಬಗ್ಗೆ ನನಗೆ ಮನವಿಗಳು ಬಂದಿವೆ. ಆ ಪ್ರಯುಕ್ತ ಸಿಲ್ಕ್‌ಗೆ ೪ ಪರ್ಸೆಂಟ್‌ನಿಂದ ೨ ಪರ್ಸೆಂಟ್‌ಗೆ ಇಳಿಸಿದ್ದೇನೆ. ಈ ೨ ಪರ್ಸೆಂಟ್ ಕೇವಲ ರಾ ಸಿಲ್ಕ್, ಟ್ವಿಸ್ಟಿಂಗ್ ಸಿಲ್ಕ್, ಫ್ಲೌನ್ ಸಿಲ್ಕ್‌ಗೆ ಮಾತ್ರ. ಅದಕ್ಕೆ ಎಕ್ಸೆಮ್ಷನ್ ಕೊಟ್ಟು ಉಳಿದ ಒಂದಕ್ಕೆ ಎರಡು ಪರ್ಸೆಂಟ್ ಮಾತ್ರ ಕಲೆಕ್ಟ್ ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ, ಟ್ರೈಲರ್‌ಗೆ ಲೈಫ್ ಟೈಮ್ ಟ್ಯಾಕ್ಸ್ ಏನಿತ್ತು.......

ಶ್ರೀ ಚೌಡಾರೆಡ್ಡಿ.— ರೇಷ್ಮೆಯಲ್ಲಿ ಯಾವ ಯಾವುದಕ್ಕೆ ತೆರಿಗೆ ಕಡಿಮೆ ಮಾಡಿರುವುದು?

ಶ್ರೀ ಎಂ. ರಾಜಶೇಖರಮೂರ್ತಿ.— ರಾ ಸಿಲ್ಕ್, ಟ್ವಿಸ್ಟೆಡ್ ಸಿಲ್ಕ್. ಇವೆಲ್ಲಾ ಶ್ರೀಮಂತರೇ ಉಪಯೋಗಿಸತಕ್ಕ ವಸ್ತು. ಇದರಿಂದ ಯಾರಿಗೂ ತೊಂದರೆಯೇನೂ ಆಗುವುದಿಲ್ಲ.

ಇನ್ನು ಟ್ರೈಲರ್‌ಗೆ ಲೈಫ್ ಟೈಮ್ ಟ್ಯಾಕ್ಸ್ ಎಂದು ೧೫೦೦ ರೂಪಾಯಿಗಳನ್ನು ಹಾಕಿರುವುದು ಜಾಸ್ತಿ, ಅದನ್ನು ಕಡಿಮೆ ಮಾಡಬೇಕೆಂದು ಅನೇಕ ಜನ ಮಾನ್ಯಸದಸ್ಯರುಗಳು ಹೇಳಿದ್ದಾರೆ. ಆದ್ದರಿಂದ, ಅದನ್ನು ೧೦೦೦ ರೂಪಾಯಿಗೆ ಕಡಿಮೆ ಮಾಡಿದ್ದೇನೆ. ೫೦೦ ರೂಪಾಯಿಗಳನ್ನು ಅದರಲ್ಲಿ ರಿಯಾಯಿತಿ ತೋರಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಕನ್ನಡ ಫಿಲ್ಮ್‌ಗಳು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿವೆ. ಕನ್ನಡ ಫಿಲ್ಮ್‌ಗಳನ್ನು ಕರ್ನಾಟಕ ರಾಜ್ಯ ಬಿಟ್ಟು ಬೇರೆ ರಾಜ್ಯಗಳಲ್ಲಿ ಸ್ಕ್ರೀನ್ ಮಾಡುವುದಕ್ಕೆ ಯಾರೂ ಒಪ್ಪಿಕೊಳ್ಳುವುದಿಲ್ಲ. ಆದರೆ ಬೇರೆ ಭಾಷೆ ಫಿಲ್ಮ್‌ಗಳು ಕರ್ನಾಟಕ ರಾಜ್ಯದಲ್ಲಿ ರಿಲೀಸ್ ಆಗುತ್ತವೆ. ತೆಲಗು, ತಮಿಳು, ಮಲೆಯಾಳಂ, ಹಿಂದಿ ಈ ರೀತಿ ಎಲ್ಲಾ ಭಾಷೆ ಫಿಲ್ಮ್‌ಗಳೂ ಕರ್ನಾಟಕ ರಾಜ್ಯದಲ್ಲಿ ಸ್ಕ್ರೀನ್ ಆಗುತ್ತವೆ. ಕನ್ನಡ ಫಿಲ್ಮ್‌ಗೆ ಮಾರ್ಕೆಟ್ ಬಹಳ ಲಿಮಿಟೆಡ್. ಅನೇಕ ಜನ ಪ್ರೊಡ್ಯೂಸರ್‌ಗಳು ಕನ್ನಡ ಪಿಕ್ಚರ್‌ಗಳನ್ನು ತಯಾರು ಮಾಡಿ ಕೈಸುಟ್ಟುಕೊಂಡಿದ್ದಾರೆ. ಆದ್ದರಿಂದ, ಫೀಚರ್ ಕನ್ನಡ ಫಿಲ್ಮ್‌ಗಳ ಮೇಲೆ ಏನು ಟ್ಯಾಕ್ಸ್ ಹಾಕಬೇಕೆಂದು ಯೋಚನೆ ಮಾಡಿದ್ದೆನೋ ಅದನ್ನು ಕೈ ಬಿಟ್ಟಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್.— ಕನ್ನಡ ಫಿಲ್ಮ್‌ಗಳಿಗೆ ಸಹಾಯ ಧನವನ್ನು ಜಾಸ್ತಿ ಮಾಡಿ ಕನ್ನಡ ಚಿತ್ರಗಳಿಗೆ ಮಾತ್ರ ಇದನ್ನು ಮಾಡಿ.

ಶ್ರೀ ಎಂ. ರಾಜಶೇಖರಮೂರ್ತಿ.— ಕನ್ನಡ ಚಿತ್ರಗಳಿಗೆ ಸಬ್ಸಿಡಿ ರಿವೈಸ್ ಮಾಡಿಯೆಂದು ಕೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.— ಸಿಲ್ಕ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡಿದ್ದೀರಿ. ಬೆಲ್ಲ, ಮೆಣಸಿನಕಾಯಿ, ಉಪ್ಪಿಗೆ ಟ್ಯಾಕ್ಸ್ ಕಡಿಮೆ ಮಾಡುತ್ತೀರಾ?

ಶ್ರೀ ಎಂ ರಾಜಶೇಖರಮೂರ್ತಿ.— ಅದನ್ನು ಸ್ಟಡಿ ಮಾಡುತ್ತಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್.— ಸಬ್ಸಿಡಿ ಬಗ್ಗೆ ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ.— ಈಗ ಎರಡೂವರೆ ಲಕ್ಷ ರೂಪಾಯಿಗಳವರೆಗೆ ಸಬ್ಸಿಡಿ ಇದೆ. ೮–೧೦ ಲಕ್ಷ ರೂಪಾಯಿಗಳಲ್ಲಿ ಫಿಲ್ಮ್‌ಗಳನ್ನು ತಯಾರು ಮಾಡುತ್ತಿದ್ದ ಕಾಲದಲ್ಲಿ ಎರಡೂವರೆ ಲಕ್ಷ ರೂಪಾಯಿಗಳೆಂದು ಸಬ್ಸಿಡಿ ಫಿಕ್ಸ್ ಮಾಡಲಾಗಿತ್ತು. ಈವಾಗ ಮಿನಿಮಮ್ ೨೦ ಲಕ್ಷ ರೂಪಾಯಿಗಳನ್ನು ಒಂದು ಫಿಲ್ಮ್‌ಗೆ ಖರ್ಚು ಮಾಡಬೇಕಾಗಿದೆ. ಒಂದು ಫಿಲ್ಮ್‌ಗೆ ೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದವರೂ ಇದ್ದಾರೆ. ಕನ್ನಡ ಫಿಲ್ಮ್ ತೆಗೆಯಲು ಹೊಸ ಹೊಸ ಜನರು ಬಂದಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಫಿಲ್ಮ್‌ಗಳು ತಯಾರಾದವು. ಹೀಗೆ ಬರನ್ನೇ ನಂಬಿಕೊಂಡಿದ್ದಿದ್ದರೆ ಫಿಲ್ಮ್‌ಗಳು ಹೆಚ್ಚು ಸಂಖ್ಯೆಯಲ್ಲಿ ಪ್ರೊಡಕ್ಷನ್ ಆಗುತ್ತಿರಲಿಲ್ಲ. ಈಗಿನ ಕಾಲದಲ್ಲಿ ಫಿಲ್ಮ್‌ಗಳನ್ನು ತಯಾರು ಮಾಡಬೇಕಾದರೆ ಬಹಳ ಕಷ್ಟ ಇರುವುದರಿಂದ ಸಬ್ಸಿಡಿ ಹಣವನ್ನು ಜಾಸ್ತಿ ಮಾಡಿ ಎಂದು ಕೇಳಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಅವರು ಹೇಳಿದಷ್ಟು ಸಬ್ಸಿಡಿಯನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ, ನಮ್ಮ ಹಣಕಾಸಿನ ಪರಿಸ್ಥಿತಿಗೂ ತೊಂದರೆಯಾಗಬಾರದು ಮತ್ತು ಅವರಿಗೂ ನೋವಾಗಬಾರದೆನ್ನುವ ಉದ್ದೇಶದಿಂದ ಈಗ ಎರಡೂವರೆ ಲಕ್ಷ ರೂಪಾಯಿಗಳ ಸಬ್ಸಿಡಿ ಹಣ ಏನಿದೆ ಅದರ ಜೊತೆಗೆ ಇನ್ನೂ ೫೦ ಸಾವಿರ ರೂಪಾಯಿಗಳನ್ನು ಸೇರಿಸಿ ೩ ಲಕ್ಷ ಸಬ್ಸಿಡಿ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್.— ಅನೇಕ ಜನರಿಗೆ ಸಬ್ಸಿಡಿ ಹಣ ಸಿಗದೆ ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ಮಾನ್ಯ ಹಣಕಾಸಿನ ಸಚಿವರು ಕನ್ನಡ ಚಲನಚಿತ್ರಗಳಿಗೆ ಕೊಡುವ ಸಬ್ಸಿಡಿಯನ್ನು ೫ ಲಕ್ಷ ರೂಪಾಯಿಗಳಿಗಾದರೂ ಏರಿಸಬೇಕು. ಅದೇ ಸಂದರ್ಭದಲ್ಲಿ ತಾವುಗಳು ಒಂದು ಕಾನೂನು ಮಾಡಿ, ಚಲನಚಿತ್ರದ ಕಥೆಯು ಉತ್ತಮವಾಗಿರಬೇಕು, ಉತ್ತಮವಾದ ಸಂಭಾಷಣೆಯೂ ಇರಬೇಕು,

ಅಂಥಹವುಗಳಿಗೆ ಮಾತ್ರ ಸಬ್ಸಿಡಿಯನ್ನು ಕೊಡುತ್ತೇವೆ ಎಂದು ಹೇಳಬೇಕು. ಅದೇ ರೀತಿಯಲ್ಲಿ ಕನ್ನಡ ಚಲನಚಿತ್ರೋದ್ಯಮಕ್ಕೆ ಬಹಳಷ್ಟು ಶ್ರಮ ಪೂರ್ವಕವಾಗಿ ದುಡಿದು ಕನ್ನಡದ ಏಳಿಗೆಗೆ ಕಾರಣರಾದ ದಿವಂಗತ ಕಣಗಾಲ್ ಪ್ರಭಾಕರ ಶಾಸ್ತ್ರಿಯವರಿಗೆ ಮರಣೋತ್ತರ ಪ್ರಶಸ್ತಿಯನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಹೇಳಿಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ — ಕರ್ನಾಟಕದಲ್ಲಿ ತಯಾರಾದ ಕನ್ನಡ ಚಿತ್ರಗಳಿಗೆ ಮಾತ್ರ ಈ ಸಬ್ಸಿಡಿಯು ಅನ್ವಯವಾಗುತ್ತದೆಯಲ್ಲವೆ ?

ಶ್ರೀ ಎಂ. ರಾಜಶೇಖರ ಮೂರ್ತಿ.— ಹೌದು.

ಶ್ರೀ ಎಸ್. ಬಂಗಾರಪ್ಪ — ಮಾನ್ಯ ಸಚಿವರು ಒಪ್ಪಿಕೊಂಡ ಹಾಗೆ ಇವೊತ್ತು ಕನ್ನಡ ಚಿತ್ರ ಒಂದರ ತಯಾರಿಕೆಯ ಖರ್ಚು ವೆಚ್ಚಗಳು ಜಾಸ್ತಿಯಾಗಿದೆ. ಒಂದು ಚಿತ್ರವನ್ನು ತಯಾರಿಸಿ ಪ್ರದರ್ಶನಕ್ಕೆ ಬಿಡಬೇಕಾದರೆ ಹಿಂದೆ ೮–೧೦ ಲಕ್ಷ ರೂಪಾಯಿಗಳವರೆಗೆ ಖರ್ಚಾಗುತ್ತಿತ್ತು. ಅದೇ ವೆಚ್ಚವು ಇವೊತ್ತು ೨೦–೩೦ಲಕ್ಷ ರೂಪಾಯಿ ಗಳವರೆಗೆ ಆಗುತ್ತದೆ. ತಯಾರಾದ ಚಿತ್ರಗಳಿಗೆ ಸೀಮಿತ ಮಾರುಕಟ್ಟೆ ಇರುವುದರಿಂದು ಅದರ ಪರಿಣಾಮವು ನಮಗೆಲ್ಲಾ ತಿಳಿದಿರುವುದೇ ಆಗಿದೆ. ಹಿಂದೆ ಒಂದೂವರೆ ಲಕ್ಷ ರೂಪಾಯಿಗಳ ಸಬ್ಸಿಡಿ ಇದ್ದುದ್ದು ನಂತರ ೨ಲಕ್ಷ ರೂಪಾಯಿಗಳಾಗಿ, ಹಿಂದಿನ ಸರಕಾರದವರಿದ್ದಾಗ ಎರಡೂವರೆ ಲಕ್ಷರೂಪಾಯಿಗಳು ಆದುವು. ಹೀಗೆ ಮೊದಲು ೧೦ ಲಕ್ಷ ರೂಪಾಯಿಗಳ ವೆಚ್ಚದ ಸಿನಿಮಾಕ್ಕೆ ಎರಡೂವರೆ ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡುತ್ತಿರ ಬೇಕಾದರೆ ಈಗ ೨೦–೩೦ ಲಕ್ಷ ರೂಪಾಯಿಗಳಿಂದ ತಯಾರು ಮಾಡಿದ ಚಿತ್ರಗಳಿಗೆ ಸಬ್ಸಿಡಿಯನ್ನು ಹೆಚ್ಚಿಗೆ ಕೊಡುವುದು ಒಳಿತು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸಬ್ಸಿಡಿಯನ್ನು ಎರಡು ಪಟ್ಟು ಅಂದರೆ ೫ ಲಕ್ಷ ರೂಪಾಯಿಗಳವರೆಗೆ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅಂತೆಯೇ ಸರಕಾರದವರಲ್ಲಿ ಹಣಕಾಸಿನ ಪರಿಸ್ಥಿತಿಯು ಹೇಗಿದೆ ಎಂಬ ಬಗ್ಗೆ ನಾವುಗಳು ವಿಚಾರ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಎಲ್ಲಾ ಕಡೆಗಳಿಂದಲೂ ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದನ್ನು ಮಾನ್ಯ ಸಚಿವರು ಗಮನಿಸಿದ್ದಾರೆ. ೫೦ಸಾವಿರ ರೂಪಾಯಿಗಳನ್ನು ಏರಿಸುವುದೂ ಒಂದೇ, ಇತ್ತ ೨ವರೆ ಲಕ್ಷ ರೂಪಾಯಿಗಳನ್ನು ಕೊಡುವುದೂ ಒಂದೇ ಆಗುತ್ತದೆ. ಆದುದರಿಂದ ಈಗ ಸಬ್ಸಿಡಿಯು ಮೂರು ಲಕ್ಷಕ್ಕೆ ಏನು ಬಂದು ನಿಂತಿದೆ ಅದರ ಬದಲು ನಾವು ಕೇಳಿದ ಐದು ಲಕ್ಷವೂ ಬೇಡ. ದಯಮಾಡಿ ನಾಲ್ಕು ಲಕ್ಷ ರೂಪಾಯಿಗಳನ್ನಾದರೂ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಒಳ್ಳೆಯ ಕಥೆ ಮತ್ತು ಸಂಭಾಷಣೆಗಳುಳ್ಳ ಚಿತ್ರಗಳಿಗೆ ಮಾತ್ರ ಸಬ್ಸಿಡಿ ಕೊಡುವ ವ್ಯವಸ್ಥೆಯಾಗಬೇಕು. ಇತ್ತೀಚೆಗೆ ಕೆಟ್ಟ ಅಭಿರುಚಿಯ ಬಹಳಷ್ಟು ಕನ್ನಡ ಚಿತ್ರಗಳನ್ನು ತೆಗೆಯುತ್ತಾ ಇದ್ದಾರೆ. ಇದು ತಪ್ಪಬೇಕು. ಅಂತೆಯೇ ಕನ್ನಡ ಚಲನ ಚಿತ್ರಗಳನ್ನು ಸಬ್ಸಿಡಿಗಾಗಿ ಬೇರೆ ಕಡೆಯವರು ಬಂದು ತೆಗೆಯುತ್ತಾ ಇದ್ದಾರೆ. ನಮ್ಮ ರಾಜ್ಯದವರು ಸಾಲ, ಸೋಲ ಮಾಡಿಕೊಂಡು ಚಿತ್ರಗಳನ್ನು ತೆಗೆದು ಸೋತು ಹೋಗಿದ್ದಾರೆ. ನಮ್ಮ ರಾಜ್ಯದವರು ಚಿತ್ರ ತೆಗೆಯಲು ಅನುಕೂಲವಾಗುವಂತೆ ೫ ಲಕ್ಷ ರೂಪಾಯಿಗಳಿಗೆ ಸಬ್ಸಿಡಿಯನ್ನು ಏರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ.— ಮಾನ್ಯ ವಾಟಾಳ್ ನಾಗರಾಜ್‌ರವರು ಹಿಂದೆ ಮಾತನಾಡುತ್ತಾ ಕನ್ನಡಚಿತ್ರಗಳಿಗೆ ಕೊಡುವ ಸಬ್ಸಿಡಿ ಬಾಕಿ ಇದೆ, ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಇಲ್ಲಿಯ ತನಕ ಬಾಕಿಯಾಗಿ ಉಳಿದುಕೊಂಡಿದ್ದ ೧ ಕೋಟಿ ೯೨ ಲಕ್ಷ ರೂಪಾಯಿಗಳ ಸಬ್ಸಿಡಿ ಹಣವನ್ನು ನಾವು ಒಂದೇ ಕಂತಿನಲ್ಲಿ ಕೊಟ್ಟುಬಿಟ್ಟಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್.— ಮಾನ್ಯ ವೀರೇಂದ್ರಪಾಟೀಲ್‌ರವರು ಹಿಂದೆ ಲೋಕೋಪಯೋಗಿ ಸಚಿವರಾಗಿದ್ದಾಗ ನಂದಿಬೆಟ್ಟದಲ್ಲಿ ಒಂದು ಸಮಾರಂಭವನ್ನು ಕನ್ನಡ ಚಲನಚಿತ್ರದ ಬಗ್ಗೆ ಏರ್ಪಡಿಸಿದ್ದೆ. ೨೧ ವರ್ಷಗಳ ಹಿಂದೆಯೇ ಅವರಿಗೆ ಕನ್ನಡದ ಬಗ್ಗೆ ಇದ್ದ ಅಭಿಮಾನ, ಆಸಕ್ತಿಯು ಇಂದೂ ಇದೆ ಎಂದು ನಂಬಿದ್ದೇನೆ. ತಾವುಗಳು ಕನ್ನಡ ಚಲನಚಿತ್ರೋದ್ಯಮವು ಬೆಳೆಯುವಲ್ಲಿ ಆಸಕ್ತಿ ವಹಿಸಿ ಸಬ್ಸಿಡಿ ಹಣದ ಮೊತ್ತವನ್ನು ೫ ಲಕ್ಷ ಎಂದು ಘೋಷಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.— ಸಬ್ಸಿಡಿ ಹಣವನ್ನು ಜಾಸ್ತಿ ಮಾಡುವ ಬಗ್ಗೆ ಬಹಳಷ್ಟು ಜನ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಾ ಇದ್ದಾರೆ. ಆದರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಅಷ್ಟಾಗಿ ಉತ್ತಮವಾಗಿಲ್ಲ. ಮೂರು ಲಕ್ಷ ರೂಪಾಯಿಗಳಿಗೆ ಏರಿಸುತ್ತೇನೆ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರುಗಳು ಬಹಳಮಟ್ಟಿಗೆ ಬಾರ್ಗೈನ್ ಮಾಡುತ್ತಾ ಇದ್ದಾರೆ. ನಾನು ಸ್ವಲ್ಪ ಬಾರ್ಗೈನ್ ಮಾಡುತ್ತೇನೆ. ದಯವಿಟ್ಟು ಮೂರುವರೆಲಕ್ಷ ರೂಪಾಯಿಗಳಿಗೆ ಎಲ್ಲರೂ ಒಪ್ಪಿಕೊಂಡರೆ ನಾನು ಸಂತೋಷಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇನ್ನು ೫೦ ಸಾವಿರ ತಾನೇ ಅದನ್ನು ಸೇರಿಸಿ ೬ ಲಕ್ಷ ಮಾಡಿಬಿಡಿ.

ಶ್ರೀ ಸಿ. ಬೈರೇಗೌಡ.—ಬೇಡ ಸ್ವಾಮಿ ಸಾಕು. ಇಷ್ಟು ದಿಢೀರನೆ ಬೇರೆ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೀರಾ ?

(ಗದ್ದಲ)

ಶ್ರೀ ಆರ್. ವಿ. ದೇಶಪಾಂಡೆ.—ಬಾರ್ಗೈನ್ ಮಾಡುವುದು ಬೇಡ. ನಾವು ನಿಮಗೆ ಉತ್ತೇಜನ ಕೊಡುತ್ತೇವೆ. ೫ ಲಕ್ಷ ಕೊಟ್ಟುಬಿಡಿ.

ಶ್ರೀ ಎಂ. ರಾಜಶೇಖರಮೂರ್ತಿ.—ಆ ಮೇಲೆ ಐಎಂಎಲ್ ಎಕ್ಸ್‌ಪೋರ್ಟ್ಸ್ ಬಗ್ಗೆ ಏನು ೨೦ ರೂ. ಡ್ಯೂಟಿ ಹಾಕಲಾಗಿದೆ ಅದು ಜಾಸ್ತಿಯಾಯಿತು, ಕಡಿಮೆ ಮಾಡಿ ಎಂದು ಅನೇಕರು ಹೇಳಿದ್ದರು. ಆ ರೀತಿ ಕಡಿಮೆ ಮಾಡದಿದ್ದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿರುವುದಕ್ಕೆ ಧಕ್ಕೆ ಬರುತ್ತದೆ, ಹೊರಗಡೆ ಅದನ್ನು ಮಾರಾಟ ಮಾಡಲು ಬರುವುದಿಲ್ಲ ಆ ದೃಷ್ಟಿಯಿಂದ ೨೦ ರೂ ಏನು ಹಾಕಿದ್ದೀರಿ ಅದನ್ನು ಕಡಿಮೆ ಮಾಡಬೇಕೆಂದು ಕೇಳುತ್ತಿದ್ದರು.

ಶ್ರೀ ಡಿ. ಬಿ. ಚಂದ್ರೇಗೌಡ.—ಧಕ್ಕೆ ಬರುವುದಿಲ್ಲ. ಹೊರಗಡೆ ಹೋಗಿಬಿಡುವ ಅಪಾಯವೇ ಇದೆ. ಇಲ್ಲಿ ಜಾಸ್ತಿ ಎಂದು ಹೊಸೂರಿಗೆ ವರ್ಗಾಯಿಸಿಕೊಂಡರೆ ಇಂಡಸ್ಟ್ರೀನೇ ಹೋಯಿತು.

ಶ್ರೀ ಎಂ. ರಾಜಶೇಖರಮೂರ್ತಿ.—ನಾನು ಏಕೆ ೨೦ ರೂ ಹಾಕಿದೆ ಎಂದು ತಿಳಿಸುತ್ತೇನೆ. ಎಕ್ಸ್‌ಪೋರ್ಟ್‌ಗೆ ಒಂದು ರೂ. ಹಾಕಿದರು. ಮತ್ತು ಇಲ್ಲಿ ಮಾರಾಟ ಮಾಡುವಂಥ ವಸ್ತುಗಳ ಮೇಲೆ ೩೫ ರೂ ಹಾಕಿದರು. ಕೆಲವು ಜನ ಏನು ಮಾಡುತ್ತಿದ್ದಾರೆಂದರೆ ಹೊರಗಡೆ ಮಾರಾಟ ಮಾಡುತ್ತೇವೆಂದು ಹೇಳಿ ಅದನ್ನು ಇಲ್ಲೇ ಮಾರಾಟ ಮಾಡುತ್ತಿದ್ದಾರೆ. ಏಕೆಂದರೆ ೩೫ ರೂ ಏನು ಫ್ರೀಯಾಗಿ ಸಿಗುತ್ತಿತ್ತು ಆ ಟ್ಯಾಕ್ಸನ್ನೂ ಕೊಡುತ್ತಿರಲಿಲ್ಲ. ೩೫ ರೂ. ಪ್ರಯೋಜನ ಪಡೆಯುವ ಸಲುವಾಗಿ ಡಾಕ್ಯುಮೆಂಟ್ ತಯಾರು ಮಾಡಿ ಇಲ್ಲೇ ಸೇಲ್ ಮಾಡುತ್ತಿದ್ದರು. ಅದನ್ನೇ ಸೆಕೆಂಡ್ಸ್ ಎನ್ನುವುದು. ಈಗ ನಿಮಗೆ ಅರ್ಥವಿವರಣೆ ಕೊಡುತ್ತಿದ್ದೇನೆ ಸೆಕೆಂಡ್ಸ್ ಎಂದರೆ ಏನು ಎಂದು. ಇದರಿಂದ ನಮಗೆ ಬಹಳ ಲಾಸಾಗುತ್ತಿತ್ತು. ಅದನ್ನು ಸರಿದೂಗಿಸಬೇಕಾದರೆ ೨೦ ರೂ ಜಾಸ್ತಿ ಮಾಡಿ ೧೫ ರೂ. ಹೋದರೂ ಚಿಂತೆಯಿಲ್ಲ ಎಂದು ತೆರಿಗೆ ಹಾಕಿದೆವು. ಇದರಿಂದ ಇದರ ಹಿಂದೆ ಯಾವ ದುರುದ್ದೇಶವೂ ಇಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈಗ ಎಂಎಸ್‌ಐಎಲ್ ಮುಖಾಂತರ ಹೋಲ್‌ಸೇಲ್ ಡಿಸ್ಟ್ರಿಬ್ಯೂಷನನ್ನು ಸ್ಟೇಟ್ ತೆಗೆದುಕೊಂಡಿದೆ. ಇದರಿಂದ ಹೊರಗಡೆ ಕಳಿಸುತ್ತೇವೆಂದು ಹೇಳಿ ಇಲ್ಲೇ ಮಾರಾಟ ಮಾಡಲು ಬರುವುದಿಲ್ಲ. ಮುಂದೆ ಅವರ ಅನುಭವದಲ್ಲಿ ಇದರಿಂದ ಏನಾದರೂ ತೊಂದರೆಯಾಗಿದೆಯೆಂದು ನಮಗೆ ಕಂಡುಬಂದರೆ ಆಗ ರಿವೈಸ್ ಮಾಡುವುದಕ್ಕೆ ಸಿದ್ಧನಿದ್ದೇನೆ. ಅದೂ, ವ್ಯಾಪಾರ ಎಂಎಸ್‌ಐಎಲ್ ಮೂಲಕ ನಡೆಸಿದವರು ಮುಂದೆ ಬಂದರೆ ಮಾತ್ರ ರಿವೈಸ್ ಮಾಡುತ್ತೇ ಇಲ್ಲದಿದ್ದರೆ ಇಲ್ಲ.

೧೨-೩೦ ಪಿ. ಎಂ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಸಭಾಧ್ಯಕ್ಷರೆ, ಹೊರಗಡೆ ಬರತಕ್ಕಂಥದ್ದಕ್ಕೆ ಶೇಕಡ ಮೂರು ಇದೆ, ನನಗೆ ತಿಳಿದಹಾಗೆ ನಾವು ಇಲ್ಲಿಂದ ಕಳುಹಿಸುವುದಕ್ಕೆ ೨೦ ಇದೆ. ಅಂದರೆ ಇದರ ಅರ್ಥ ಏನಾಗುತ್ತದೆ, ನೀವು ಕಳುಹಿಸಬೇಡಿ. ಹೊರಗಡೆಯಿಂದ ತರಿಸಿಕೊಳ್ಳಬೇಡಿ ಎಂದೇ. ಇಂಪೋರ್ಟ್ ಜಾಸ್ತಿ ಮಾಡಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಮಾನ್ಯ ಮುಖ್ಯಮಂತ್ರಿಗಳು).—ಹೊರಗಡೆಯಿಂದ ಇಂಪೋರ್ಟ್ ಆದ ಮೇಲೆ ಅಲ್ಲಿ ಸೇಲ್ ಆಗಬೇಕು ತಾನೇ ? ಇಲ್ಲಿ ಸೇಲ್ ಆಗುವುದರ ಮೇಲೆ ೩೫ ಇರುವುದು.

ಶ್ರೀ ಎಸ್. ಹೆಚ್. ಕೌಜಲಗಿ.—ಒಂಭತ್ತು ರೂಪಾಯಿ ಇದ್ದದ್ದು ೧೮೦ ರೂಪಾಯಿ ಹೊರಗೆ ಕಳುಹಿಸುವುದಕ್ಕೆ ಆಗುತ್ತದೆ. ದಯವಿಟ್ಟು ತಾವು ಅದನ್ನು ವಿಚಾರ ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಇಪ್ಪತ್ತು ಪರ್‌ಸೆಂಟ್ ಹೋಗುವುದರಿಂದ ನಿಮ್ಮ ಉದ್ದೇಶ ತೆರಿಗೆ ಬರುತ್ತದೆ ಎನ್ನುವುದು ಇರಬಹುದು From one to 20%. ಈ ಸೆಕೆಂಡ್ಸ್ ಮತ್ತೊಂದು ಮಗದೊಂದು ನಮಗೆ ಗೊತ್ತಿಲ್ಲ. ಅದು ನನಗೆ ಹೊಸದು. ಈ ೨೦ ಪರ್‌ಸೆಂಟ್ ತೆರಿಗೆ ಹೋಗುವುದರಿಂದ ಹೊರಗಡೆ ಹೋಗುವಂಥದ್ದು ಮಾಲಲ್ಲ. ಇಂಡಸ್ಟ್ರೀಸ್ ಹೊರಗಡೆ ಹೋಗುತ್ತದೆ ಎನ್ನತಕ್ಕಂಥ ಶಂಕೆ. ೨೦-೩೦ ಕಿಲೋಮೀಟರ್‌ವರೆಗೆ ಇಂಡಸ್ಟ್ರೀಗಳನ್ನೇ ಎತ್ತಿ ಹೊರಗೆ ಹಾಕಿಬಿಟ್ಟರೆ

ಬರುವ ಒಂದು ಪರ್‌ಸೆಂಟ್ ತೆರಿಗೆ ಕೂಡಾ ಹೊರಟು ಹೋಗುತ್ತದೆ. ಹೊರಗಡೆಯಿಂದ ಬರತಕ್ಕಂಥದ್ದಕ್ಕೆ ಇಲ್ಲಿ ಬಂದರೆ, ರಾಜ್ಯದಲ್ಲಿ, ಹೊರಗಡೆಯಿಂದ ಬರತಕ್ಕಂಥದ್ದಕ್ಕೆ ರಾಜ್ಯದವರು ತೆರಿಗೆಯನ್ನು ಹಾಕುತ್ತಾರೆ. ಅವರು ಕೂಡಾ ತೆರಿಗೆಯನ್ನು ಹಾಕುತ್ತಾರೆ. ಈ ರೀತಿ ಪ್ಯಾರಿಟಿಯನ್ನು ಮಾಡುವಾಗ ಇಂಡಸ್ಟ್ರಿಯನ್ನು ಉಳಿಸಿಕೊಳ್ಳಬೇಕು. ಇಂಡಸ್ಟ್ರಿಗಳನ್ನು ಉಳಿಸಿಕೊಳ್ಳಬೇಕು. ಮತ್ತು ಅವು ಬದುಕಿರಬೇಕು. ಜೊತೆಗೆ ಹೊರಗಡೆಯಿಂದ ಬರತಕ್ಕಂಥದ್ದಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಕ್ಕದ ರೀತಿಯಲ್ಲಿ ಇಲ್ಲಿಂದ ಹೋಗುವುದಕ್ಕೆ ಹೆಚ್ಚು ಸಹಾಯ ಆಗುವ ರೀತಿಯಲ್ಲಿರಬೇಕು. ಇದರ ಬಗ್ಗೆ ಆಲೋಚನೆ ಮಾಡಿ, ಮರುಪರಿಶೀಲನೆ ಮಾಡಿ ಎಂದು ಹೇಳಿದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸಭಾಧ್ಯಕ್ಷರೇ, ತಮ್ಮ ಭಾಷಣದಲ್ಲಿ ಹೇಳಿಕೊಳ್ಳಬಹುದು, ಮೊಲಾಸಿಸ್ ಎನ್ನುವುದು ನಮ್ಮಲ್ಲಿ ಈಗ ಹೆಚ್ಚಿಗೆ ಇದೆ, ಅದನ್ನು ಸ್ಪಿರಿಟ್ ಆಗಿ ಕನ್‌ವರ್ಟ್ ಮಾಡುತ್ತೇವೆ, ಸ್ಪಿರಿಟ್ ಸಾರಾಯಿ. ಐ ಎಂ.ಎಲ್‌ನ್ನು ನಾವು ಮಾಡುತ್ತೇವೆ ಅದು ಎಕ್ಸಸ್ ಇದೆ ಎನ್ನತಕ್ಕಂಥದ್ದು. ಅಲ್ಲಿ ನಿಮಗೆ ಎಕ್ಸಸ್ ಇದೆ ಎನ್ನತಕ್ಕಂಥದ್ದು. ಎಕ್ಸಸ್ ಇದೆ, ಅದು ಮಾರಾಟ ವಾಗಲೇಬೇಕು. ಐ.ಎಂ.ಎಲ್. ಆಗಲಿ, ಸ್ಪಿರಿಟ್ ಆಗಲಿ ಅದು ಮಾರಾಟ ಆಗಲೇಬೇಕು. ಮಾರಾಟ ಇದ್ದಾಗ ಇಲ್ಲಿ ತಯಾರಾಗತಕ್ಕಂಥದ್ದು ಪಕ್ಕದಲ್ಲಿ ಬೇರೆ ರಾಜ್ಯದಲ್ಲಿ ಹೋಗಿ ಕೊನೆಯ ಪಕ್ಷ ಆ ರಾಜ್ಯದಲ್ಲಿರತಕ್ಕಂಥ ಬೆಲೆಗಾದರೂ ಕೂಡಾ ಮಾರಾಟವಾದರೆ ನಮ್ಮ ನಿಮ್ಮ ಉದ್ದೇಶ ಈಡೇರುತ್ತದೆ. ಆಗ ಆ ರೀತಿ ಆಗುತ್ತದೆ. ಆದರೆ ಈಗ ಆ ರೀತಿ ಆಗುತ್ತಿಲ್ಲ. ಹೊರಗಡೆಯಿಂದ ಇಲ್ಲಿ ಐ.ಎಂ.ಎಲ್. ಕೆಲವು ಸಂದರ್ಭಗಳಲ್ಲಿ ೮೦ ರೂಪಾಯಿ ಇರುತ್ತದೆ. ನಮ್ಮಿಂದ ಹೋಗಿರತಕ್ಕಂಥದ್ದಕ್ಕೆ ೧೨೦ ರೂಪಾಯಿ ಇರುತ್ತದೆ. ಸುಮಾರು ನಲವತ್ತು ರೂಪಾಯಿ ಒಂದು ಬಾಟಲ್ ಬೆಲೆ ಮೇಲೆ ವ್ಯತ್ಯಾಸ ವಾಗುತ್ತದೆ. ಇಲ್ಲಿಂದ ಒಂದು ಬಾಟಲ್‌ನ್ನು ಹೊರಗಡೆ ಕಳುಹಿಸುವುದಕ್ಕೆ ಆಗುವುದಿಲ್ಲ. ಇದು ಸ್ಪಷ್ಟವಾದ ಚಿತ್ರ ಇರತಕ್ಕಂಥದ್ದು. ಇದು ನಿಮ್ಮ ಎದುರುಗಡೆ ಇದೆ. ಆ ಕಾರಣಕ್ಕಾಗಿ ಇದನ್ನು ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇದೆಯೆಂಬ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಅಲ್ಲಿ ರೇಟ್ ಬಹಳ ಇದೆ.

ಶ್ರೀ ವೀರೇಂದ್ರ ಪಾಟೀಲ್ —ಈ ಬಗ್ಗೆ ಸ್ವಲ್ಪ ಸ್ಪಷ್ಟೀಕರಣ ಕೊಡುವುದು ಅವಶ್ಯಕತೆ ಎಂದು ನನಗನ್ನಿಸುತ್ತದೆ. ಬಹುಶಃ ಒಂದು ಭಾವನೆ ಅನೇಕ ಸದಸ್ಯರಿಗೆ ಬರ ಬಹುದು. ಒಂದು ರೂಪಾಯಿ ಎಕ್ಸ್‌ಪೋರ್ಟ್ ಡ್ಯೂಟಿ ಹೋಗಿ ೨೦ ರೂಪಾಯಿ ಹಾಕಿ ನಮ್ಮ ರಾಜ್ಯದಲ್ಲಿ ಏನು ಐ.ಎಂ ಎಲ್ ನ್ನು ಮಾನ್ಯುಫ್ಯಾಕ್ಚರ್ ಮಾಡುತ್ತಿದ್ದಾರೆ, ಅವರನ್ನು ಕೊಲ್ಲುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವ ಒಂದು ಭಾವನೆ ಅಥವಾ ವಾತಾವರಣ ನಿರ್ಮಾಣ ಆಗಬಹುದು. ಆದರೆ ಇದಕ್ಕೆ ಕಾರಣವೇನು ? ಇದನ್ನು ಸ್ವಲ್ಪ ಮಟ್ಟಿಗೆ ಹಣಕಾಸಿನ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಕಾರಣವಿಷ್ಟೆ, ನಾಲ್ಕು ಕೋಟಿ ಲೀಟರ್ ಐ.ಎಂ.ಎಲ್. ಕರ್ನಾಟಕದಲ್ಲಿ ತಯಾರಾಗುತ್ತಿದೆ. ಅದರಲ್ಲಿ ಬಹುಶಃ ೮೦ ಲಕ್ಷ ಲೀಟರ್ ಡಿಫೆನ್ಸ್‌ಗೆ ಹೋಗುತ್ತದೆ. ಅದರ ಬಗ್ಗೆ ಯಾರಿಗೂ ತಕರಾರು ಇಲ್ಲ. ಇನ್ನು ಉಳಿದದ್ದು ಮೂರು ಕೋಟಿ ಇಪ್ಪತ್ತು ಲಕ್ಷ ಲೀಟರ್‌ನಲ್ಲಿ ಲೆಕ್ಕಕ್ಕೆ ಕರ್ನಾಟಕದಲ್ಲಿ ಖರ್ಚಾಗುವುದು ಕೇವಲ ಒಂದು ಕೋಟಿ ಲೀಟರ್ ಮಾತ್ರ. ಅಲ್ಲಿಂದ ಉಳಿದದ್ದು ಸುಮಾರು ಎರಡು ಕೋಟಿ ಇಪ್ಪತ್ತು ಲಕ್ಷ ಲೀಟರ್ ಹೊರಗಡೆ ಹೋಗುತ್ತದೆ. ಹೊರಗೆ ಹೋಗುವುದಿಲ್ಲ. ಅದು ಇಲ್ಲಿಯೇ ತೀರುಗುತ್ತದೆ. ಇವತ್ತು ಏನಾಗುತ್ತಿದೆ ಎಂದರೆ ಈಗಾಗಲೇ ಸ್ವಲ್ಪಮಟ್ಟಿಗೆ ಬಿಸಿಬಿಸಿ ಚರ್ಚೆ ಆಯಿತು. ಯಾರು ಏಜೆಂಟರು ? ಯಾರು ಇದಕ್ಕೆ ಸಂಬಂಧಪಟ್ಟವರು ಎನ್ನುವುದರ ಬಗ್ಗೆ ಚರ್ಚೆ ಆಯಿತು. ಆದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. they speak volumes, about the corruption that was prevalent ಅದು ಅಂಕಿ ಸಂಖ್ಯೆಗಳಿಂದಲೇ ತಿಳಿಯುತ್ತದೆ. ಈಗ ಎರಡು ಕೋಟಿ ೨೦ ಲಕ್ಷ ಲೀಟರ್‌ನಲ್ಲಿ ನಿಮಗೆ ಹೇಳಬೇಕಾಗಿದ್ದರೆ ಹೋದ ವರ್ಷ ಒಂದು ಕೋಟಿ ಲೀಟರ್ ಮೇಲೆ ಪಾಂಡಿಚೇರಿಗೆ ಹೋಯಿತು ಎಂದು ಲೆಕ್ಕ ಬರೆಸಿದ್ದಾರೆ. ಬಹುಶಃ ಅವರಿಗೆ ಅಷ್ಟು ನೀರೂ ಬೇಕಾಗಿರಲಿಕ್ಕಿಲ್ಲ. exported to Pondichery ಎಂದು ಹೇಳಿದ್ದಾರೆ. ಪಾಂಡಿಚೇರಿಗೆ ಕಳಿಸಿದ್ದು ಒಂದು ಕೋಟಿ ೨೦ ಲಕ್ಷ ಲೀಟರ್ ಏನೋ ಇರಬಹುದು ಅದರ ಫಿಗರ್ಸ್‌ನ್ನು ಆ ನಂತರ ಹೇಳುತ್ತೇನೆ. ಬಹುಶಃ ಒಂದು ಕೋಟಿ ೨೦ ಲಕ್ಷ ಲೀಟರ್ ನೀರು ತೊಳೆದುಕೊಂಡರೂ ಇನ್ನೂ ಉಳಿಯುತ್ತದೆ ಏನೋ ಎಂದು ಅನಿಸುತ್ತದೆ. ಅಷ್ಟು ಐ.ಎಂ.ಎಲ್, ಪಾಂಡಿಚೆರಿಯಲ್ಲಿ ತೊಳಕೊಂಡಿದ್ದಾರೆ. ಇದರ ಮೇಲೆ ನೀವು ಲೆಕ್ಕ ಹಾಕಿ. ಇದು ಹೊರಗಡೆ ಹೋಗುತ್ತದೆಯೋ ಅಥವಾ ಇಲ್ಲೇ ಸುತ್ತಾಡುತ್ತಿದೆಯೋ ಎಂದು. ಹೊರಗಡೆ ಹೋದ ಹಾಗೆ ಮಾಡಿ ಇಲ್ಲೇ ಸುತ್ತಾಡುತ್ತಿರುತ್ತದೆ. ಏಕೆಂದರೆ ಒಂದು ರೂಪಾಯಿನಲ್ಲಿ ಸುತ್ತಿಸುವುದಕ್ಕೆ ಸಾಧ್ಯ ಇದ್ದರೆ ಯಾವ

ಹೆಚ್ಚು ೩೫-೩೬ ರೂಪಾಯಿ ಕೊಡುತ್ತಾನೆ? ಅದನ್ನು ನಾವು ವಿಚಾರ ಮಾಡಬೇಕಾಗುತ್ತದೆ, ಎಷ್ಟು ಹೋಗುತ್ತಿದೆ ಎಂದು ಈಗ ಅಂಕಿ ಸಂಖ್ಯೆಗಳನ್ನು ಹೇಳಬಹುದು. ಈಗ ಲೇಬಲ್ ಇಲ್ಲದೆ ಒಂದೂ ಕೂಡ ಯಾವ ಮ್ಯಾನುಫ್ಯಾಕ್ಚರ್ ಯೂನಿಟ್‌ನಿಂದ ಹೊರ ಹೋಗಬಾರದು. ಪ್ರತಿಯೊಂದಕ್ಕೂ ಲೇಬಲ್ ಹಚ್ಚಬೇಕು ಎಂದು ಮಾಡಿದ್ದೇವೆ. ಆ ಒಂದು ಸೆಕ್ಯೂರಿಟಿ ಲೇಬಲ್ ಮಾಡಿಸಿದ್ದೇವೆ. ಪ್ರಿಂಟ್ ಮಾಡುವುದಕ್ಕೆ ಸಹ ನಮ್ಮ ಹತ್ತಿರ ಕಷ್ಟ ಇದೆ. ಪ್ರಿಂಟಿಂಗ್ ಪ್ರೆಸ್ ನಮ್ಮಲ್ಲಿ ಇಲ್ಲ ಮದ್ರಾಸಿನಲ್ಲಿ ಪ್ರಿಂಟ್ ಮಾಡಿಸುತ್ತಿದ್ದೇವೆ, ನಮ್ಮ ಹತ್ತಿರ ಪ್ರೆಸ್ ಇಲ್ಲ. ಮತ್ತೊಬ್ಬರ ಕಡೆಯಿಂದ ಪ್ರಿಂಟಿಂಗ್ ಪ್ರೆಸ್ ಅನ್ನು ಇಟ್ಟು ಅದನ್ನು ನಾವು ಲೀಸ್‌ಗೆ ತೆಗೆದುಕೊಂಡು ನಮ್ಮ ಸೂಪರ್‌ವಿಷನ್‌ನಲ್ಲಿ ಪ್ರಿಂಟ್ ಮಾಡಿ ಲೇಬಲ್ ಇಲ್ಲದೆ ಇನ್ನು ಮುಂದೆ ಯಾವ ಬಾಟಲ್ ಕೂಡ ಯಾವ ಮ್ಯಾನುಫ್ಯಾಕ್ಚರಿಂಗ್ ಯೂನಿಟ್‌ನಿಂದ ಹೊರಗಡೆ ಹೋಗಬಾರದು ಎಂದು ಕಟ್ಟಪ್ಪಣೆ ಮಾಡಿದ್ದೇವೆ. ಇದನ್ನು ಜಾರಿಗೆ ತಂದಿರುವ ಪರಿಣಾಮವಾಗಿ ಹಣಕಾಸಿನ ಮಂತ್ರಿಗಳು ಇದರಿಂದ ಬರಬಹುದಾದಂತಹ ರೆವಿನ್ಯೂ ಎಷ್ಟು ಹೆಚ್ಚಾಗಿದೆ ಎಂಬುದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೊಡುತ್ತಾರೆ. ನನಗೆ ಅನ್ನಿಸುತ್ತದೆ, ಈ ದುಡ್ಡು ಯಾರ ಜೇಬಿಗೆ ಹೋಗುತ್ತಿತ್ತು ಎಂದು. ನಾವು ಅದನ್ನು ವಿಚಾರ ಮಾಡಬೇಕಾಗಿದೆ ದುರ್ದೈವದಿಂದ ನಾನು [illegible] ವರ್ಷದ ಮೇಲೆ ಇಲ್ಲಿ ಅಧಿಕಾರಕ್ಕೆ ಬಂದಿದ್ದೇನೆ. ಈ ಕುರ್ಚಿ ಮೇಲೆ ಕುಳಿತಿದ್ದೇನೆ ಈಗ ವಾತಾವರಣ ಏನು ಆಗಿದೆ ಅಂದರೆ ನಾವು ಟ್ಯಾಕ್ಸ್ ಕೊಡುವವರು ಅಲ್ಲ. ನಿಮ್ಮ ಪಾರ್ಟಿಗೆ ಬೇಕಾದರೆ ಒಂದು ಚೀಲ ತಂದು ಒಗೆಯುತ್ತೇವೆ, ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಿ. ಕೇಳಬೇಕಾದ ಹೇಳಬೇಕಾದ ಅಗತ್ಯ ಇಲ್ಲವೆಂದು ಹೇಳುವ ಒಂದು ವರ್ಗದ ಜನರಿದ್ದಾರೆ. ಅವರು ತಮಗೆ ಬೇಕಾದಂತಹ ಅಧಿಕಾರಿಗಳನ್ನು ಚೀಟಿ ಕೊಟ್ಟು ಪೋಸ್ಟಿಂಗ್ ಮಾಡಿಸಿಕೊಂಡು ಆರ್ಡರ್ ತೆಗೆದುಕೊಂಡು ಹೋಗುತ್ತಿದ್ದರು. ಇಂತಹವರಿಗೆ ಇವೊತ್ತು ಏನು ಆಗಿದೆ. ಸರ್ಕಾರದವರು ಎಲ್ಲಾ ಕಡೆ ಒದ್ದು ಬಿಟ್ಟರು, ನಮಗೆ ಉಸಿರಾಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುತ್ತಾರೆ. ನಾನು ಸ್ಪಷ್ಟವಾಗಿಯೇ ಹೇಳುತ್ತಿದ್ದೇನೆ. ಈ ವೇದಿಕೆಯಿಂದ ಅವರ ಹೆಸರನ್ನು ಹೇಳುವುದಕ್ಕೆ ಇಷ್ಟ ಇಲ್ಲ. ನಾನು ಹೇಳಿದೆ. ನೀವು ಟ್ಯಾಕ್ಸ್ ಸರಿಯಾಗಿ ಕೊಡುತ್ತೇವೆ ಅಂದರೆ ನಮ್ಮ ಆಕ್ಷೇಪ ಇಲ್ಲ. ನಿಮ್ಮನ್ನು ಹೆರಾಸ್‌ಮೆಂಟ್ ಮಾಡುವ ಪ್ರಶ್ನೆ ಸಹ ಅಲ್ಲ, ಇವೊತ್ತು ನೀವು ಇಂಡಸ್ಟ್ರೀಸ್ ಅನ್ನು ಬೆಳೆಸಬೇಕು ಎಂದು ಹೇಳುತ್ತಿದ್ದೀರಿ. ಅಲ್ಲಿ ಕೆಲವು ಜನ ಕೆಲಸ ಮಾಡುತ್ತಿದ್ದಾರೆ. ನೀವು ಒಂದು ವೇಳೆ ಸರಿಯಾಗಿ ಟ್ಯಾಕ್ಸ್ ಕೊಡುತ್ತಿದ್ದರೆ ನಿಮಗೆ ಕಿರುಕುಳ ಕೊಡಬೇಕು, ಯಾವುದೇ ರೀತಿಯಿಂದ ನಿಮಗೆ ತೊಂದರೆ ಕೊಡಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದರೆ, ಅವರು ಏನು ಹೇಳಿದ್ದು ಅಂದರೆ ಸ್ವಾಮಿ, ನೀವು ಹಸುವಿಗೆ ಮೇವು ಹಾಕದೇ ಹೋದರೆ ಅದು ಹಾಲು ಕೊಡುವುದಿಲ್ಲ, ಹೇಗೆ ಕೊಡುವುದು ಎಂದರು. ನಾನು ಹೇಳಿದೆ ನಿಮ್ಮ ಹಾಲೂ ಬೇಕಾಗಿಲ್ಲ, ಹಸುನೂ ಬೇಕಾಗಿಲ್ಲ, ಈ ಹಸು ಬೇಕಾದರೆ ಎಲ್ಲಿಯಾದರೂ ತೆಗೆದುಕೊಂಡು ಹೊರಗೆ ಹೋಗಿ ಎಂದು ಸ್ಪಷ್ಟವಾಗಿ ಹೇಳಿದೆ, ಇವೊತ್ತು ನಾವು ಈ ನಿರ್ಣಯ ಮಾಡಿಕೊಳ್ಳಬೇಕಾಗಿದೆ. ನಮ್ಮ ಕ್ಷೇತ್ರದಲ್ಲಿರುವವರು, ಯಾರು ಹರಿಶ್ಚಂದ್ರರಲ್ಲ. ದುಡ್ಡು ಮಾಡುವವರೇ, ಆದರೆ ಆ ದೃಷ್ಟಿಯಿಂದ ಹೇಳುವುದೂ ಅಲ್ಲ. ಆದರೆ ಪ್ರಶ್ನೆ ಏನು ಅಂದರೆ, ಸರ್ಕಾರದ ಖಜಾನೆಗೆ ದುಡ್ಡು ಹೋದರೆ ನನಗೆ ಏನು ಬಂತು ಎಂಬ ಪ್ರವೃತ್ತಿ ನಮ್ಮಲ್ಲಿ ಬಂದರೆ ಈ ದೇಶ ಉದ್ಧಾರ ವಾಗುತ್ತದೆಯೇ, ಅಭಿವೃದ್ಧಿ ಆಗುತ್ತದೆಯೇ, ದೇಶ ಪ್ರಗತಿ ಆಗುತ್ತದೆಯೇ, ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಆದರೆ ಇವೊತ್ತು ಕೆಲವರು ಹೇಳುತ್ತಿದ್ದಾರೆ. ನಿಮ್ಮ ಪಾರ್ಟಿಯವರು ಏನಾದರೂ ಇದ್ದರೆ ನಾವು ನೋಡಿಕೊಳ್ಳುತ್ತೇವೆ, ಕಣ್ಣು ಮುಚ್ಚಿಕೊಂಡಿರಿ, ಕೊಟ್ಟರೆ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ. ಏನೋ ಸ್ವಲ್ಪ ಮಟ್ಟಿಗೆ ಕೊಟ್ಟುಕೊಂಡು ಹೋಗೋಣ ಎಂಬುದೂ ಇಲ್ಲ ಕಡೆಗೆ ಏನು ಹೇಳುತ್ತಾರೆ ಅಂದರೆ ಇಷ್ಟು ಧರ್ಮ ಸಂಕಟಕ್ಕೆ ನಮ್ಮನ್ನು ಸಿಕ್ಕಿಸಬೇಡಿ, ನೀವು ಹೀಗೆ ಮಾಡಿದರೆ ನಾವು ಊರು ಬಿಟ್ಟು ಹೋಗುತ್ತೇವೆ ಎಂದು. ದಯಮಾಡಿ ಹೋಗಿ ಎಂದು ನಾನು ಹೇಳುತ್ತೇನೆ. ಅವರಿಂದ ನಮಗೆ ಆಗುವ ಲಾಭ ಏನೂ ಇಲ್ಲ. ಅವರನ್ನು ನೋಡಿ ಈ ರೀತಿ ಬೇರೆಯವರು ಮಾಡಲಿಕ್ಕೆ ಹೊರಟರೆ ಸ್ಟೇಟ್ ಟ್ರಜರಿ ಗತಿ ಏನು? ಸ್ಟೇಟ್ ರೆವಿನ್ಯೂ ಗತಿ ಏನು ಆಗುತ್ತದೆ? ಇವನ್ನು ನಾವೆಲ್ಲರೂ ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಇದಕ್ಕೆ ನಾನು ಸ್ಪಷ್ಟವಾಗಿ ಹೇಳಿದೆ. ೨೦ ರೂಪಾಯಿ ಹಾಕಿದ ವರಮಾನ ಬರಬೇಕು ಎನ್ನುವ ದೃಷ್ಟಿಯಿಂದ ಅಲ್ಲ. ಆದರೆ ೨೦ ರೂಪಾಯಿ ಹಾಕಿದ ಮೇಲೆ ಇಲ್ಲೇ ಅದು ಸುತ್ತಾಡುತ್ತಿದೆಯಲ್ಲ. ಎಕ್ಸ್‌ಪೋರ್ಟ್ ಹೆಸರಿನ ಮೇಲೆ ಇಲ್ಲೇ ಸುತ್ತಾಡುತ್ತಿದೆಯಲ್ಲ, ಅದರ ಸಲುವಾಗಿ ಇದನ್ನು ಮಾಡಬಾರದು ಎಂದು ಹಾಕಿದ್ದು.

ಒಂದು ವಿಷಯವನ್ನು ಸ್ಪಷ್ಟವಾಗಿ ಅವರೂ ಹೇಳಬಹುದು, ನಾನೂ ಹೇಳುತ್ತೇನೆ. ಈ ಬಗ್ಗೆ ನಾವು ವಿಚಾರ ಮಾಡುತ್ತಾ ಇದ್ದೇವೆ, ಇನ್ನೂ ನಾವು ನಿರ್ಣಯ ತೆಗೆದುಕೊಂಡಿಲ್ಲ. ನಮ್ಮದು ಎಕ್ಸೈಜ್ ಪಾಲಿಸಿ ಏನು ಇರಬೇಕು ಎಂದು ನಾವಿನ್ನೂ ನಿರ್ಣಯ ತೆಗೆದುಕೊಂಡಿಲ್ಲ. ಆದಕ್ಕಾಗಿ ಈ

ಸದನದಲ್ಲಿ ಹೇಳುವಂಥ ಪರಿಸ್ಥಿತಿಯಲ್ಲಿಲ್ಲ. ಆ ಮಾತು ಬೇರೆ. ಇವತ್ತು ಆ ಒಂದು ದುರ್ವ್ಯವಹಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಇರುವುದರಿಂದ, ಈ ದುರ್ವ್ಯವಹಾರದಿಂದ ಸರ್ಕಾರದ ದುಡ್ಡು ಬಹಳಮಟ್ಟಿಗೆ ಪೋಲಾಗುತ್ತಾ ಇರುವುದರ ಜೊತೆಗೆ ಬರುತ್ತಾ ಇರಲಾರದಕ್ಕಾಗಿ ಈ ಒಂದು ಐಎಂಎಲ್ ಇಂಪೋರ್ಟ್, ಎಕ್ಸ್‌ಪೋರ್ಟ್ ಟ್ರೇಡನ್ನು ಸಂಪೂರ್ಣವಾಗಿ ನಾವು ತೆಗೆದುಕೊಳ್ಳಬೇಕು ಎನ್ನುವಂಥ ಒಂದು ಪ್ರಶ್ನೆ ಇವತ್ತು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಇದನ್ನು ಪರಿಶೀಲನೆಯಲ್ಲಿ ಏಕೆ ಇಟ್ಟುಕೊಂಡಿದ್ದೀರಿ, ಏಕೆ ನಿರ್ಣಯ ಮಾಡುವ ಹಾಗಿಲ್ಲ ಎಂದು ತಾವು ಕೇಳಬಹುದು. ಇದನ್ನು ನಿರ್ಣಯ ಮಾಡುವುದಕ್ಕೆ ತೊಂದರೆ ಏನಿದೆ ಎಂದರೆ ಈ ಒಂದು ಕೇಸ್ ಸುಪ್ರೀಂಕೋರ್ಟ್ ಮುಂದೆ ಇದೆ. ಸುಪ್ರೀಂ ಕೋರ್ಟ್‌ನವರು ಒಂದು ನಿರ್ಣಯ ಕೊಟ್ಟಿದ್ದಾರೆ, ಇವತ್ತು ಎಂಎಸ್‌ಐಎಲ್‌ನವರು they can be one of the distributors but they cannot be the sole distributors ಎನ್ನುವಂಥ ನಿರ್ಣಯ ಕೊಟ್ಟಿದ್ದಾರೆ. ದುರ್ದೈವ ಅದೇಕೋ ಮುಂದಕ್ಕೆ ಹೋಗುತ್ತಾ ಇದೆ. ಇದು ಏಕೆ ಮುಂದಕ್ಕೆ ಹೋಗುತ್ತಾ ಇದೆಯೋ ನನಗೆ ಗೊತ್ತಿಲ್ಲ. ನಾನು ಮೇಲಿಂದ ಮೇಲೆ ನಮ್ಮ ಅಧಿಕಾರಿಗಳಿಗೆ ಹೇಳುತ್ತಾ ಇದ್ದೇನೆ. ಹೋಗಿರಿ ಸುಪ್ರೀಂ ಕೋರ್ಟಿನಲ್ಲಿ ಒಳ್ಳೆಯ ಲಾಯರನ್ನು ಇಟ್ಟು ಆರ್ಗ್ಯುಮೆಂಟ್ ಮಾಡಿ, ಸುಪ್ರೀಂ ಕೋರ್ಟ್ ಏನು ನಿರ್ಣಯ ಕೊಡುತ್ತದೆ ಆ ನಿರ್ಣಯದ ಮೇಲೆ ಮುಂದೆ ನಾವು ನಮ್ಮ ನೀತಿ ನಿರೂಪಿಸಬೇಕಾಗಿದೆ ಎನ್ನುವಂಥ ಮಾತನ್ನು ಹೇಳುತ್ತಾ ಇದ್ದೇನೆ. ಒಂದು ವೇಳೆ ಸುಪ್ರೀಂ ಕೋರ್ಟ್‌ನಲ್ಲಿ ಐಎಂಎಲ್ ಡಿಸ್ಟ್ರಿಬ್ಯೂಷನ್ ಬಗ್ಗೆ ಸರ್ಕಾರದವರು ಏನು ಬೇಕಾದರೂ ನಿರ್ಣಯ ಮಾಡಿಕೊಳ್ಳಬಹುದು ಎನ್ನುವಂಥ ಒಂದು ನಿರ್ಣಯಕೊಟ್ಟರೆ ಆ ವೇಳೆಗೆ ಎಕ್ಸ್‌ಪೋರ್ಟ್, ಇಂಪೋರ್ಟ್ ಎಲ್ಲವನ್ನೂ ಎಂಎಸ್‌ಐಎಲ್‌ಗೆ ವಹಿಸಿ ಕೊಡುತ್ತೇವೆ, ಐಎಂಎಲ್‌ನಲ್ಲಿ ಎಷ್ಟು ಮ್ಯಾನುಫ್ಯಾಕ್ಚರ್ ಮಾಡುತ್ತಾರೆ ಅವರು ಮ್ಯಾನುಫ್ಯಾಕ್ಚರ್ ಮಾಡಿ ಎಂಎಸ್‌ಐಎಲ್‌ಗೆ ಕೊಡಬೇಕು. ಎಂಎಸ್‌ಐಎಲ್ ಮಾರ್ಕೆಟ್‌ನ ಸಂಪೂರ್ಣವಾದಂಥ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆ ಪರಿಸ್ಥಿತಿ ಬಂದರೆ ಇವತ್ತು ನಮ್ಮ ಅರ್ಥಮಂತ್ರಿಗಳ ಪರವಾಗಿ ನಾನು ಸದನಕ್ಕೆ ಭರವಸೆ ಕೊಡುತ್ತಾ ಇದ್ದೇನೆ. ಅಂತಹ ಪರಿಸ್ಥಿತಿ ಬಂದ ದಿವಸ ಈ ಎಕ್ಸ್‌ಪೋರ್ಟ್ ಡ್ಯೂಟಿ ೨೦ ರೂಪಾಯಿ ಹೋಗಿ, ಎರಡು ರೂಪಾಯಿ, ಮೂರು ರೂಪಾಯಿಗೆ ಇಳಿಸಬಹುದು, ಅದಕ್ಕೆ ಮೇಲೆ ಹೋಗುವುದಿಲ್ಲ. ಇದರ ಮುಖ್ಯವಾದ ಉದ್ದೇಶವೇನೆಂದರೆ ಈ ರೀತಿ ರೆವಿನ್ಯು ವಂಚನೆ ಮಾಡುವಂಥ ಜನರಿಗೆ ಇವತ್ತು ಪಾಠ ಕಲಿಸಬೇಕು, ರೆವಿನ್ಯು ವಂಚನೆ ಆಗಬಾರದು ಎನ್ನುವ ದೃಷ್ಟಿಯಿಂದ ನಾವು ಮಾಡುತ್ತಾ ಇದ್ದೇವೆಯೋ ಹೊರತು ಯಾವುದಾದರೂ ಒಂದು ಇಂಡಸ್ಟ್ರಿಯನ್ನು ಕಿಲ್ ಮಾಡಬೇಕು ಎನ್ನುವಂಥ ದೃಷ್ಟಿಯಿಂದ ನಾವು ಮಾಡುತ್ತಾ ಇಲ್ಲ. ಈಗ ಹೊರಗಿನಿಂದ ಬಂದರೆ ಏನು ಎನ್ನತಕ್ಕಂಥ ಪ್ರಶ್ನೆ ಇದೆ. ಅವರು ಹೋಗಿ ಹೊಸೂರಿನಲ್ಲಿ ಹಾಕಿ ಇಲ್ಲಿಗೆ ಕಳಿಸಿದರೆ ಏನು ? ಹೊಸೂರಿನಲ್ಲಿ ಹಾಕಿ ಇಲ್ಲಿಗೆ ಕಳಿಸಿದರೆ ಹೊರಗಿನ ಯಾವುದೇ ಮಾಲು ಕರ್ನಾಟಕದಲ್ಲಿ ಮಾರಾಟವಾದರೆ ನನಗನ್ನಿಸುತ್ತದೆ ನಮ್ಮ ಎಕ್ಸೈಜ್ ಡ್ಯೂಟಿ ೩೬ ರೂಪಾಯಿ ಅವರು ಕೊಡಲೇಬೇಕು. ಹೊರಗಿನಿಂದ ಬಂದಿದೆಯೆಂದ ಅದಕ್ಕೆ ಎಕ್ಸೈಜ್ ಡ್ಯೂಟಿ ಬೇರೆ ಆಗುವಹಾಗಿಲ್ಲ. ಏಕೆಂದರೆ, ಈಗ ನಾನು ತಿಳಿಸಿದ ಪ್ರಕಾರ ಹೊರಗಡೆಯಿಂದ ಬಂತು ಅಂದರೆ ೩೬ ರೂಪಾಯಿ ಕೊಡಬೇಕಾಗುತ್ತದೆ. ಹೊರಗಡೆ ಎರಡನೇ ರಾಜ್ಯದವರೂ ಎಕ್ಸೈಜ್ ಡ್ಯೂಟಿ ಹಾಕಿರುತ್ತಾರೆ. ಆ ರೀತಿ ಅಲ್ಲಿ ಎಕ್ಸೈಜ್ ಡ್ಯೂಟಿ ಎಕ್ಸ್‌ಪೋರ್ಟ್ ಮಾಡಿದವರಿಗೆ ಆಗುತ್ತದೆ. ನಿಮಗೆ ಹೇಳಬೇಕಾಗಿದ್ದರೆ ಅನೇಕ ಜನ ಮ್ಯಾನುಫ್ಯಾಕ್ಚರರ್ಸ್ ಸ್ವತಃ ವಾಲೆಂಟರಿಯಾಗಿ ಬಂದು ಸರ್ಕಾರಕ್ಕೆ ಎಂಎಸ್‌ಐಎಲ್‌ಗೆ ಹೇಳಿದ್ದಾರೆ, ನಾವೇನೂ ಕಪ್ಪು ಉದ್ಯೋಗ ಮಾಡುವುದಿಲ್ಲ, ನಾವು ಬ್ಲಾಕ್ ಮಾರುವುದಿಲ್ಲ, ನಾವು ಸೆಕೆಂಡ್ಸ್ ಮಾರುವುದಿಲ್ಲ, ನಮ್ಮಲ್ಲಿ ಏನು ಮ್ಯಾನುಫ್ಯಾಕ್ಚರ್ ಆಗುತ್ತದೆ ಅದನ್ನು ತಂದು ನಿಮಗೆ ಕೊಡುತ್ತೇವೆ, ನೀವು ಬೇಕಾದರೆ ಮಾರಾಟ ಮಾಡುವಂಥ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈ ಮಾತನ್ನು ಎಲ್ಲರೂ ಹೇಳಲಿಲ್ಲ, ಎಲ್ಲರೂ ಹೇಳಿದ್ದರೆ ನಾವು ತೆಗೆದುಕೊಂಡುಬಿಡಬಹುದಾಗಿತ್ತು. ಏಕೆಂದರೆ ವಾಲೆಂಟರಿಯಾಗಿ ಹೇಳಿದ್ದಾರೆ. ಆದ್ದರಿಂದ ತೆಗೆದುಕೊಳ್ಳುವುದಕ್ಕೆ ಕಷ್ಟವಿಲ್ಲ ಮತ್ತು ಈ ೨೦ ರೂಪಾಯಿ ಹಾಕಬೇಕಾದಂಥ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಆದರೆ ಕೆಲವರು ಹೇಳಿದ್ದಾರೆ, ಕೆಲವರು ಇನ್ನೂ ಹೇಳಲಿಲ್ಲ, ಏಕೆಂದರೆ ಕೆಲವರು ಇನ್ನೂ ಜಗ್ಗುತ್ತಾ ಇದ್ದಾರೆ. ಏನಾದರೂ ಆಗಬಹುದು. ಎಂದು ನಮಗೆ ಬೆಲೆ ಬರುತ್ತಿದೆ ಅಂದರೆ ಎಂಎಸ್‌ಐಎಲ್‌ಗೆ ಮಾರಿದರೆ ಏನು, ಎಕ್ಸೈಜಡ್‌ಗೆ ಮಾರಿದರೆ ಏನು ಇದಕ್ಕೆ ಏಕೆ ನೀವು ಒಪ್ಪುವ ಹಾಗಿಲ್ಲ, ಏಕೆ ಒಪ್ಪುವಹಾಗಿಲ್ಲ ಅಂದರೆ ಸೆಕೆಂಡ್ಸ್ ಮಾರುವುದಕ್ಕೆ ಅವಕಾಶ ಕಡಿಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಒಪ್ಪುವುದಿಲ್ಲ. ಇದರ ಹಿಂದೆ ಒಂದು ದೊಡ್ಡ ರಾಕೆಟ್ ಇದೆ. ನೂರಾರು ಕೋಟಿ ರೂಪಾಯಿ ದುರ್ವ್ಯವಹಾರ ನಡೆಯುತ್ತಾ ಇರುವಂಥಾದ್ದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ ನಿಲ್ಲಿಸುತ್ತೇವೆ. ಸಂಪೂರ್ಣವಾಗಿ ನಿಲ್ಲಿಸುತ್ತೇವೆ ಎಂದು ಇವತ್ತಿನ ದಿವಸ ಎದೆ ತಟ್ಟಿ ಹೇಳುವಂಥಾದ್ದಲ್ಲ,

ಈ ಒಂದು ದುರ್ವ್ಯವಹಾರ ಏನು ನಡೆಯುತ್ತಾ ಇತ್ತು, ಇದೇನು ದುರ್ವ್ಯಾಪಾರ ನಡೆಯುತ್ತಾ ಇತ್ತು, ಸರ್ಕಾರದ ಖಜಾನೆಗೆ ಸರ್ಕಾರದ ಬೊಕ್ಕಸಕ್ಕೆ ಬರಲಾರದಂತೆ ನೂರಕ್ಕೆ ೯೦ರಷ್ಟು ಮ್ಯಾನುಫ್ಯಾಕ್ಚರ್ ಮಾಡಿ ದುರ್ವ್ಯವಹಾರ ಮಾಡುವವರ ಬೊಕ್ಕಸಕ್ಕೆ ಮತ್ತು ೧೦ ರೂಪಾಯಿ ಪೊಲಿಟೀಷಿಯನ್ಸ್ ಬೊಕ್ಕಸಕ್ಕೆ ಏನು ಹೋಗುತ್ತಾ ಇತ್ತು, ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎನ್ನುವಂಥ ಪ್ರಾಮಾಣಿಕವಾದ ಪ್ರಯತ್ನ ಇದೆಯೇ ಹೊರತು ಯಾವ ಇಂಡಸ್ಟ್ರಿಯನ್ನೂ ಕೂಡ ಕೊಲ್ಲಬೇಕು ಎಂದು ನಾವು ಪ್ರಯತ್ನ ಮಾಡುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನಂಜನಗೂಡು ತಾಲ್ಲೂಕಿನಲ್ಲಿ ಒಂದು ವಿಚಿತ್ರವಾದ ಪಾನೀಯ ತಯಾರಾಗುತ್ತಿದೆ, ಯಾವ ಟ್ಯಾಕ್ಸ್ ಇಲ್ಲದೆ. ಇದು ತಯಾರಾಗುತ್ತಿದೆ. ಜೆಮಿನಿ ಡಿಸ್ಟಿಲರೀಸ್ ಪಕ್ಕದಲ್ಲಿರತಕ್ಕ ಕೊಳವೆ ಬಾವಿಗಳಲ್ಲಿ ಇದು ಬರುತ್ತಿದೆ.

x x x

SRI M. VEERAPPA MOILY.—I take objection for it.

ಶ್ರೀ ವಾಟಾಳ್ ನಾಗರಾಜ್.—ನಂಜನಗೂಡು ತಾಲ್ಲೂಕಿನಲ್ಲಿ ಕೊಳವೆ ಬಾವಿಗಳಲ್ಲಿ ಈ ನೀಲಿ ಬಣ್ಣದ ನೀರು ಬರುತ್ತಿದೆ, ಜನಗಳು ಇದನ್ನು ಕುಡಿದು ಸಾಯುತ್ತಿದ್ದಾರೆ. ಜೆಮಿನಿ ಡಿಸ್ಟಲರೀಸ್ ಪಕ್ಕದಲ್ಲೂ ಕೊಳವೆ ಬಾವಿಗಳಲ್ಲಿ ೧೦ ಕಿ. ಮೀ. ಜಾಗಗಳಲ್ಲಿ ಈ ಬಣ್ಣದ ನೀರು ಬರುತ್ತಿದೆ.

ಅಧ್ಯಕ್ಷರು.—ಜನ ಒಂದಲ್ಲಾ ಒಂದು ಕಾರಣಕ್ಕಾಗಿ ಸಾಯುತ್ತಿರಬಹುದು. ಅನುಮತಿ ಇಲ್ಲದೇ ಈ ವಿಷಯವನ್ನು ಪ್ರಸ್ತಾಪ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್.—ಬೀರ್ ಫ್ಯಾಕ್ಟರಿ ಪಕ್ಕದಲ್ಲಿ ಈ ನೀರು ಬರುತ್ತಿದೆ. ಸರ್ಕಾರಕ್ಕೆ ಹಲವು ಬಾರಿ ಮನವಿಗಳನ್ನು ಸಲ್ಲಿಸಿದ್ದರೂ ಇದರ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ಜೆಮಿನಿ ಡಿಸ್ಟಲರೀಸ್ ಪಕ್ಕದಲ್ಲಿ ಸುಮಾರು ೧೦ ಕಿ. ಮೀ. ದೂರದಲ್ಲಿ ಬೆಳೆ ಹೋಗಿದೆ ದನಕರುಗಳು ಸಾಯುತ್ತಿವೆ.

x x x

ಶ್ರೀ ಎಂ. ಮಹದೇವ್.—ಶ್ರೀ ನಾಗರಾಜ್‌ರವರು ಹೇಳುತ್ತಿರುವುದರಲ್ಲಿ ಸತ್ಯವಿದೆ, ಜೆಮಿನಿ ಡಿಸ್ಟಲರೀಸ್ ಇರತಕ್ಕ ಜಾಗದಲ್ಲಿ ಕೆಲವು ಬಾವಿಗಳಲ್ಲಿ ಈ ಕಪ್ಪು ನೀರು ಬಂದು ತೊಂದರೆಯಾಗುತ್ತಿದೆ. ಇದು ಬಹಳ ದುರ್ವಾಸನೆಯಾಗಿದೆ. ಇದರ ಬಗ್ಗೆ ನಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಆಗ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಮಧ್ಯೆ ಪ್ರವೇಶ ಮಾಡಬೇಕಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಅನೇಕ ಸಮಸ್ಯೆಗಳು ಸಾರ್ವಜನಿಕ ಹಿತರಕ್ಷಣೆಗಾಗಿ ಸದಸ್ಯರ ಗಮನಕ್ಕೆ ಬರುತ್ತವೆ. ಆದರೆ ಈ ಸಭೆಯಲ್ಲಿ ನೀರು ತರುವುದು ಶರಾಬ್ ತರುವುದು ಸರಿಯಲ್ಲ, ಯಾವುದೇ ಸದಸ್ಯರು ಆಗಲಿ ಅಧ್ಯಕ್ಷರ ಪರವಾನಿಗೆ ತೆಗೆದುಕೊಂಡು ಇಂತಹ ವಸ್ತುಗಳನ್ನಾಗಲಿ ಅಥವಾ ಕಾಗದ ಪತ್ರಗಳನ್ನಾಗಲಿ ಹಾಜರು ಪಡಿಸಬೇಕಾಗುತ್ತದೆ. ತಮ್ಮ ಪರವಾನಿಗೆ ಇಲ್ಲದೆ ಇಲ್ಲಿ ಹಾಜರು ಪಡಿಸಲು ಸಾಧ್ಯವೇ ಇಲ್ಲ.

MR. SPEAKER.—It is alright.

xx xx xx xx

ಅಧ್ಯಕ್ಷರು.—ನೀವು ಇವನ್ನು ಕೆಮಿಕಲ್ ಅನಾಲಿಸಿಸ್‌ಗೆ ಕಳುಹಿಸಿಕೊಡಲು ಮಾನ್ಯ ಅರ್ಥ ಸಚಿವರಿಗೆ ಬೇಕಾದರೆ ಕೊಡಿ. ಈ ಸಭೆಯಲ್ಲಿ ಇಂತಹ ವಸ್ತುಗಳನ್ನು ತರಬೇಕಾದರೆ ನೀವು ಪೂರ್ವ ಭಾವಿಯಾಗಿ ಅಧ್ಯಕ್ಷರಿಗೆ ತಿಳಿಸಿ ಅವರ ಪರವಾನಗಿಯನ್ನು ಪಡೆದು ಅನಂತರ ತರಬೇಕು. You cannot bring a surprise in the House. ಇವತ್ತು ಬಾಟಲ್ ನಾಳೆ ಮತ್ತೊಂದು. ಹೀಗೆ ಇಂತಹ ವಸ್ತುಗಳನ್ನು ಮತ್ತೆ ಈ ಸಭೆಗೆ ತರುವುದನ್ನು ರೆಪಿಟೇಷನ್ ಮಾಡಬಾರದೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದನ್ನು ತಮಗೆ ಕಳುಹಿಸುತ್ತೇನೆ. ನನಗೆ ಬೇರೆ ಉದ್ದೇಶವಿಲ್ಲ. ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ. ನನಗೆ ಬೇರೆ ಭಾವನೆ ಇಲ್ಲ.

---

x x x Expunged as ordered by the Chair.

ಅಧ್ಯಕ್ಷರು.— ನಿಮ್ಮ ಉದ್ದೇಶವನ್ನು ನಾನು ಪ್ರಶ್ನೆ ಮಾಡಿದ್ದೇನೆಯೇ?

ಶ್ರೀ ವಾಟಾಳ್‌ನಾಗರಾಜ್.— ಇಲ್ಲ, ಧನ್ಯವಾದಗಳು.

(ಗೊಂದಲ)

MR. SPEAKER.— Nothing about the bottle will be recorded. This will not become the part of the Proceedings of this House. I order for the expunction of what Mr. Vatal Nagaraj mentioned about the bottle.

ಶ್ರೀ ಎ. ರಾಜಶೇಖರಮೂರ್ತಿ.— ಮಾನ್ಯ ಮುಖ್ಯಮಂತ್ರಿಗಳು ಚೆನ್ನಾಗಿ ಕ್ಲಾರಿಫೈ ಮಾಡಿದ್ದಾರೆ. ಇನ್ನು ಪ್ರೊಫೆಷನಲ್ ಟ್ಯಾಕ್ಸ್‌ನಲ್ಲಿ ಬರತಕ್ಕ ಚಾರ್ಟೆಡ್ ಅಕೌಂಟೆಂಟರುಗಳು ಆಕ್ಚುಯರಿಗಳಿಗೆ ೨೫೦೦ ರೂ.ಗಳನ್ನು ಏನು ಗೊತ್ತು ಮಾಡಲಾಗಿತ್ತು, ಅದನ್ನು ೨೦೦೦ಕ್ಕೆ ಇಳಿಸಿದ್ದೇವೆ. ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ ಸಮ ವಸ್ತ್ರ ಮತ್ತು ಸೀರೆಧೋತಿ ಸ್ಕೀಮಿನ ಬಗ್ಗೆ. ಈ ಸ್ಕೀಮಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರಿಂದಲೂ ಸಬ್ಸಿಡಿ ಸಿಗುತ್ತದೆ. ಈ ಎರಡೂ ಸೇರಿಸಿ, ಬೆಲೆಯೊಳಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಮಾಡಿ ಸೀರೆ ಧೋತಿ ಕೊಡುತ್ತಿದ್ದೇವೆ. ರಾಜ್ಯ ಸರ್ಕಾರದ ಸಬ್ಸಿಡಿ ವರ್ಷಕ್ಕೆ ಒಂಬತ್ತೂವರೆ ಕೋಟಿ ರೂಪಾಯಿ. ಕೇಂದ್ರ ಸರ್ಕಾರದ್ದು, ೧೨-೧೩ ಕೋಟಿ ರೂಪಾಯಿಗಳು. ಸೀರೆ ಧೋತಿಗಳನ್ನು ಜಾಸ್ತಿ ವಿತರಣೆ ಮಾಡಿದರೆ, ಜಾಸ್ತಿ ಸಬ್ಸಿಡಿ ಸಿಗುತ್ತದೆ. ರಾಜ್ಯ ಸರ್ಕಾರದ ಸಬ್ಸಿಡಿ ೯.೫ ಕೋಟಿ ರೂಪಾಯಿಯನ್ನು ವಿತ್‌ಡ್ರಾ ಮಾಡುತ್ತೇನೆಂದು ಹೇಳಿದ್ದೆ. ಜೊತೆಗೆ ಈ ಸ್ಕೀಮನ್ನೇ ನಿಲ್ಲಿಸುತ್ತೇವೆಂದು ಕೂಡ ಹೇಳಿದ್ದೆ. ಇದರಲ್ಲಿ ಒಂದು ತೊಂದರೆ ಏನಿದೆ ಅಂದರೆ, ಅನೇಕ ಜನ ನೇಕಾರರು ಇದನ್ನೇ ನಂಬಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸಹಸ್ರಾರು ಜನ ನೇಕಾರರು ಈ ಕಸುಬನ್ನು ಅವಲಂಬಿಸಿದ್ದಾರೆ. ಆದ್ದರಿಂದ ಇದನ್ನು ಒಂದೇ ಸಾರಿ ನಿಲ್ಲಿಸಿದರೆ, ಈ ನೇಕಾರರಿಗೆ ತೊಂದರೆಯಾಗುವುದರಿಂದ ಹಂತ ಹಂತವಾಗಿ ನಿಲ್ಲಿಸುವುದಕ್ಕೆ ಏರ್ಪಾಡು ಮಾಡಿ ಎಂದು ಅನೇಕ ಸಲಹೆಗಳು ಬಂದಿವೆ. ಇವುಗಳನ್ನು ಪರಿಶೀಲನೆ ಮಾಡಿ, ಆಖೈರಾಗಿ ತೀರ್ಮಾನ ತೆಗೆದುಕೊಳ್ಳುವವರೆಗೆ ಈ ಒಂದು ಸ್ಕೀಮನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಇಷ್ಟನ್ನು ಹೇಳಿ ಈ ಬಜೆಟ್‌ನ ಒಪ್ಪಿಗೆಗೆ ತಮ್ಮ ಪೂರ್ಣ ಸಹಕಾರ ಕೊಡಬೇಕೆಂದು ಹೇಳುತ್ತಾ, ಡಿಮ್ಯಾಂಡ್‌ಗಳು ಬಂದಾಗ ಚರ್ಚೆಯಿಲ್ಲದೆ ಪಾಸು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— Before we proceed, ಮಾನ್ಯ ಹಣಕಾಸಿನ ಸಚಿವರು ತಮ್ಮ ಉತ್ತರ ವೇಳೆಯಲ್ಲಿ ಒಂದು ಗಾದೆ ಮಾತನ್ನು ಪ್ರಸ್ತಾಪ ಮಾಡಿದರು. The whole text of the debate, I feel, it should not go as part of the proceedings of this House.

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.— ಕ್ಲಾರಿಫಿಕೇಷನ್ ಬೇಕಾದಷ್ಟು ಆಗಿದೆ.

† ಶ್ರೀ ಡಿ. ಬಿ. ಚಂದ್ರೇಗೌಡ.— ಕ್ಲಾರಿಫಿಕೇಷನ್ ಬೇಕಾದಷ್ಟು ಆಗಿಲ್ಲ. ಅಧ್ಯಕ್ಷರೆ, ನಾನು ಅಭಿಪ್ರಾಯ ಮಾಡಿದ ಕೆಲವು ಭಾವನೆಗಳನ್ನು ಮಾನ್ಯ ಹಣಕಾಸಿನ ಮಂತ್ರಿಯವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಪ್ರತಿ ವರ್ಷವೂ ಆಯವ್ಯಯ ಪತ್ರದಲ್ಲಿ ಕಾವೇರಿ ಜಲಾನಯನ ಪ್ರದೇಶಕ್ಕೆ ಕೊಡತಕ್ಕ ಹಣದ ಬಗ್ಗೆ ಕಾಣಿಸುತ್ತಿದ್ದರು. ಈ ಸಾರಿಯ ಆಯವ್ಯಯ ಪತ್ರದಲ್ಲಿ ಅದನ್ನು ಕಾಣಿಸಲಿಲ್ಲವೆಂದು ತಿಳಿಸಿದ್ದೆ. ಅದಕ್ಕೆ ಅವರು ಇದು ನಾನ್ ಪ್ಲಾನ್ ಆದ ಕಾರಣಕ್ಕಾಗಿ ಹಾಕಲಿಲ್ಲವೆಂದು ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಿಂದೆ ಏತಕ್ಕೆ ಹಾಕುತ್ತಿದ್ದರು, ಈಗ ಏತಕ್ಕೆ ಹಾಕಲಿಲ್ಲ. ಇನ್ನು ಅಗ್ಗದ ದರದ ಬಟ್ಟೆ ಕೊಡತಕ್ಕದ್ದಕ್ಕೆ ಪುನರ್ ಪರಿಶೀಲನೆ ಮಾಡುವ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಕೊಡತಕ್ಕಂಥ ಸಹಾಯ ಧನದಿಂದ ಆ ಬಟ್ಟೆಯನ್ನು ಕೊಂಡುಕೊಳ್ಳುತ್ತದೆ, ಇದಕ್ಕೆ ಕಾರಣ ಏನೆಂದರೆ, ಸುಮಾರು ಲಕ್ಷಾಂತರ ಜನ ನೇಕಾರರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ತೀರ್ಮಾನ ಮಾಡಲಾಗಿದೆ ಎನ್ನುವುದನ್ನು ತಾವು ಹೇಳಿದಿರಿ. ಕೇಂದ್ರ ಸರ್ಕಾರದ್ದು ಶೇಕಡಾ ೧೦ರಷ್ಟು ಸಹಾಯ ಧನ ಇದೆ, ರಾಜ್ಯ ಸರ್ಕಾರದ್ದು ಶೇಕಡಾ ೧೦ರಷ್ಟು ಸಹಾಯ ಧನ ಇದೆ, ಅಂದರೆ ಒಟ್ಟು ೨೦ರಷ್ಟು ಸಹಾಯ ಧನ ಇದೆ. ಇದರಿಂದ ನೇಕಾರರು ಮತ್ತು ಅದನ್ನೇ ನಂಬಿಕೊಂಡಿರತಕ್ಕ ಸಹಕಾರಿ ಸಂಸ್ಥೆಗಳು ಬದುಕಲಿಕ್ಕೆ ಅನುಕೂಲ

ಆಗುತ್ತದೆ. ಆದ್ದರಿಂದ, ಪುನಃ ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಇದನ್ನು ಎರಡು ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗಿದೆ, ಒಂದು ನೇಕಾರರ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ, ಎರಡನೆಯದು ಅಂದರೆ ತಾವೇ ಹೇಳಿರುವ ಹಾಗೆ ಸಮಾನತೆಯ ದೃಷ್ಟಿಯಿಂದ ಮಾಡಬೇಕಾಗುತ್ತದೆ ಅದು ಎಷ್ಟರ ಮಟ್ಟಿಗೆ ಆಗುತ್ತದೆ ಎಂಬುದು ಬೇರೆ ವಿಷಯ. ಇದರಲ್ಲಿ ಪ್ರಿಸ್ಟೀಜ್ ಪ್ರಶ್ನೆ ಇಲ್ಲ. ಇದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ಎಂದು ನಾನು ತಮ್ಮಲ್ಲಿ ಪ್ರಶ್ನೆ ಮಾಡುತ್ತೇನೆ. ಇನ್ನು ಎರಡನೆಯ ವಿಷಯ ಅಂದರೆ, ಈಗ ಅನುದಾನಕ್ಕಾಗಿ ಕಾಯುತ್ತಿರುವ ಕಾಲೇಜುಗಳ ಸಂಖ್ಯೆ ಸುಮಾರು ೧೮ ಇವೆ. ೧೧ ಕಾಲೇಜುಗಳು ಇವೆ ಎಂದು ತಿಳಿದಿದ್ದೆ. ಈಗ ಮತ್ತೆ ೭ ಸೇರಿವೆ ಎಂದು ಹೇಳಿದಿರಿ, ೧೧ ಕಾಲೇಜುಗಳಿಗೆ ಸುಮಾರು ೫೦ ಲಕ್ಷ ರೂಪಾಯಿ ಬೇಕಾಗಬಹುದೆಂದು ಆಲೋಚನೆ ಮಾಡಿದ್ದೆ. ಈಗ ಎಲ್ಲಾ ೧೮ ಕಾಲೇಜುಗಳು ಅನುದಾನಕ್ಕೆ ಅರ್ಹವಾಗಿವೆ. ಕಾಲೇಜುಗಳನ್ನು ತೆರೆಯುವುದಕ್ಕೆ ಸರ್ಕಾರದ ಅನುಮತಿಯನ್ನು ಪಡೆದು ಕಾಲೇಜುಗಳನ್ನು ತೆರೆದಿದ್ದಾರೆ. ಈಗ ಅವರು ೬-೭ ವರ್ಷಗಳ ಕಾಲ ತಮ್ಮ ವ್ಯಾಪ್ತಿಯಲ್ಲಿ ಕೆಲಸ ಮಾಡಿ ಅನುದಾನಕ್ಕಾಗಿ ತಮ್ಮ ಮುಂದೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಇವೊತ್ತು ಕನಕದಾಸ ಶಿಕ್ಷಣ ಸಂಸ್ಥೆಯವರು ಉಪವಾಸ ಕುಳಿತಿದ್ದಾರೆ. ಅದೇ ರೀತಿ ಶಿವಮೊಗ್ಗ, ಬೆಳಗಾವಿ ಜಿಲ್ಲಾ ಕಾಲೇಜಿನವರು ಕಬ್ಬನ್‌ಪಾರ್ಕ್‌ನಲ್ಲಿ ಮುಷ್ಕರ ಹೂಡಿರುವುದು ತಮ್ಮ ಗಮನಕ್ಕೆ ಬಂದಿದೆ. ಈ ಸಾರಿಯಾದರೂ ಅನುದಾನಕ್ಕೆ ಒಳಪಡುವಂತೆ ಈ ಕಾಲೇಜುಗಳನ್ನು ಸೇರಿಸಿಕೊಳ್ಳುತ್ತೀರಾ ಹೇಗೆ? ಈಗ ತಾವು ಎಲ್ಲಾ ನಿಯಮಗಳನ್ನು ಪಾಲನೆ ಮಾಡಿ ಅನುದಾನಕ್ಕೆ ಅರ್ಹವಾಗಿರುವಂಥ ಕಾಲೇಜುಗಳಿಗೆ ಅನುದಾನ ಕೊಡುತ್ತೇವೆಂದು ಹೇಳಬೇಕು. ಇನ್ನು ಎಂಡೋಮೆಂಟ್ ಮೂಲಕ ದೇವಸ್ಥಾನಗಳನ್ನು ರಿಪೇರಿ ಮಾಡಿಸತಕ್ಕದ್ದು ಇದೆ. ಈ ರಿಪೇರಿಗಾಗಿಯೇ ಒಂದೆರಡು ಕೋಟಿ ರೂಪಾಯಿಗಳನ್ನು ಹಿಂದೆ ಮೀಸಲಿಡುತ್ತಿದ್ದರು. ಕಳೆದ ಸಾರಿ ದೇವಸ್ಥಾನಗಳ ರಿಪೇರಿಗಾಗಿ ಹಣ ರಿಲೀಸ್ ಆಗಿಲ್ಲ ಎನ್ನುವ ವಿಷಯ ತಿಳಿದುಬಂದಿದೆ. ಹಣ ಏತಕ್ಕೆ ರಿಲೀಸ್ ಆಗಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ದೇವಸ್ಥಾನಗಳ ರಿಪೇರಿ ಮಾಡುವಂತಾದ್ದಕ್ಕೆ ಹಣ ರಿಲೀಸ್ ಮಾಡುವಂತಾದ್ದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ವಕ್ಫ್ ಬೋರ್ಡ್‌ಗೆ ಅನುದಾನ ಮತ್ತಿತರ ರೂಪದಲ್ಲಿ ಒಂದು ಕೋಟಿ ರೂಪಾಯಿವರೆಗೆ ಮೊದಲು ಕೊಡುತ್ತಿದ್ದರು. ಕಳೆದ ಸಾರಿ ೨೮ ಲಕ್ಷ ರೂಪಾಯಿ ರಿಲೀಸ್ ಮಾಡಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆಯೂ ಪುನರ್ ಪರಿಶೀಲನೆ ಮಾಡುವ ಬಗ್ಗೆ ತಿಳಿಸಬೇಕು. ಇನ್ನು ಕೊಂಕಣ ರೈಲು ವಿಚಾರದಲ್ಲಿ ಪ್ರಸ್ತಾಪ ಮಾಡಿ ಉತ್ತರ ಕೊಡುತ್ತಾ, ರೈಲು ವಿಚಾರ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಇದರಲ್ಲಿ ನಮ್ಮದೇನು ಪಾತ್ರ ಇಲ್ಲ ಎಂದು ಹೇಳಿದರು. ಕೊಂಕಣ ರೈಲ್ವೆಯನ್ನು ಪ್ಲಾನಿಂಗ್ ಕಮಿಷನ್‌ನವರು ಕ್ಲಿಯರ್ ಮಾಡುವಾಗ ಯಾವ ಯಾವ ರಾಜ್ಯದಲ್ಲಿ ಅಂದರೆ ಸುಮಾರು ೧,೫೦೦ ಕೋಟಿ ರೂಪಾಯಿ ಯೋಜನೆ ಹತ್ತಾರು ವರ್ಷಗಳ ಕಾಲ ನೆನೆಗುದಿಗೆ ಬೀಳುವ ಬದಲು ನಮ್ಮ ಆರ್ಥಿಕ ಕೇಂದ್ರವಾದ ಮುಂಬೈ ನಗರಕ್ಕೆ ನಾಲ್ಕು ರಾಜ್ಯಗಳ ಸಂಪರ್ಕ ಸರಿ ಇದ್ದರೆ, ಮುಂಬೈಗೆ ಹೋಗುವ ಸರಕು ಸಾಗಾಣಿಕೆಯಿಂದ ಆರ್ಥಿಕವಾಗಿ ಲಾಭದಾಯಕವಾಗಲಿಕ್ಕೆ ಸಾಧ್ಯ ಇದೆ. ಇದರ ಲಭ್ಯತೆಯನ್ನು ಮಾಡಿಕೊಳ್ಳಬೇಕೆಂದು ಒಂದು ಕಾರ್ಪೊರೇಷನ್ ರಚನೆ ಮಾಡಿ, ನಾಲ್ಕು ರಾಜ್ಯಗಳನ್ನು ಅದರ ಸಂಯೋಜನೆಯಲ್ಲಿ ತಂದು, ಖಾಸಗಿ ಸಂಸ್ಥೆಗಳನ್ನು ಹೊಂದಿಸಿಕೊಂಡು, ಮುಗಿಸಬೇಕೆಂದು ಆ ಯೋಜನೆಯ ಉದ್ದೇಶ. ನನಗೆ ತಿಳಿದಿರುವ ಹಾಗೆ ಈ ಪ್ರಕಾರ ಇದೆ.

೧-೦೦ ಪಿ. ಎಂ.

ಮಹಾರಾಷ್ಟ್ರದವರು ಒಪ್ಪಿಕೊಳ್ಳುತ್ತಾರೆ ಕೇರಳದವರು ಒಪ್ಪಿಕೊಳ್ಳುತ್ತಾರೆ, ಆಂಧ್ರದವರು ಒಪ್ಪಿಕೊಳ್ಳುತ್ತಾರೆ. ನಾವು ಮಾತ್ರ ಅದರಿಂದ ಹೊರಗಡೆ ಉಳಿಯತಕ್ಕಂಥಾದ್ದು ಸರಿಯಲ್ಲ, ಹೊರಗಡೆ ಉಳಿದರೆ ಅದರ ಪರಿಣಾಮ ಏನಾಗುತ್ತದೆಂಬುದನ್ನು ಯೋಚನೆ ಮಾಡಿ. ಈ ರೈಲ್ವೆ ಯೋಜನೆಯನ್ನು ೫ ವರ್ಷಗಳಲ್ಲಿ ಪೂರ್ಣ ಮಾಡುವುದಕ್ಕೆ ನಿಮ್ಮ ಸರಕಾರದಿಂದ ವಿರೋಧ ಬಂತು ಎಂದು ಅನ್ನಿಸಿಕೊಳ್ಳಬಾರದೆಂದು ನಾನು ಹೇಳುತ್ತಿದ್ದೇನೆ. ಈ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಎಷ್ಟನ್ನು ಅಳವಡಿಸುವುದಕ್ಕೆ ತಮಗೆ ಸಾಧ್ಯವಾಗುತ್ತದೆಂಬುದನ್ನು ತಾವು ಆಲೋಚನೆ ಮಾಡಬೇಕು. ಇನ್ನು ಜಿಲ್ಲಾಪರಿಷತ್ತಿನಿಂದ ರಸ್ತೆಯನ್ನು ಬೇರ್ಪಡಿಸಬೇಕೆಂದು ಆಲೋಚನೆ ಮಾಡಿದ್ದೇವೆಂದು ಹೇಳಿದ್ದೀರಿ. ಮೀನುಗಾರಿಕಾ ಸಚಿವರು ಮೀನುಗಾರಿಕೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿದರು, ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟವುಗಳನು ಜಿಲ್ಲಾಪರಿಷತ್ತಿನಿಂದ ಹೊರತುಪಡಿಸಬೇಕೆಂದು ಹೇಳಿದರು. ಹೀಗೆ ಯಾವ್ಯಾವುದನ್ನು ಬೇರ್ಪಡಿಸಿ

ಜಿಲ್ಲಾಪರಿಷತ್ತನ್ನು ಸಾಯಿಸಬೇಕೆಂದು ಮಾಡಿದ್ದೀರಿ ಎಂಬುದನ್ನು ನಮಗೆ ತಿಳಿಸಿಬಿಡಿ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಜಿಲ್ಲಾ ಪರಿಷತ್ತಿನ ಬಗ್ಗೆ ಪ್ರತಿದಿನ ಒಂದಲ್ಲಾ ಒಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಹೀಗೆ ಕೊಡುತ್ತಾ ಕೊಡುತ್ತಾ ಜಿಲ್ಲಾಪರಿಷತ್ತನ್ನು ಅಂತಿಮವಾಗಿ ನಿಮ್ಮ ಕಾಲದಲ್ಲಿ ಕೊನೆಗಾಣಿಸುತ್ತೀರಾ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆರ್. ಎನ್. ನಾಯಕ್. — ತಾವು ವಿರೋಧ ಪಕ್ಷದ ನಾಯಕರು, ತಮ್ಮ ಮಾತಿಗೆ ಬೆಲೆ ಬರುತ್ತದೆ. ಕಾರಣವನ್ನು ಸರಿಯಾಗಿ ಅರಿತು ಮಾತನಾಡಬೇಕು. ಮಾತನಾಡುವಾಗ ಲಕ್ಷ್ಯ ಇರಬೇಕು. ಜಿಲ್ಲಾಪರಿಷತ್ತಿನಲ್ಲಿ ಯಾವ ರೀತಿ ಆಡಳಿತ ನಡೆಯುತ್ತಿದೆ, ಹಾಗೂ ಯಾವ ರೀತಿ ಅನ್ಯಾಯ ಮಾಡುತ್ತಿದ್ದಾರೆಂಬುದನ್ನು ತಾವೂ ಕೂಡ ಮನಗಾಣಬೇಕು. ಅದನ್ನು ಸರಿಪಡಿಸುವುದಕ್ಕೆ ಸರಕಾರಕ್ಕೆ ಸಲಹೆ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ. — ನನಗೆ ಇನ್ನೂ ಯಾರಾದರೂ ಬುದ್ಧಿವಾದ ಹೇಳುವಪರಿದರೆ ಒಂದೇ ಸಾರಿ ಹೇಳಿ. ನಾನು ಮಂತ್ರಿಗಳನ್ನು ವಿವರಣೆ ಕೇಳುತ್ತಿದ್ದೇನೆ. ತಾವು ಯಾವಾಗ ಮಂತ್ರಿಯಾದಿರಿ ಉತ್ತರ ಹೇಳುವುದಕ್ಕೆ. ನೆಗಡಿಯಾಗುತ್ತದೆಂದು ಮೂಗು ಕೊಯ್ದುಕೊಳ್ಳುವುದಕ್ಕೆ ಆಗುತ್ತದೆಯೇ? ಔಷಧಿ ಕೊಟ್ಟು ಅದನ್ನು ಸರಿಪಡಿಸಬೇಕು. ಹೀಗೆ ನಡೆಯುತ್ತಾ ಹೋದರೆ ಇನ್ನು ೨-೩ ವರ್ಷದಲ್ಲಿ ತೊಂದರೆಯಾಗುತ್ತದೆ. ವಿಕೇಂದ್ರೀಕೃತ ವ್ಯವಸ್ಥೆಯನ್ನು ವಿಕೃತಗೊಳಿಸಬೇಡಿ ಎಂದು ನಾನು ಹೇಳುತ್ತಿದ್ದೇನೆ. ತಾವು ಕೈಗೊಳ್ಳುತ್ತಿರುವ ಈ ಪ್ರಯತ್ನದಿಂದ ಅದು ವಿಕೃತವಾಗುತ್ತದೆ. ಅದರಲ್ಲಿ ದೋಷವಿದ್ದರೆ ಚರ್ಚೆ ಮಾಡಿ ಸರಿಪಡಿಸೋಣ. ಇನ್ನು ಒಟ್ಟಾರೆ ಕೆಲವು ಕನ್‌ಸೆಷನ್ ಅನ್ನು ಕೊಟ್ಟಿದ್ದೇವೆಂದು ತಾವು ಈಗ ಏನು ಹೇಳಿದ್ದೀರಿ ಈ ಕನ್‌ಸೆಷನ್‌ನ ಒಟ್ಟು ಮೊತ್ತ ಎಷ್ಟು ಎಂಬುದನ್ನು ತಾವು ತಿಳಿಸಬೇಕು. ಇನ್ನು ಕಾಫಿ ವಿಚಾರದಲ್ಲಿ ನಾನು ಹೇಳಿದಂತಹ ವಿಷಯ ತಮಗೆ ಅರ್ಥವಾಗಿದೆಯೆಂದು ನಾನು ತಿಳಿದಿದ್ದೆ. ಅದರ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಅದಕ್ಕೆ ಶಾಶ್ವತವಾದ ಪರಿಹಾರವನ್ನು ಸೂಚನೆ ಮಾಡುವುದಕ್ಕೆ ತಾವು ಎಷ್ಟು ಪ್ರಯತ್ನ ಮಾಡಿದ್ದೀರೋ ಅದಕ್ಕಿಂತ ಹೆಚ್ಚು ಪ್ರಯತ್ನವನ್ನು ನಾನು ಕೂಡ ಮಾಡಿದ್ದೇನೆ. ಮುಖ್ಯವಾಗಿ ಈಗ ಇರತಕ್ಕಂತಹ ಸಮಸ್ಯೆಯಿಂದಾಗಿ ಕಾಫಿ ಬೆಳೆಗಾರರು ತೋಟವನ್ನು ಬೇರೆಯವರಿಗೆ ಕೊಟ್ಟು ಹೋಗತಕ್ಕಂತಹ ಸ್ಥಿತಿ ಇದೆ. ಮತ್ತು ಹೊರಗಡೆಯಿಂದ ಬಂದು ಅದನ್ನು ಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಇದನ್ನು ತಪ್ಪಿಸಬೇಕೆಂದಿದ್ದರೆ ಈವತ್ತು ಇರತಕ್ಕಂತಹ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಏನಾದರೂ ಪರಿಹಾರವನ್ನು ಕೊಟ್ಟರೆ ಈ ಇಂಡಸ್ಟ್ರೀ ಉಳಿಯುತ್ತದೆ ಇಲ್ಲದೇ ಹೋದರೆ ನಿಮ್ಮ ಹೆಸರನ್ನು ಹೇಳಿ ಈ ಇಂಡಸ್ಟ್ರೀ ಸಾಯುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ೪೦ ಕೋಟಿ ರೂಪಾಯಿಯನ್ನು ಪ್ಲಾನಿಂಗ್ ಕಮೀಷನ್‌ನವರು ಕೊಟ್ಟರು ಎಂದು ನಾನು ಹೆಗಡೆಯವರ ಬೆನ್ನು ತಟ್ಟಿದೆ ಎಂದು ಹೇಳಿದರು. ನಾನು ಬೆನ್ನು ತಟ್ಟಿದ ಉದ್ದೇಶವೇನೆಂದರೆ ಪ್ಲಾನಿಂಗ್ ಕಮೀಷನ್‌ನವರು ಇದಕ್ಕೆ ಒಪ್ಪಿಕೊಳ್ಳದೆ ಇಷ್ಟು ಹಣವನ್ನು ಕೊಡದೇ ಇದ್ದರೆ ರಾಜ್ಯದ ಅಭಿವೃದ್ಧಿಗೆ ತೊಂದರೆಯಾಗುತ್ತದೆ ಅಭಿವೃದ್ಧಿಯ ಕೆಲಸವಾಗುವುದಿಲ್ಲ, ಅವರು ನಮಗೆ ಇಷ್ಟು ಹಣವನ್ನು ಕೊಟ್ಟಿದ್ದಾರೆಂದು ಬೆನ್ನು ತಟ್ಟಿದೆ. There is a positive commitment. ಪ್ಲಾನಿಂಗ್ ಕಮೀಷನ್‌ನಿಂದ ನಿಮಗೆ ಸಹಾಯ ಏನು ಕೊಡುತ್ತಾರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು. ಇದೊಂದೇ ಕಾರಣಕ್ಕಾಗಿ ಅಲ್ಲ, ರಾಜ್ಯದ ಎಲ್ಲಾ ಒಟ್ಟಾರೆ ಅಭಿವೃದ್ಧಿ ಕಾರಣಕ್ಕೆ ನಮ್ಮಿಂದ ಯಾವ ಸಹಾಯವನ್ನು ಅಪೇಕ್ಷೆ ಮಾಡಿದರೂ ಕೂಡ ಸಹಾಯ ನೀಡುತ್ತೇವೆ. ಇನ್ನು ದೇಶದ ಉದ್ದಗಲಕ್ಕೂ ಚರ್ಚೆಯಾಗುತ್ತಿರತಕ್ಕಂಥಾ ರೈತರ ಸಮಸ್ಯೆ ಏನು ಇದೆ ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ರೈತಾಪಿ ಜನರಿಗೆ ಏನು ಅನುಕೂಲವನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ತಾವು ಹೇಳಲಿಲ್ಲ. ಇರಿಗೇಷನ್, ಪವರ್‌ನಲ್ಲಿ, ಇಂಟರೆಸ್ಟ್ ಸಬ್ಸಿಡಿ ಕೊಟ್ಟಿದ್ದೇವೆಂದು ತಾವು ಹೇಳಿದಿರಿ. ಆದರೆ ಈ ರೈತಾಪಿ ಜನರ ಸಾಲದ ವಿಚಾರದಲ್ಲಿ ಸಾಲ ಮನ್ನಾ ಮಾಡುವುದರಲ್ಲಿ ನಿಮ್ಮ ಪಾಲು ಏನಾದರೂ ಇದೆಯೋ ಇಲ್ಲವೋ ಎಂಬುದನ್ನು ಹೇಳಿ. ಕೇಂದ್ರದವರು ಕೊಟ್ಟರೆ ಕೊಡುತ್ತೇವೆ ಎಂಬ ಈ ಮಂತ್ರವನ್ನು ಜಪಿಸಬೇಡಿ. "ಉಂಟು" "ಇಲ್ಲವೇ" ಇಲ್ಲ ಎಂದು ಹೇಳಿ. ಕೇಂದ್ರದವರು ತಮಗೆ ಏನು ಹೇಳಿದ್ದಾರೆ ನಿಮ್ಮ ರಾಜ್ಯದಲ್ಲಿ ಈ ಸ್ಕೀಮಿನ ಒಳಗೆ ತಾವು ಎಷ್ಟು ದೂರ ಬರುತ್ತೀರಿ ಎಂದು ಕೇಂದ್ರದವರು ಕೇಳಿದ್ದಾರೆ. ದಯ ಮಾಡಿ ಎಷ್ಟು ದೂರ ಬರುತ್ತೇವೆ ಎಂಬುದನ್ನು ಸ್ಪಷ್ಟವಾಗಿ ಹೇಳಿ. ಇಲ್ಲದಿದ್ದರೆ ಬರುವುದಿಲ್ಲ ಎಂಬುದನ್ನಾದರೂ ಸ್ಪಷ್ಟವಾಗಿ ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ. — ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮುಜರಾಯಿ ನಿಧಿಯ ಬಗ್ಗೆ ಮಾತನಾಡುತ್ತಾ ಈ ಬಾಬಿಗೆ ತಕ್ಷಣ ಹಣವನ್ನು ಬಿಡುಗಡೆ ಮಾಡಿದರೆ ದೇವಸ್ಥಾನಗಳ ರಿಪೇರಿ ವಗೈರೆ ಕೆಲಸಗಳು ಸುಸೂತ್ರವಾಗಿ ನಡೆಯುತ್ತವೆ, ಆದರೆ ಇನ್ನೂ ಈ ಹಣ

ವನ್ನು ಬಿಡುಗಡೆ ಮಾಡಿಲ್ಲವಾದ್ದರಿಂದ ಈ ಹಣವನ್ನು ಬಿಡುಗಡೆ ಮಾಡಲು ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

ಶ್ರೀ ಕಾಮರುಲ್ ಇಸ್ಲಾಂ.—ಹಾಗೆಯೇ ವಕ್ಫ್‌ಗಳಿಗೆ ಬರಬೇಕಾದ ಹಣವನ್ನೂ ಕೂಡ ಬಿಡುಗಡೆ ಮಾಡುವ ಬಗ್ಗೆ ಹೇಳಿಬಿಡಿ.

ಶ್ರೀ ಎಂ. ರಾಜಶೇಖರಮೂರ್ತಿ.—ಈಗಾಗಲೇ ಮುಜರಾಯಿ ಫಂಡ್‌ಗೆ ಸಂಬಂಧಪಟ್ಟಂತೆ ೧ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. The order has already been passed and the amount has been released. ಇನ್ನು ವಕ್ಫ್ ಬೋರ್ಡ್ ವಿಚಾರದಲ್ಲಿ ಹೇಳುವುದಾದರೆ, ಇದು ಈಗತಾನೆ ನನ್ನ ಕೈಗೆ ಬಂದಿದೆ. ನಿನ್ನೆಯ ದಿವಸ ಇದಕ್ಕೆ ಸಂಬಂಧಪಟ್ಟ ಫೈಲು ಬಂದಿತ್ತು. ನಾನು ಇವತ್ತಿನ ಬಜೆಟ್‌ಗೆ ಉತ್ತರವನ್ನು ತಯಾರು ಮಾಡಿಕೊಳ್ಳುವ ಅವಸರದಲ್ಲಿದ್ದ ಕಾರಣ ಅದನ್ನು ನೋಡುವುದಕ್ಕಾಗಲಿಲ್ಲ. ಆ ಹಣವನ್ನು ಎಷ್ಟು ಕೊಡಬೇಕು, ಯಾರಿಗೆ ರಿಲೀಸ್ ಮಾಡಬೇಕು, ವಕ್ಫ್ ಬೋರ್ಡ್‌ನವರಿಗೇನಾದರೂ ರಿಲೀಸ್ ಮಾಡಬೇಕೆ ಹೇಗೆ ಎಂಬುದನ್ನು ಯೋಚಿಸಬೇಕಾಗಿದೆ. ಏಕೆಂದರೆ ಈ ವಿಚಾರ ಸ್ವಲ್ಪ ಕನ್‌ಫ್ಯೂಷನ್‌ನಲ್ಲಿದೆ. ಆ ಕನ್‌ಫ್ಯೂಷನ್ ಇಲ್ಲದಿದ್ದರೆ ನಿನ್ನೆಯೇ ಫಂಡ್‌ನ್ನು ರಿಲೀಸ್ ಮಾಡುತ್ತಿದ್ದೆ. ಇದರಲ್ಲಿ ೪೬ ಲಕ್ಷ ರೂಪಾಯಿಗಳ ಬೇಡಿಕೆ ಬಂದಿದೆ.......

ಶ್ರೀ ಬಿ.ಎಸ್. ಯಡಿಯೂರಪ್ಪ.—ದೇವಸ್ಥಾನಗಳು ಜಾಸ್ತಿ ಇರುವುದರಿಂದ ಫಂಡ್‌ನ್ನು ಸ್ವಲ್ಪ ಜಾಸ್ತಿ ರಿಲೀಸ್ ಮಾಡಿದರೆ ಅವುಗಳ ಜೀರ್ಣೋದ್ಧಾರ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಕೊಂಕಣ ರೈಲ್ವೆ ವಿಚಾರದಲ್ಲಿ ಹೇಳುವುದಾದರೆ, ಇದು ಕೇಂದ್ರ ಸರ್ಕಾರದ ಯೋಜನೆ. ಕೇಂದ್ರ ಸರ್ಕಾರದಿಂದ ಬರಬಹುದಾದ ಪ್ರಾಜೆಕ್ಟ್‌ಗಳನ್ನೆಲ್ಲಾ ನಾವು ಒಪ್ಪಿಕೊಳ್ಳುತ್ತಾ ಹೋದರೆ ಬಹಳಷ್ಟು ಪ್ರಾಜೆಕ್ಟ್‌ಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಇದು ಒಂದಕ್ಕೇ ಕಮಿಟ್‌ಮೆಂಟ್ ಮಾಡಿಕೊಂಡರೆ ಮುಂದೆ ಬಹಳ ತೊಂದರೆಗೆ ನಾವು ಸಿಕ್ಕಿಕೊಳ್ಳಬೇಕಾಗುತ್ತದೆ......

ಡಾ: ಜೀವರಾಜ ಆಳ್ವ.—ಮಹಾರಾಷ್ಟ್ರ ಸರ್ಕಾರ ಕೊಟ್ಟಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ನಾವು ಈ ಪ್ರಾಜೆಕ್ಟನ್ನು ಒಪ್ಪಿಕೊಂಡರೆ ಇದು ಒಂದು ಕೆಟ್ಟ ಸಂಪ್ರದಾಯವಾಗುತ್ತದೆ. ಏಕೆಂದರೆ ಮುಂದೆ ಅವರು ಇನ್ನೂ ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ನಮ್ಮ ಮುಂದೆ ತರುತ್ತಾರೆ. ಆಗ ತೊಂದರೆಯಾಗುತ್ತದೆಂದು ಯೋಚನೆ ಮಾಡಿ ನಾವು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ. ಆದರೆ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳತಕ್ಕ ವಿಚಾರ ಇನ್ನೂ ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ನಾವು ಕೇಂದ್ರ ಸರ್ಕಾರದ ಜೊತೆ ಯಾವರೀತಿ ಸಹಕರಿಸಬೇಕೋ ಆರೀತಿ ಸಹಕರಿಸುತ್ತೇವೆ, ಆದ್ದರಿಂದಲೇ ನಾನು ಈ ವಿಚಾರದಲ್ಲಿ ಕಮಿಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಸಿದ್ಧನಿಲ್ಲ ಎಂದು ಹೇಳಿದ್ದು. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ತಪ್ಪಾಗಿ ತಿಳಿದುಕೊಳ್ಳಬಾರದು.

ಇನ್ನು ಸ್ಕೂಲು ಮತ್ತು ಕಾಲೇಜುಗಳ ವಿಚಾರದಲ್ಲಿ ಹೇಳುವುದಾದರೆ, ಮಂಜೂರಾತಿಯಾಗಿ ೫ ವರ್ಷಕಾಲ ಪೂರ್ತಿಗೊಳಿಸಿರತಕ್ಕವುಗಳಿಗೆ ಗ್ರ್ಯಾಂಟ್‌ನ್ನು ಕೊಡಬೇಕಾದಂಥವು ಬಹಳ ಇವೆ ಎಂದು ಮಾನ್ಯ ವಿರೋಧಪಕ್ಷದ ಸದಸ್ಯರು ಹೇಳಿದರು. ಸ್ವಾಮಿ, ತಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ೫–೬–೭ ವರ್ಷಗಳ ಕಾಲ ಆಗಿದ್ದರೂ ಅವುಗಳಿಗೆ ಏನು ಅನುದಾನವನ್ನು ಮಂಜೂರು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ಆ ಫೈಲುಗಳೂ ಕೂಡ ಇವತ್ತು ನನ್ನ ಹತ್ತಿರ ಬರುತ್ತಿವೆ. ನಾನು ಈ ಮಾತನ್ನು ಒಂದು ರೀತಿಯ ಖೇದದಿಂದ ಹೇಳಬೇಕಾಗಿದೆ. ನಿಮ್ಮ ಸರ್ಕಾರ, ನಮ್ಮ ಸರ್ಕಾರ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹಿಂದಿನ ಸರ್ಕಾರದವರು ಅವತ್ತು ಯಾವ ಯಾವ ಶಾಲಾ ಕಾಲೇಜುಗಳಿಗೆ ಗ್ರ್ಯಾಂಟ್‌ನ್ನು ಕೊಡಬೇಕಾಗಿತ್ತೋ ಅದನ್ನೆಲ್ಲಾ ಆಗಿಂದಾಗಲೇ ಕೊಡುತ್ತಾ ಬಂದಿದ್ದರೆ ಇವತ್ತು ಈ ಹೊರೆ ನಮಗೆ ಕಡಿಮೆಯಾಗುತ್ತಿತ್ತು. ನಮಗೆ ಗ್ರ್ಯಾಂಟ್ ಕೊಡಿ, ನಮಗೆ ಗ್ರ್ಯಾಂಟ್ ಕೊಡಿ ಎಂದು ಫೈಲುಗಳು ಬರುತ್ತಿರುವುದರಿಂದ ನಾನು ಏನು ಮಾಡಿದ್ದೇನೆ ಎಂದರೆ, ಒಟ್ಟು ಎಷ್ಟು ಶಾಲೆಗಳು ಕಾಲೇಜುಗಳು ಮಂಜೂರಾಗಿವೆ? ಅವುಗಳಲ್ಲಿ ಎಷ್ಟು ಶಾಲೆಗಳು ೫ ವರ್ಷದ ಅವಧಿಯನ್ನು ಮುಗಿಸಿವೆ? ಅವುಗಳಿಗೆ ಎಷ್ಟು ಗ್ರ್ಯಾಂಟನ್ನು ಬಿಡುಗಡೆ ಮಾಡಬೇಕು ? ಎಂಬ ವಿವರಗಳನ್ನು ಸರ್ಕಾರಕ್ಕೆ ತಿಳಿಸಬೇಕೆಂದು ವಿದ್ಯಾಭ್ಯಾಸ ಇಲಾಖೆಗೆ ಬರೆದು ತಿಳಿಸಿದ್ದೇವೆ. ಆ ವಿವರಗಳು ಬಂದಮೇಲೆ ನಾವು ಎಷ್ಟು ಶಾಲಾಕಾಲೇಜುಗಳಿಗೆ ಎಷ್ಟೆಷ್ಟು ಸಹಾಯ ಮಾಡಬಹುದೆಂಬುದನ್ನು ಯೋಚನೆ ಮಾಡಿ ತೀರ್ಮಾನ ಕೈಗೊಳ್ಳುತ್ತೇವೆ. ಇನ್ನು ಪಾಪ್ಯುಲರ್ ಸ್ಕೀಮ್‌ಗಳನ್ನು ಪರಿಪೂರ್ಣವಾಗಿ ತೆಗೆಯಬೇಡಿ, ಇದನ್ನು ಉಳಿಸಿಕೊಂಡು ಹೋಗಬೇಕೆಂದು ಎಲ್ಲರೂ ವಾದಮಾಡಿದ್ದಾರೆ. ನಮ್ಮ ಉದ್ದೇಶವಾದರೂ ತಮಗೆ

ಗೊತ್ತಿದೆ. ಯಾವುದೇ ಪಕ್ಷ ಸರ್ಕಾರದಲ್ಲಿರಲಿ, ಸರ್ಕಾರದಲ್ಲಿರತಕ್ಕಂಥ ಹಣವನ್ನು ಉಪಯೋಗಿಸಿಕೊಂಡು ಬದಲಾವಣೆ ಮಾಡಿಕೊಂಡು ಹೋಗಲು ಕಾನೂನು ಬದಲಾವಣೆ ಮಾಡುವುದು, ರಾಜಕೀಯ ಭ್ರಷ್ಟಾಚಾರ ಇವೇ ಮುಂತಾದ ಇಲ್ಲದ್ದನ್ನೆಲ್ಲ ಮಾಡಿರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನನ್ನ ಉದ್ದೇಶವೇನೆಂದರೆ ಅವರಲ್ಲಿ ಬೇಡಿಕೆ ಕೇಳುವ ಮನೋಭಾವ ಬರಬಾರದು ಎಂದು. ಪುಕ್ಕಟೆ ಎಲ್ಲ ಸಿಗುತ್ತದೆ ಎಂದು ಅದನ್ನು ಕಿತ್ತು ತಿನ್ನಬೇಕೆಂಬ ಮನೋ ಭಾವನೆ ಜನರಲ್ಲಿ ಹೋಗಬೇಕು. ಆ ಫೀಲಿಂಗ್ ಜನರನ್ನು ಮುಟ್ಟಬಾರದು, ಆ ದೃಷ್ಟಿಯಿಂದ ಇದನ್ನು ತೆಗೆದದ್ದೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ. ಈ ಎರಡು ಪ್ರಬಲವಾದ ಕಾರಣಗಳಿಂದ ಈ ಸ್ಕೀಮ್‌ನ್ನು ತೆಗೆಯಬೇಕಾಯಿತು, ಮತ್ತು ಜಿಲ್ಲಾಪರಿಷತ್ ಬಗ್ಗೆ ತಾವು ಹೇಳಿದಿರಿ ಒಂದೊಂದು ಇಲಾಖೆಯನ್ನು ತೆಗೆಯಬೇಕೆಂದು. ಈ ರೀತಿ ಪ್ರತ್ಯೇಕವಾಗಿ ಮಾಡಿದರೆ ಜಿಲ್ಲಾ ಪರಿಷತ್‌ಗಳಿಗೆ ಕೆಲಸವೇನು ಇರುತ್ತದೆ ? ಇನ್ನು ಉಳಿಯುವ ಕೆಲಸವೆಂದರೆ ಸಂಬಳವನ್ನು ಕೊಡತಕ್ಕಂಥದ್ದು ರಸ್ತೆಗಳ ವಿಚಾರದಲ್ಲಿ ಅದು ಸರಿಯಿಲ್ಲವೆಂದು ಹೇಳಿದಿರಿ. ಅವರ ಕಾರ್ಯವ್ಯಾಪ್ತಿಯಲ್ಲಿ ಏನು ಇದೆ ಆ ಕಾರ್ಯವ್ಯಾಪ್ತಿಯನ್ನು ಮೊಟಕು ಮಾಡಬೇಕೆಂಬ ಉದ್ದೇಶದಿಂದ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆಂದು ಹೇಳುತ್ತಿಲ್ಲ. ಅವರಿಂದಲೇ ಅವರ ಕರ್ತವ್ಯವನ್ನು ಮಾಡಿಸಬೇಕೆಂದು ನಮ್ಮ ಉದ್ದೇಶವೂ ಆಗಿರುತ್ತದೆ. ಇದರಿಂದಾಗಿ ಕೆಲವು ರಸ್ತೆಗಳನ್ನು ಉಳಿಸಿಕೊಂಡು ಕೆಲವು ರಸ್ತೆಗಳನ್ನು ಪಿ.ಡಬ್ಲ್ಯೂ. ಡಿ. ಇಲಾಖೆಗೆ ವಹಿಸಬೇಕು ಅವರಿಂದ ಆ ಕೆಲಸಗಳನ್ನು ಮಾಡಿಸಬೇಕೆಂದು ಹೇಳಿದ್ದೇಹೊರತು ಅವರಿಂದ ಟ್ರಾನ್ಸ್‌ಫರ್ ಮಾಡಿಸುತ್ತೇವೆಂದು ನಿರ್ಧಿಷ್ಟವಾಗಿ ಹೇಳಲಿಲ್ಲ. ಇದನ್ನು ಸ್ವಲ್ಪ ಕುರಿತು ಯೋಚನೆ ಮಾಡಬೇಕಾಗುತ್ತದೆ. ತಾವು ಇಲ್ಲಿ ಸದಸ್ಯರಾಗಿ ಬಂದಿರುತ್ತೀರಿ. ತಮ್ಮ ತಮ್ಮ ಕ್ಷೇತ್ರಗಳಿಗೆ ಹೋದಾಗ ಜನ ತಮ್ಮನ್ನು ಕೇಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ಜಿಲ್ಲಾಪರಿಷತ್ ರಸ್ತೆಗಳು ಏನು ಇರುತ್ತವೆ, ಆ ರಸ್ತೆಗಳ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳದೆಹೋದರೆ ಇನ್ನು ೨೫ ವರ್ಷಗಳಾದರೂ ಕೂಡ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ದಯವಿಟ್ಟು ವಿತ್‌ಡ್ರಾ ಮಾಡಿಕೊಳ್ಳಬೇಕು.

ಶ್ರೀ ಆರ್.ಎಲ್. ಜಾಲಪ್ಪ.—ವಿತ್‌ಡ್ರಾ ಮಾಡಿಕೊಳ್ಳಬೇಕಾದರೆ ಮಿಟಮಿನ್ ಬೇಕಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಆದಕ್ಕೋಸ್ಕರವಾಗಿ ಎರಡು ಆಟಿಟ್ಯೂಡ್ ಇಲ್ಲದೆ ಪಿ.ಡಬ್ಲ್ಯೂ.ಡಿ.ಯಲ್ಲಿ ಯಾವ ರಸ್ತೆಗಳ ಕೆಲಸವನ್ನು ಸೇರಿಸಬೇಕೋ ಆ ರಸ್ತೆಗಳ ಕೆಲಸವನ್ನು ಸೇರಿಸಿ. ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಆ ರಸ್ತೆಯನ್ನು ಉತ್ತಮಪಡಿಸಬೇಕೆಂಬ ಎರಡು ವಿಚಾರಗಳನ್ನು ಹೇಳಿರುತ್ತೇನೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಜಿಲ್ಲಾಪರಿಷತ್ ಸಿಬ್ಬಂದಿ ಏನಿದೆ ಆ ಸಿಬ್ಬಂದಿಯಿಂದ ಆ ಕೆಲಸಗಳನ್ನು ಮಾಡಸಲಿಕ್ಕೆ ಸಾಧ್ಯವಾಗುವುದಿಲ್ಲ. ಕೆರೆಗಳ ರಿಪೇರಿ, ರಸ್ತೆಗಳ ರಿಪೇರಿ, ಯಾವ ಕೆಲಸಗಳು ಕೂಡ ಆಗಿಲ್ಲ, ಜನರು ಟೀಕೆ ಮಾಡುವುದು ಜಿಲ್ಲಾಪರಿಷತ್‌ಗಳನ್ನಲ್ಲ. ಎಂ.ಎಲ್.ಎ.ಗಳಾಗಿ ಬಂದಿರುವ ನಿಮ್ಮನ್ನು ಟೀಕೆ ಮಾಡುತ್ತಾರೆ. ನೀವು ಚುನಾವಣೆಯಾದಿರಿ, ನಿಮ್ಮಿಂದ ಒಂದು ಕೆಲಸವನ್ನೂ ಮಾಡಿಸಲಿಕ್ಕೆ ಆಗಲಿಲ್ಲ. ಒಂದು ರಸ್ತೆಯೂ ಕೂಡ ಆಗಿಲ್ಲವೆಂದು ಟೀಕೆ ಮಾಡುತ್ತಾರೆ. ಆ ದೃಷ್ಟಿಯಿಂದ ಕೆಲವು ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ಇಲಾಖೆಗೆ ಟ್ರಾನ್ಸ್‌ಫರ್ ಮಾಡಲಿಕ್ಕೆ ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಜಿಲ್ಲಾಪರಿಷತ್‌ನವರ ಕೈ ತಪ್ಪಿಸಿ ಅವರಿಂದ ತಾವು ವಾಪಸ್ ತೆಗೆದುಕೊಂಡರೆ ಬಹಳ ಕಷ್ಟವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಪಿ ಡಬ್ಲ್ಯೂ.ಡಿ. ಇಲಾಖೆಯಲ್ಲಿ ೪-೫ ಬ್ಲಾಕ್‌ಗಳು ಇರುತ್ತವೆ. ಇರಿಗೇಷನ್‌ಗೆ ಒಬ್ಬರು ಆಫೀಸರ್ ಇರುತ್ತಾರೆ, ಮೈನರ್ ಇರಿಗೇಷನ್‌ಗೆ ಬೇರೆ ಆಫೀಸರ್ ಇರುತ್ತಾರೆ. ವರ್ಕ್‌ಲೋಡ್ ಏನು ಇರುವುದಿಲ್ಲ. ಆದ್ದರಿಂದ ಪ್ರತಿಯೊಂದನ್ನೂ ರಿ ಆರ್ಗನೈಸ್ ಮಾಡಿದರೆ ಹಣ ಉಳಿಯುತ್ತದೆ ಮತ್ತು ಜಿಲ್ಲಾಪರಿಷತ್‌ನಿಂದ ಸರ್ಕಾರ ಒಳ್ಳೆಯ ಕೆಲಸ ಮಾಡಿಸಲಿಕ್ಕೆ ಸಾಧ್ಯವಾಗುತ್ತದೆಂದು ಸಲಹೆ ಮಾಡುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಜಿಲ್ಲಾಪರಿಷತ್‌ಗಳಲ್ಲಿರತಕ್ಕಂಥ ಟ್ರಾಕ್ಟರ್ಸ್ ಮತ್ತು ಟಿಲ್ಲರ್ಸ್‌ಗಳಿಗೆ ಯಾವ ಕೆಲಸವಿಲ್ಲದೆ ಅವು ಹಾಗೆಯೇ ಇವೆ.

ಇಂಜಿನಿಯರ್‌ಗಳಿಗೆಲ್ಲ ಪುಗಸಟ್ಟೆ ಸಂಬಳ ಕೊಡುತ್ತಿದ್ದೀರಾ? ಖಂಡಿತವಾಗಿಯೂ ಇವತ್ತಿನ ದಿವಸ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರವಲ್ಲ ಜಿಲ್ಲಾ ಪರಿಷತ್ತಿನಲ್ಲೂ ಕೆಲಸಗಳು ನಡೆಯುತ್ತಿಲ್ಲ.

ಶ್ರೀ ಆರ್.ಎಸ್. ನಾಯಕ್.—ಇಂಜಿನಿಯರ್ ಅವರ ಅಣ್ಣ ತಮ್ಮಂದಿರೇ ಅಲ್ಲಿ ಕಂಟ್ರಾಕ್ಟರಾಗಿರುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಜಿಲ್ಲಾ ಪರಿಷತ್ತಿನಲ್ಲಿ ಶೇಕಡ ೫೦ಕ್ಕೂ ಹೆಚ್ಚು ಅವ್ಯವಹಾರಗಳಾಗಿವೆ. ಈ ಬಗ್ಗೆ ನಾನು ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಕೇಳಿದ್ದೇನೆ. ಅಲ್ಲಿ ಯಾವ ಕೆಲಸಗಳೂ ಆಗಿಲ್ಲ. ಜಿಲ್ಲಾ ಪರಿಷತ್ತಿನಲ್ಲೂ ಇವತ್ತಿನ ದಿವಸ ಅವ್ಯವಹಾರವಾಗುತ್ತಿದೆ. ಯಾವ ರಸ್ತೆಗಳು, ಶಾಲೆಗಳು, ನೀರಾವರಿ ಕೆಲಸಗಳು ಆಗುತ್ತಿಲ್ಲ ಅದಕ್ಕೋಸ್ಕರ ಈ ಕೆಲಸಗಳನ್ನೆಲ್ಲ ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳುವುದು ಸರಿಯಾಗಿರುತ್ತದೆ.

ಶ್ರೀ ಆರ್.ಎನ್. ನಾಯಕ್.—ಅವರು ಹೇಳಿದ ಮಾತನ್ನು ಕೇಳುತ್ತಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಬಗ್ಗೆ ಸರ್ಕಾರ ತೀವ್ರ ಆಲೋಚನೆಯಲ್ಲಿದೆ. ಸರ್ಕಾರ ಸದ್ಯದಲ್ಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ರಸ್ತೆಗಳು ಆದಷ್ಟು ಜಾಗ್ರತೆ ರಿಪೇರಿ ಆಗಬೇಕೆಂಬುದೇ ನಮ್ಮ ಉದ್ದೇಶ. ಏನು ಕಾರ್ಯಕ್ರಮ ಆಗಬೇಕು ಅದನ್ನು ಹಾಕಿಕೊಳ್ಳುತ್ತೇನೆ. ನೂರು ಕೋಟಿ ರೂಪಾಯಿಗಳನ್ನು ೫ ವರ್ಷಗಳಲ್ಲಿ ಖರ್ಚು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ರೆಗ್ಯುಲೇಟೆಡ್ ಮಾರ್ಕೆಟ್ ಏನಿದೆ ಅದರಿಂದ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಮಾಡಿದ್ದೇವೆ. ಅಂದರೆ ವರ್ಷಕ್ಕೆ ೨೦ ಕೋಟಿ ರೂಪಾಯಿ ಬರುತ್ತದೆ. ಇನ್ನೂ ಜಾಸ್ತಿ ಮೊಬಲಗು ಬೇಕಾಗುತ್ತದೆ. ಅದನ್ನು ನಮ್ಮ ಬಡ್ಜೆಟ್‌ನಿಂದ ಒದಗಿಸಲು ಪ್ರಯತ್ನಿಸುತ್ತೇವೆ. ತೆರಿಗೆಯಿಂದ ಹೆಚ್ಚು ಹಣ ಬಂದರೆ ಬಾಕಿ ಬರುವುದು ವಸೂಲಾದರೆ, ಹೀಗೆ ಈ ಪ್ರಕಾರ ಬಂದದ್ದನ್ನು ರಸ್ತೆಯ ಕೆಲಸಕ್ಕೆ ಉಪಯೋಗಿಸಬೇಕೆಂಬುದು ನಮ್ಮ ಮನಸ್ಸಿನಲ್ಲಿದೆ. ರಸ್ತೆಗಳು ಆದಷ್ಟು ಜಾಗ್ರತೆ ಆಗಬೇಕೆಂದು ನಮ್ಮ ಮನಸ್ಸಿನಲ್ಲಿದೆ. ಆ ದಿಸೆಯಲ್ಲಿ ಕ್ರಮ ಕೈಗೊಳ್ಳುತ್ತೇವೆ. ಇವರು ಹೇಳಿದ ೫ ವಿಚಾರಗಳನ್ನು ಪ್ರಸ್ತಾವ ಮಾಡಿದ್ದೇವೆ. ಒಟ್ಟು ಟ್ಯಾಕ್ಸ್ ಪ್ರಪೋಸಲ್ ಕೊಟ್ಟಮೇಲೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದೇನೆ. ಆ ರಿಯಾಯಿತಿಗಳ ಮೊತ್ತ ಎಷ್ಟೆಂದರೆ ಒಟ್ಟು ೮ ಕೋಟಿ ರೂಪಾಯಿಗಳು.

ಶ್ರೀ ಡಿ.ಬಿ. ಚಂದ್ರೇಗೌಡ.—ರೈತರ ಸಾಲ ಮನ್ನಾ ವಿಚಾರದಲ್ಲಿ ನಿಮ್ಮ ನಿಲುವು ಏನು ?

† SRI QAMARUL ISLAM.-Sir, I would like to seek a few clarifications from the Hon'ble Finance Minister. We are all aware of the financial position of the Municipalities and the Corporations. After the abolition of the Octroi, they have not been able to spend money on the development of roads and other facilities to be given to the people. I have suggested that Octroi should be re-introduced and Entry tax should be abolished. Let the Hon'ble Finance Minister kindly tell me whether the Government is interested in re-introducing Octroi and abolish the Entry tax. In the alternative, I suggest that the grant of compensation in lieu of Octroi should be doubled, because the grant of compensation in lieu of Octroi was decided as long back as in 1978 when the Octroi was abolished and only an increase of 2% or 3% is given every year. I want that this compensation should be doubled so that the local bodies can use this money for the development works and other facilities to be given to the people. Secondly, I had specifically mentioned that the post of Executive Engineer in the Gulbarga City Corporation should be created again which was abolished some years ago. Because, even for an estimate of Rs. 10,000/- it has to go to the Public Works Department. If this post is created, even an estimate of 2 lakhs or three lakhs can be finalised within the Corporation. Therefore, I want that the post of Executive Engineer in the Gulbarga City Corporation should be created.

Secondly, the Town Municipality Officer should also be there in the City Corporation as it is there in Belgaum and other places so that through a single window one can get his building plan and

everything sanctioned in the Municipality and Corporation. I want a reply to these clarifications from the Hon. Minister.

ಶ್ರೀ ಎಂ. ರಾಜಶೇಖರಮೂರ್ತಿ.— ಆಕ್ಟ್ರಾಯಿ ಬಗ್ಗೆ ಹೇಳುತ್ತಾರೆ, ಕಾರ್ಪೊರೇಷನ್‌ಗಳು ಮತ್ತು ಮುನಿಸಿಪಾಲಿಟಿಗಳ ಹಣಕಾಸಿನ ಸ್ಥಿತಿ ನೋಡಿದರೆ ಬಹಳ ವೀಕ್ ಇದೆ, ಕೆಲಸ ಕಾರ್ಯಗಳು ಮಾಡುವುದಕ್ಕಾಗುವುದಿಲ್ಲ, ಸರ್ಕಾರದಿಂದ ಕೊಡುತ್ತಿರುವ ಹಣ ಸಕಾಲಕ್ಕೆ ಹೋಗುತ್ತಿಲ್ಲ ಹಾಗೂ ಅದು ಸಾಲುವುದಿಲ್ಲ, ಆದ್ದರಿಂದ ಆ ಸಂಸ್ಥೆಗಳನ್ನು ಬಲಪಡಿಸಬೇಕಾದರೆ ಮತ್ತೆ ಆಕ್ಟ್ರಾಯನ್ನು ಇಂಟ್ರಡ್ಯೂಸ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ಮೊದಲು ಆಕ್ಟ್ರಾಯಿ ಇತ್ತು ಅದರಿಂದ ಅನೇಕ ತೊಂದರೆಗಳು ಆಗುತ್ತವೆಂಬ ಅಂಶ ಸರ್ಕಾರದ ಮುಂದೆ ಬಂದಾಗ ಅದನ್ನು ಸರ್ಕಾರ ಅಬಾಲಿಷ್ ಮಾಡಿತು. ಅನೇಕ ನ್ಯೂನತೆಗಳನ್ನು ತಪ್ಪಿಸುವುದಕ್ಕೆ ಆ ರೀತಿ ಮಾಡಿದ್ದಾರೆ. ಆಕ್ಟ್ರಾಯಿಯಿಂದ ಏನು ಆದಾಯ ಬರುತ್ತಿತ್ತೋ ಅದನ್ನು ಸರ್ಕಾರವೇ ಕೊಡಬೇಕೆಂದು ಹಿಂದೆ ತೀರ್ಮಾನ ಆಗಿದೆ. ಆದರೆ ಪ್ರತಿ ವರ್ಷ ಈ ಸಂಸ್ಥೆಗಳಿಗೆ ಏನು ಕೊಡಬೇಕಾಗಿತ್ತೋ ಅದನ್ನು ಹಣಕಾಸಿನ ಮುಗ್ಗಟ್ಟಿನಿಂದ ಕೊಡುವುದಕ್ಕಾಗಲಿಲ್ಲ. ದಿನೇದಿನೇ ಖರ್ಚು ಬಹಳ ಜಾಸ್ತಿಯಾಗುತ್ತಿದೆ. ಆದ್ದರಿಂದ ಹಿಂದೆ ತೆಗೆದುಕೊಂಡ ತೀರ್ಮಾನವನ್ನು ಹೊಸದಾಗಿ ರಿವ್ಯೂ ಮಾಡಬೇಕು ಎಂಬ ಅರ್ಥದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ಜೀವರಾಜ್ ಆಳ್ವ.— ಡಬ್ಬಲ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ.— ಡಬ್ಬಲ್ ಆಗಲೀ, ೧೦ ಪರ್ಸೆಂಟಾಗಲೀ ರಿವ್ಯೂ ಮಾಡಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಕಮರುಲ್ ಇಸ್ಲಾಂ.— ಅದು ೧೯೭೮ ರಲ್ಲಿ ಮಾಡಿದ್ದು.

SRI M. RAJASHEKHARAMURTHY.—I will get the matter re-examined and we will try to help the local bodies to the extent possible.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ...

ಶ್ರೀ ಎಂ. ರಾಜಶೇಖರಮೂರ್ತಿ.— ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಸ್ಪೀಚ್‌ನಲ್ಲಿ ರೈತರ ಸಾಲದ ಬಗ್ಗೆ ಪ್ರಸ್ತಾಪ ಮಾಡಿಲ್ಲ ಎಂದು ಹೇಳಿದರು. ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ನಮ್ಮನ್ನು ಮೋಸಗಾರರು ಎಂದು ಹೇಳಿದರು. ಇನ್ನು ಕೆಲವರು ನಮ್ಮದು ರೈತ ವಿರೋಧಿ ಸರ್ಕಾರ ಎಂದು ಹೇಳಿದರು. ಹೀಗೆ ನಾನಾ ರೀತಿಯಲ್ಲಿ ನಮ್ಮ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಏತಕ್ಕೆ ಟೀಕೆ ಟಿಪ್ಪಣಿಗಳನ್ನು ಮಾಡಿದರು ಎಂಬುದು ನನಗೆ ಅರ್ಥವಾಗಲಿಲ್ಲ. ನಾವು ನಮ್ಮ ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಅಧಿಕಾರಕ್ಕೆ ಬಂದರೆ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದವರಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಚುನಾವಣೆ ಸಂದರ್ಭದಲ್ಲಿ ಹೇಳಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ.— ಪ್ರೆಸ್ ಕಟಿಂಗ್ಸ್ ಬೇಕಾದರೆ ಕೊಡುತ್ತೇವೆ.

ಶ್ರೀ ಎಂ. ರಾಜಶೇಖರಮೂರ್ತಿ.— ಸಾಲ ಮನ್ನಾ ಮಾಡುತ್ತೇವೆಂದು ನಾವು ಹೇಳಿಲ್ಲ. ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಜನಗಳಿಂದ ಓಟು ತೆಗೆದುಕೊಂಡು ಅಧಿಕಾರ ಪಡೆದವರು ನಮ್ಮ ಸ್ನೇಹಿತರು.

ಶ್ರೀ ಆರ್. ಎಲ್. ಜಾಲಪ್ಪ.— ಜನರು ನಿಮ್ಮ ಮಾತು ಕೇಳಿ ನಿಮಗೆ ಓಟು ಕೊಟ್ಟಿದ್ದಾರೆ. ನಮ್ಮ ಮಾತು ಕೇಳಿ ನಮಗೆ ಓಟು ಕೊಡಲಿಲ್ಲ.

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಗಳಾಗಿದ್ದಾಗ ರೈತರ ಶೋಷಣೆ ಆಯಿತು.

ಶ್ರೀ ಎಂ. ರಾಜಶೇಖರಮೂರ್ತಿ.— ಮೋಸಗಾರರು ನಾವಲ್ಲ. ವಚನ ಭ್ರಷ್ಟರು ನಾವಲ್ಲ. ರೈತರ ವಿರೋಧಿ ನಾವಲ್ಲ. ಈ ಆಪಾದನೆಗಳನ್ನು ಅವರೇ ಹೊತ್ತುಕೊಂಡು ತೀರ್ಮಾನ ಮಾಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ತಮ್ಮ ಉತ್ತರದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಡೆವಲಪ್‌ಮೆಂಟ್ ಲೋನ್ ಹಾಗೂ ಸಹಾಯಧನ ಕೋಟ್ಯಾಂತರ ರೂಪಾಯಿ ಏನು ಬಾಕಿ ಇದೆ ಅದನ್ನು ಕೊಡುವುದಕ್ಕೆ ಎಷ್ಟು ಹಣ ತೆಗೆದಿಟ್ಟಿದ್ದೀರಿ ? ಎರಡನೆಯದು ಕಬ್ಬಿನ

ಮೇಲೆ ತೆರಿಗೆ ಹಾಕಿದ್ದೀರಿ, ಒಂದು ಟನ್ ಕಬ್ಬಿಗೆ ೧೬ ರೂಪಾಯಿ ಬಿದ್ದರೆ ೧೦ ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುತ್ತಿತ್ತು ೬ ರೂಪಾಯಿ ರೈತರಿಗೆ ಬೀಳುತ್ತಿತ್ತು. ಈಗ ೩೫೦–೪೦೦ ರೂಪಾಯಿ ಬರುತ್ತಿದ್ದರೆ ೩೫–೪೦ ರೂಪಾಯಿನಷ್ಟು ತೆರಿಗೆ ರೈತರಿಗೆ ಜಾಸ್ತಿ ಬರುತ್ತಿದೆ. ಆದಕ್ಕೋಸ್ಕರ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ೬ ರೂಪಾಯಿ ಎಲ್ಲಿ, ೩೬ ರೂಪಾಯಿ ಎಲ್ಲಿ ? ಇದರಿಂದ ರೈತರಿಗೆ ಭಾರ ಆಗುತ್ತದೆಂದು ಹೇಳುತ್ತೇನೆ. ಈ ಬಗ್ಗೆ ತಾವು ದಯಮಾಡಿ ಮೊದಲು ಇದ್ದಹಾಗೆ ಮಾಡಿ. ಇಲ್ಲದಿದ್ದರೆ ಇದನ್ನು ಕೈಬಿಡಿ ಎಂದು ನಾನು ಹೇಳುತ್ತೇನೆ. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ೪೨೫ರೂ. ಇದೆ. ಸಂಕೇಶ್ವರದಲ್ಲಿ ಟನ್‌ಗೆ ೪೫೦ ರೂಪಾಯಿ ಇದೆ. ಶಿವಮೊಗ್ಗದಲ್ಲಿನ ಕಾರ್ಖಾನೆಯಲ್ಲಿ ಟನ್‌ಗೆ ೩೩೫ ರೂಪಾಯಿ ಇದೆ. ಇವತ್ತು ಇಡೀ ರಾಜ್ಯದಲ್ಲಿ ಒಂದೇ ರೀತಿಯ ಗೊಬ್ಬರ ಹಾಕುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಮಾಡುವುದು ಏನೆಂದರೆ ಇಡೀ ರಾಜ್ಯದಲ್ಲಿ ಕನಿಷ್ಠ ಟನ್‌ಗೆ ೪೫೦ ರೂಪಾಯಿ ಕೊಡುವ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ. ಇವತ್ತು ಮೊದಲೇ ಇದ್ದ ವ್ಯವಸ್ಥೆಯನ್ನು ಮುಂದುವರಿಸಬೇಕು. ಇವತ್ತು ಏನು ಶೇಕಡಾ ೮ ರಷ್ಟು ತೆರಿಗೆ ವಸೂಲಿ ಮಾಡುತ್ತೀರಿ ಆದರಿಂದ ರೈತರಿಗೆ ದೊಡ್ಡ ಭಾರ ಆಗುತ್ತದೆ. ಇನ್ನು ಮೂರನೆಯದಾಗಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ಅದರಂತೆ ತಾವು ಸಾಲ ಮನ್ನಾ ಮಾಡಿ. ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುತ್ತೇವೆ ಎಂದು ಹೇಳಿದ ಮೇಲೆ ರೈತರ ಪರಿಸ್ಥಿತಿ ಸರಿಯಿಲ್ಲವೆಂದು ಏನು ಚುನಾವಣೆ ಸಮಯದಲ್ಲಿ ಹೇಳಿದ್ದೀರಿ, ಆದನ್ನು ಗಮನದಲ್ಲಿ ಇಟ್ಟುಕೊಂಡು ಸಾಲ ಮನ್ನಾ ಮಾಡುವಾಗ ನಿಮ್ಮ ಕಡೆಯಿಂದಲೂ ಹಣವನ್ನು ಈ ಬಗ್ಗೆ ಇಟ್ಟುಕೊಂಡು ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಮಾಡುವಾಗ ಆದರ ಲಾಭವನ್ನು ರೈತರಿಗೆ ಕೊಡಿ. ರೈತರ ಸಾಲ ಮನ್ನಾ ಬಗ್ಗೆ ಈ ಮೂಲಕ ತಾವು ದಿಟ್ಟ ಹೆಜ್ಜೆ ಇಡಿ. ಇಲ್ಲದಿದ್ದರೆ ನಾವು ಇಲ್ಲಿ ಸದನ ಮುಗಿಸಿಕೊಂಡು ೨ನೇ ತಾರೀಖು ವಾಪಸ್ಸು ನಮ್ಮ ಕ್ಷೇತ್ರಕ್ಕೆ ಹೋದಾಗ ರೈತರ ಮುಖವನ್ನು ನೋಡುವುದು ಕಷ್ಟವಾಗುತ್ತದೆ. ಕೇಂದ್ರದಲ್ಲೂ ನಿಮ್ಮ ಸರ್ಕಾರ ಇದ್ದಿದ್ದರೆ ತಾವು ಒತ್ತಾಯವನ್ನು ತರುತ್ತಿರಲಿಲ್ಲವೇ ? ಆದೇ ರೀತಿ ಕಬ್ಬಿನ ದರವನ್ನು ಪುನರ್ ಪರಿಶೀಲನೆ ಮಾಡುವ ಬಗ್ಗೆ ಸರ್ಕಾರದಿಂದ ನೇರ ಉತ್ತರವನ್ನು ನಾನು ಬಯಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.— ಸಣ್ಣಪುಟ್ಟ ಕೈಗಾರಿಕೆಗಳಿಗೆ, ಗೃಹ ಕೈಗಾರಿಕೆಗಳಿಗೆ ಸಬ್ಸಿಡಿ ಸ್ಕೀಮ್ ಏನು ಇತ್ತು ಅದು ಈಗಲೂ ಇದೆ. ಅವಕ್ಕೆ ಡೆವಲಪ್‌ಮೆಂಟ್ ಲೋನ್ ಹಾಗೂ ಸಬ್ಸಿಡಿ ಕೊಡುವ ಯೋಜನೆ ಇದೆ. ನಾನು ಅಧಿಕಾರವನ್ನು ವಹಿಸಿಕೊಂಡಾಗ ಮೊದಲು ನಾನು ವಿಷಯ ತರಿಸಿಕೊಂಡಾಗ ೩೪ ಕೋಟಿ ಡೆವಲಪ್‌ಮೆಂಟ್ ಲೋನ್ ಹಾಗೂ ೩೩ ಕೋಟಿ ರೂಪಾಯಿ ಸಬ್ಸಿಡಿ ಅವರಿಗೆ ಕೊಡಬೇಕಾದ್ದು ಬಾಕಿ ಇತ್ತು. ಈ ಹಣ ಬಹಳ ದಿವಸಗಳಿಂದ ಎಂದರೆ ಕಳೆದ ೩–೪ ವರ್ಷಗಳಿಂದಲೂ ಅಕ್ಯುಮುಲೇಟ್ ಆಗುತ್ತಾ ಬಂದಿದೆ. ಇದು ನಮ್ಮ ಸರ್ಕಾರದ್ದೇ ಬಾಕಿ ಅಲ್ಲ. ನಾನು ಬಂದಮೇಲೆ ಇದನ್ನು ಸ್ವಲ್ಪ ಸ್ವಲ್ಪ ರಿಲೀಸ್ ಮಾಡಿದ್ದೇನೆ. ಮತ್ತೆ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಈ ಬಗ್ಗೆ ಸುಮಾರು ೧೧ ಅಥವಾ ೧೨ ಕೋಟಿ ರೂಪಾಯಿ ಪ್ರೊವೈಡ್ ಮಾಡಿದ್ದೇವೆ. ಇದು ಸಾಲದೇ ಇದ್ದರೆ ಅದನ್ನು ಆಮೇಲೆ ನೋಡೋಣ. ಎಲ್ಲವನ್ನೂ ಹಂತಹಂತವಾಗಿ ನಾವು ಮಾಡಬೇಕಾಗುತ್ತದೆ. ನಾವು ಈ ಬಗ್ಗೆ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಂಡಿದ್ದೇವೆ. ಹಾಗೂ ಹಳೆಯದ್ದನ್ನೂ ಸ್ವಲ್ಪ ಸ್ವಲ್ಪ ರಿಲೀಸ್ ಮಾಡಿದ್ದೇವೆ. ಒಂದೇ ಸಾರಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಕಬ್ಬಿನ ಬಗ್ಗೆ ಹೇಳಿದ್ದಾರೆ. ನಾವು ಇವತ್ತು ರೈತರಿಗೆ ಟನ್‌ಗೆ ಕೊಡುತ್ತಿರುವುದು ೩೫೦ ರೂಪಾಯಿಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ — ಇಲ್ಲ ಸ್ವಾಮಿ, ೪೨೫ ರೂ. ಕೆಲವು ಕಡೆ, ೪೫೦ ರೂಪಾಯಿ ಕೆಲವು ಕಡೆ ಕೊಡುತ್ತಿದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ.— ೮ ಪರ್ಸೆಂಟ್ ಎಂದರೆ ೨೮ ರೂಪಾಯಿ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವತ್ತು ೮ ಪರ್ಸೆಂಟ್‌ನಂತೆ ಇಟ್ಟುಕೊಂಡರೂ ೪೦೦ ರೂಪಾಯಿಗೇ ೩೨ ರೂಪಾಯಿ ಆಗುತ್ತದೆ, ಆದ್ದರಿಂದ ಇದು ಜಾಸ್ತಿ ಆಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ.— ಅದನ್ನು ಮತ್ತೆ ರಿವೈಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಂತಹದ್ದರಿಂದಲೇ ನಾವು ಇದನ್ನು ರೈತ ವಿರೋಧಿ ಸರ್ಕಾರ ಎಂದು ಹೇಳುವುದು. ಇವತ್ತು ಲಕ್ಷಾಂತರ ಜನರು ಬೀದಿ ಪಾಲಾಗುತ್ತಾಗ ಎಂದರೂ ಇದಕ್ಕೆ ತಾವು ಕನ್‌ಸೆಷನ್ ಕೊಡುವುದಕ್ಕಾಗುವುದಿಲ್ಲ. ಬೇರೆ ಎಲ್ಲದಕ್ಕೂ ತಾವು ಕನ್‌ಸೆಷನ್ ತೋರಿಸುತ್ತಾ ಬಂದಿದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ.— ಇವತ್ತು ಕಬ್ಬಿಗೆ ಬೆಲೆ ಫಿಕ್ಸ್ ಮಾಡುವವರು ನಾವು ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವತ್ತು ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಟನ್‌ಗೆ ೪೨೫ ರೂಪಾಯಿ. ಸಂಕೇಶ್ವರದಲ್ಲಿ ೪೫೦ ರೂಪಾಯಿ, ಶಿವಮೊಗ್ಗದಲ್ಲಿ ೩೩೫ ರೂಪಾಯಿ ಟನ್‌ಗೆ ಕೊಡುತ್ತಿದ್ದಾರೆ. ಇವತ್ತು ಎಲ್ಲಾ ಕಡೆ ಒಂದೇ ರೀತಿಯಲ್ಲಿ ದರ ನಿಗದಿ ಮಾಡಿ ಸರ್ಕಾರ ಕೊಡಬೇಕಾಗುತ್ತದೆಯಲ್ಲವೇ ? ಎರಡನೆಯದಾಗಿ ಈಗಾಗಲೇ ಕಬ್ಬು ಬೆಳೆದಂತಹ ರೈತ ಜೀವನ

೧–೩೦ ಪಿ.ಎಂ.

ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಬ್ಬಿನ ಮೇಲಿನ ಟ್ಯಾಕ್ಸನ್ನು ಕಡಿಮೆ ಮಾಡಿ, ತೆರಿಗೆಯನ್ನು ಜಾಸ್ತಿ ಹಾಕಬೇಡಿಯೆಂದು ಎಂದರೆ, ಕೇಂದ್ರ ಸರ್ಕಾರಕ್ಕೆ ಹೋಗಿ ಕೇಳಿ ಅಂದರೇನು ? ಈ ಬಗ್ಗೆ ಏತಕ್ಕೆ ಬೇರೆ ಶಾಸಕರು ಸುಮ್ಮನೆ ಕುಳಿತುಕೊಂಡಿದ್ದಾರೋ ಗೊತ್ತಿಲ್ಲ. ರೈತರ ವಿಚಾರ ಬಂದಾಗ ಏತಕ್ಕೆ ಈ ತರಹ ಮಾಡುತ್ತಾರೆಂಬುದು ನನಗೆ ಅರ್ಥವಾಗುವುದಿಲ್ಲ. ರೈತನನ್ನು ಮುಗಿಸಬೇಕೆಂದು ತೀರ್ಮಾನ ಮಾಡಿದ್ದೀರಾ ? ಇದು ರೈತ ವಿರೋಧಿ ಸರ್ಕಾರ ಅಲ್ಲವೇ ? ಮತ್ತೆ ನಾವು ಇನ್ನೇನು ಹೇಳಬೇಕು.

(ಗೊಂದಲ)

ಅಧ್ಯಕ್ಷರು.— ಮಾನ್ಯ ಅರ್ಥ ಮಂತ್ರಿಗಳು ಏನೋ ಹೇಳುತ್ತಿದ್ದಾರೆ. ಅವರು ಹೇಳುವುದನ್ನು ತಾವು ಕೇಳಿ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಕ್ಲಾರಿಫಿಕೇಷನ್ cannot become argumentative. ಈಗ ನೀವೇನು ಪ್ರಶ್ನೆ ಕೇಳಿದ್ದೀರಿ, ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ ಅವರ ಉತ್ತರವನ್ನು ಈಗ ಹೇಳುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಬ್ಬಿಗೆ ಒಂದೊಂದು ಫ್ಯಾಕ್ಟರಿಯಲ್ಲಿ ಒಂದೊಂದು ರೇಟ್ ಕೊಡುತ್ತಿದ್ದಾರೆ. ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ರೀತಿಯ ರೇಟ್ ಕೊಡಿಸುವ ಜವಾಬ್ದಾರಿ ಸರ್ಕಾರಕ್ಕಿದೆ.

ಶ್ರೀ ಎಂ. ರಾಜಶೇಖರಮೂರ್ತಿ.— ಪರ್ಚೇಸ್ ಟ್ಯಾಕ್ಸನ್ನು ರೈತರು ಕೊಡುವುದಿಲ್ಲ. ಪರ್ಚೇಸ್ ಟ್ಯಾಕ್ಸನ್ನು ಫ್ಯಾಕ್ಟರಿಯವರು ಕೊಡುತ್ತಾರೆ. ಅದು ರೈತರ ಮೇಲೆ ಬೀಳುವುದಿಲ್ಲ. ದೊಡ್ಡ ದೊಡ್ಡ ಜಲಾಶಯಗಳನ್ನು ನಾವು ತೆಗೆದುಕೊಂಡಿದ್ದೇವೆ. ರೈತರಿಗೆ ರಸ್ತೆಗಳು ಆಗಬೇಕಾಗಿದೆ ರೈತರಿಗೆ ಇನ್ನೂ ಅನೇಕ ಸೌಲಭ್ಯಗಳನ್ನು ಮಾಡುತ್ತಿದ್ದೇವೆ. ಇದಕ್ಕೆಲ್ಲಾ ದುಬಾರಿ ಖರ್ಚು ಬರುತ್ತದೆ. ಆದ್ದರಿಂದ ಸರ್ಕಾರ ಟ್ಯಾಕ್ಸ್ ಹಾಕಿದೆ. ಟ್ಯಾಕ್ಸ್ ಹಾಕದೆ ಯಾರೂ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಎಲ್ಲ ಕಡೆ ರೇಟ್ ಒಂದೇ ರೀತಿ ಇರುವುದಿಲ್ಲ. ಸ್ಟ್ಯಾಟ್ಯುಟರಿ ರೇಟನ್ನು ಫಿಕ್ಸ್ ಮಾಡುವವರು ಕೇಂದ್ರ ಸರ್ಕಾರದವರು. ರಿಕವರಿ ಬೇಸಿಸ್ ಮೇಲೆ ಮತ್ತೆ ಅದಕ್ಕೆ ಸ್ವಲ್ಪ ಆ್ಯಡ್ ಮಾಡಿಕೊಡತಕ್ಕ ಪದ್ಧತಿ ನಮ್ಮಲ್ಲಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಲಪ್ರಭಾ ಏರಿಯಾದಲ್ಲಿ ಒಂದು ಟನ್ ಕಬ್ಬಿಗೆ ೪೨೫ ಇದೆ. ಸಂಕೇಶ್ವರದಲ್ಲಿ ೪೫೦ ಇದೆ. ಮತ್ತೊಂದು ಕಡೆ ೪೦೦ ರೂಪಾಯಿ ಇದೆ. ನಮಗೆ ೩೩೦ ಕೊಡುತ್ತಾರೆ.

ಶ್ರೀ ಎಂ. ರಾಜಶೇಖರಮೂರ್ತಿ.— ಅದು ನನಗೆ ಗೊತ್ತಿದೆ. ಅದು ರಿಕವರಿ ಬೇಸಿಸ್ ಮೇಲೆ ಇದೆ. ನಿಮಗೆ ಅದರ ಬಗ್ಗೆ ಹೆಚ್ಚಿಗೆ ಅರ್ಥವಾಗುತ್ತಿಲ್ಲ.

ಶ್ರೀ ಕರಿಯಣ್ಣ.— ರಿಕವರಿ ಬೇಸಿಸ್ ಮೇಲೆ ರೇಟ್ ಫಿಕ್ಸ್ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಅದಕ್ಕೆ ಡಿಮಾಂಡ್ ಮಾಡಿದರೆ ಹೇಗೆ ?

ಶ್ರೀ ಎಂ. ರಾಜಶೇಖರಮೂರ್ತಿ.— ಕೇಂದ್ರ ಸರ್ಕಾರ ಅದಕ್ಕೊಂದು ಕಮಿಟಿ ಮಾಡಿದೆ. ಸ್ಟ್ಯಾಟ್ಯುಟರಿ ಮಿನಿಮಮ್ ಪ್ರೈಸ್ ಇಷ್ಟಿರಬೇಕೆಂದು ಫಿಕ್ಸ್ ಮಾಡುತ್ತಾರೆ. ಯಾವುದೋ ಒಂದು ರಿಕವರಿ ರೇಟ್ ಇಟ್ಟುಕೊಂಡು ಫಿಕ್ಸ್ ಮಾಡುತ್ತಾರೆ. ರಿಕವರಿ ಜಾಸ್ತಿಯಾದರೆ ಇಷ್ಟು ಪರ್ಸೆಂಟೇಜ್ ಎಂದು ಅದು ಜಾಸ್ತಿಯಾಗುತ್ತದೆ. ಅದಕ್ಕೆ ನಾವು ದರವನ್ನು ಆ್ಯಡ್ ಮಾಡಿಕೊಂಡು ಹೋಗುತ್ತೇವೆ. ಪಾಂಡವಪುರದಲ್ಲಿ ೧೧½ ಪರ್ಸೆಂಟ್ ಇದೆ. ಮಂಡ್ಯದ್ದು ೧೦½ ಪರ್ಸೆಂಟ್ ಇದೆ. ಸಂಕೇಶ್ವರದ್ದು ೧೨ ಪರ್ಸೆಂಟ್ ಬರುತ್ತದೆ. ಉತ್ತರ ಪ್ರದೇಶದಲ್ಲಿ ೭, ೮, ೮½ ಪರ್ಸೆಂಟ್ ಬರುತ್ತದೆ. ಬಿಹಾರದ್ದು ೯ ಪರ್ಸೆಂಟ್ ಬರುತ್ತದೆ. ಸ್ಟ್ಯಾಟ್ಯುಟರಿ ಮಿನಿಮಮ್ ರೇಟ್ ಫಿಕ್ಸ್ ಮಾಡುತ್ತಾರೆ. ರಿಕವರಿ ಬೇಸಿಸ್ ಮೇಲೆ ರೇಟ್ ಫಿಕ್ಸ್ ಮಾಡುತ್ತಾ ಬೇರೆ ರಾಜ್ಯಗಳಿಗೆ ಪ್ರೈಸ್ ಕಮ್ಯುನಿಕೇಟ್ ಆಗದೆ ಅವರ ರಿಕವರಿಗೆ ಅನುಗುಣವಾಗಿ ಪ್ರೈಸನ್ನು ಆ್ಯಡ್ ಮಾಡಿಕೊಂಡು ಅವರು ರೇಟನ್ನು ಫಿಕ್ಸ್ ಮಾಡುತ್ತಾರೆ.

ಪರ್ಚೇಸ್ ಟ್ಯಾಕ್ಸನ್ನು ರೈತರು ಕೊಡುವುದಿಲ್ಲ. ಪರ್ಚೇಸ್ ಟ್ಯಾಕ್ಸನ್ನು ಫ್ಯಾಕ್ಟರಿಯವರು ಕೊಡುತ್ತಾರೆ.

ಶ್ರೀ ಬಾಬಗೌಡ ಆರ್. ಪಾಟೀಲ್.— ಫ್ಯಾಕ್ಟರಿ ಮಾಲೀಕರು ಯಾರು ?

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.— ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಡಾಕ್ಟರ್ ಅಂಬೇಡ್ಕರ್ ಭವನವನ್ನು ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡು ಸೈಟು ಮಂಜೂರು ಮಾಡಿ ಫೌಂಡೇಶನ್ ಕೂಡ ಹಾಕಿದ್ದಾರೆ. ಈ ಸಾರಿಯ ಬಜೆಟ್‌ನಲ್ಲಿ ಅಂಬೇಡ್ಕರ್ ಭವನದ ಬಗ್ಗೆ ಏನನ್ನೂ ಹೇಳಿಲ್ಲ. ಭವನವನ್ನು ಕಟ್ಟುವುದಕ್ಕೆ ಹಣವನ್ನು ಒದಗಿಸಬೇಕಾಗಿದೆ. ಆದರೆ ಹಣ ಪ್ರೊವೈಡ್ ಮಾಡಲಿಲ್ಲ. ದಯಮಾಡಿ ಅದರ ಬಗ್ಗೆ ಹೇಳಬೇಕು.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಅಧ್ಯಕ್ಷರೆ, ಕಬ್ಬಿನ ಪರ್ಚೇಸ್‌ಟ್ಯಾಕ್ಸ್ ಬಗ್ಗೆ ಸದಸ್ಯರು ಮಾತನಾಡುತ್ತಿದ್ದರು. ಕಬ್ಬಿನ ಧಾರಣೆಯ ಬಗ್ಗೆ ಮಾತು ಕಡಿಮೆಯಾಯಿತು. ಮಾನ್ಯ ಅರ್ಥಸಚಿವರಿಗೆ ಗೊತ್ತಿಲ್ಲ, ಸುಮಾರು ನಾಲ್ಕೈದು ವರ್ಷಗಳಿಂದ ಇಳುವರಿ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಕಬ್ಬಿನ ಬೆಲೆ ನಿಗದಿಯಾಗುತ್ತಿಲ್ಲ.

ಅದನ್ನು ತಾವು ಸ್ವಲ್ಪ ಪರೀಕ್ಷೆ ಮಾಡಿ ನೋಡಬೇಕು. ಇದು ಯಾವ ರೀತಿ ಆಗುತ್ತಿದೆ ಎಂದರೆ ಕೇಂದ್ರ ಸರ್ಕಾರದವರು ಸ್ಟ್ಯಾಟ್ಯುಟರಿ ಪ್ರೈಸ್ ಫಿಕ್ಸ್‌ನ್ನು ೮.೫ ರಿಕವರಿ ಆಧಾರದ ಮೇಲೆ ಮಾಡುತ್ತಾರೆ. ಆದರೆ ನಮ್ಮ ಸರ್ಕಾರ ಐದು ವರ್ಷದಿಂದ ಇದನ್ನು ಫಾಲೋ ಮಾಡುತ್ತಿಲ್ಲ. ಸಂಕೇಶ್ವರದಲ್ಲಿ ರಿಕವರಿ ಎಷ್ಟು ಇದೆ, ಮಂಡ್ಯದಲ್ಲಿ ರಿಕವರಿ ಎಷ್ಟು ಇದೆ ಅಥವಾ ಶಿವಮೊಗ್ಗ ಜಿಲ್ಲೆಯಲ್ಲಿ ರಿಕವರಿ ಎಷ್ಟು ಇದೆ ಎಂಬುದರ ಆಧಾರದ ಮೇಲೆ ಬೆಲೆ ನಿಗದಿ ಮಾಡಿಲ್ಲ. ಮಂಡ್ಯದಲ್ಲಿ ಜೂನ್ ಪ್ಲಾಂಟಿಂಗ್ ಏನಿದೆ ಅದರ ಪ್ರಕಾರ ಮಂಡ್ಯದವರನ್ನು ಮಾತ್ರ ಕರೆದು ಮಾಡಿರುವುದು. ಯಾವುದೋ ಚೌಕಾಸಿ ವ್ಯಾಪಾರ ಮಾಡಿ ಬೆಲೆ ನಿಗದಿ ಮಾಡಿ, ಅದನ್ನು ಇಡೀ ರಾಜ್ಯಕ್ಕೇ ಅನ್ವಯಿಸುವುದು ಹೀಗೆ ಕಳೆದ ಐದು ವರ್ಷಗಳಿಂದ ನಡೆಯುತ್ತಿದೆ. ಈ ವರ್ಷವಾದರೂ ಎಲ್ಲಾ ಜಿಲ್ಲೆಗಳ ಕಬ್ಬು ಬೆಳೆಗಾರರನ್ನು ಆಹ್ವಾನಮಾಡಿ ಅವರ ಜೊತೆ ಚರ್ಚೆ ಮಾಡಿ ರಿಕವರಿ ಆಧಾರದಮೇಲೆ ವೈಜ್ಞಾನಿಕವಾಗಿ ಕಬ್ಬಿನ ಬೆಲೆ ನಿಗದಿ ಮಾಡುವುದು ಸೂಕ್ತ. ಈ ರೀತಿ ಮಾಡೋಣವೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಎರಡನೇಯದು, ರೈತರ ಸಾಲದ ಬಗ್ಗೆ ಮಾತು ಪ್ರಾರಂಭವಾದ ಕೂಡಲೇ ವಿಷಯ ಪಲ್ಲಟ ಮಾಡುವಂಥ ಪ್ರಯತ್ನ ನಡೆಯುತ್ತದೆ. ನಾನು ಚುನಾವಣೆಯಲ್ಲಿ ಹೇಳಲಿಲ್ಲ. ಹಾಗೆ ಹೇಳಿ ನಾವು ಅಧಿಕಾರಕ್ಕೆ ಬಂದಿಲ್ಲ. ಹಾಗೆ ಹೇಳಿ ಬಂದವರು ಅವರು ಎಂದು ಹೇಳಿ ಈ ಆರೋಪ, ಪ್ರತ್ಯಾರೋಪ ನಮಗೆ ಬೇಕಾಗಿಲ್ಲ. ರೈತರ ಸಾಲದ ಬಗ್ಗೆ ನಿಮ್ಮ ನಿಲುವು ಏನು? ಮತ್ತು ವಸೂಲಾತಿ ಬಗ್ಗೆ ನಿಮ್ಮ ನಿಲುವು ಏನು ? ಈ ಸದನ ಪ್ರಾರಂಭವಾದಾಗಿನಿಂದ ನಾನು ಮಾತನಾಡುತ್ತಿದ್ದೇನೆ. ನಿಮ್ಮ ಅಧಿಕಾರಿಗಳು ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನ ರೂಲ್ ೧೧೨ರ ಪ್ರಕಾರ ಯಾವರೀತಿ ಫಾರಮ್ ಇರಬೇಕೋ ಅದುಬಿಟ್ಟು ಬೇರೆ ಫಾರಮ್‌ನ್ನು ಅಚ್ಚುಮಾಡಿಕೊಂಡು ಕಾನೂನಿಗೆ ವಿರುದ್ಧವಾಗಿ ವಸೂಲು ಮಾಡುತ್ತಿದ್ದಾರೆ ಸಂಬಂಧ ವಿಲ್ಲದೆ ಹೀಗೆ ವಸೂಲು ಮಾಡುವುದರ ಬಗ್ಗೆ ನಿಮ್ಮ ನಿಲುವು ಏನು? ಇದನ್ನು ತಾತ್ಕಾಲಿಕವಾಗಿ ನಿಲ್ಲಿಸುತ್ತೀರಾ? ಆ ಮೇಲೆ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣವೆಂದು ಹೇಳಿದ್ದೀರಿ. ಶ್ರೀ ಬಂಗಾರಪ್ಪನವರು ಸ್ವಲ್ಪ ಕೇಳಿಸಿಕೊಳ್ಳಬೇಕು. ನಾನು ಅವರ ಗಮನವನ್ನೂ ಸಹ ಸೆಳೆಯುತ್ತಿದ್ದೇನೆ. ಅವರು ಸಹ ಬಹಳ ವಿವರವಾಗಿ ಚರ್ಚೆ ಮಾಡೋಣ ಎನ್ನುವುದರಲ್ಲಿ ವಿಶೇಷ ಆಸಕ್ತಿ ತೋರಿಸಿದವರು. ನಂತರ ಸಾಲ ರದ್ದು ಮಾಡುವುದರ ಬಗ್ಗೆ ವಿಚಾರ ಮಾಡೋಣ. ಈಗ ನಿಮ್ಮ ನಿಲುವನ್ನು ಹೇಳಬೇಕು. ಈ ನಡುವೆ ಮನೆ ಮನೆಗಳಿಗೆ ನುಗ್ಗಿ ರೈತರನ್ನು ಅಪಮಾನ ಮಾಡುತ್ತಿದ್ದಾರೆ. ಇದನ್ನು ತಾತ್ಕಾಲಿಕವಾಗಿ ನಿಲ್ಲಿಸುತ್ತೀರಾ ಎಂದು ಸಭಾಧ್ಯಕ್ಷರ ಮೂಲಕ ನಾನು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರ ಅನೇಕ ಸಲ ಚರ್ಚೆ ಮಾಡಿದೆ. ತಾವು ಈಗ ಹೇಳಿದಿರಿ ಇದಕ್ಕಾಗಿ ಪ್ರತ್ಯೇಕವಾಗಿ ಒಂದು ದಿವಸ ಚರ್ಚೆ ಮಾಡೋಣ. ಎಂದು. ಆ ಕಾಲದಲ್ಲಿ ಮಾನ್ಯ ಮಂತ್ರಿಗಳು ಇರುತ್ತಾರೆ. ವಿಫಲವಾದ ಚರ್ಚೆಯ ನಂತರ ಅವರು ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ —೨ನೇ ತಾರೀಖಿಗೆ ನಾವು ಮನೆಗಳಿಗೆ ಹೋಗುತ್ತೇವೆ. ತಾರೀಖನ್ನು ಮೊದಲೇ ನಿಗದಿ ಮಾಡಿ. ಈಗಲೇ ತಾರೀಖನ್ನು ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡಿ. ೨ನೇ ತಾರೀಖಿಗೆ ಸದನ ಮುಗಿಯುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ತಮ್ಮ ಭಾಷಣದಲ್ಲಿ ಈ ವಿದ್ಯಾರ್ಥಿಗಳ ಬೋರ್ಡಿಂಗ್ ಚಾರ್ಜಸ್ ಎನ್‌ಹಾನ್ಸ್ ಮಾಡುವುದಾಗಿ ಹೇಳಿದಿರಿ. ನಾನು ಹಿಂದೆ ಈ ಸದನದಲ್ಲಿ ಅಂದಿನ ಮುಖ್ಯ ಮಂತ್ರಿಗಳನ್ನು ಸ್ಪಷ್ಟವಾಗಿ ಕೇಳಿರತಕ್ಕಂಥಾದ್ದು ಏನು ಎಂದರೆ ಆಶ್ರಮ ಸ್ಕೂಲುಗಳಲ್ಲಿ ೭೫ ರಿಂದ ೧೦೦ ರೂ. ಗಳಿಗೆ ಹೆಚ್ಚು ಮಾಡಿದ್ದಾರೆ. ಇದನ್ನು ಕನಿಷ್ಟ ಪಕ್ಷ ೧೫೦ ರೂ.ಗಳಿಗೆ ಹೆಚ್ಚು ಮಾಡಿ ಎಂದು ಕೇಳಿದೆ. ಮತ್ತೆ ೧೦೦ ರಿಂದ ೨೦೦, ೧೫೦ ರಿಂದ ೩೦೦ ಮಾಡಬೇಕು ಎನ್ನತಕ್ಕದ್ದನ್ನು ಸಹ ಪ್ರಸ್ತಾಪ ಮಾಡಿದ್ದೆ. ಕಾರಣ ಏನೆಂದರೆ ಈ ಸರ್ಕಾರಿ ನೌಕರರಿಗೆ ೧೯೮೩–೮೪ ರಲ್ಲಿ ೪೨೪ ಕೋಟಿ ರೂ.ಗಳನ್ನು ಅವರ ಸಂಬಳಕ್ಕಾಗಿ ಕೊಟ್ಟಿದ್ದು ಇದೆ. ಇವತ್ತು ೧೨೫೧ ಕೋಟಿ ರೂಪಾಯಿಗಳನ್ನು ಪಗಾರಕ್ಕಾಗಿ ಕೊಡುತ್ತಿದ್ದಾರೆ. ಇದು ೧:೩ ಆಯಿತು. ಅದೇ ರೀತಿ ಈ ವಿದ್ಯಾರ್ಥಿಗಳ ಊಟಕ್ಕೆ ನೀವು ಎನ್‌ಹಾನ್ಸ್ ಮಾಡಿದ ಪ್ರಕಾರ ಒಂದು ದಿವಸದ ಪ್ರತಿ ಊಟಕ್ಕೆ ಒಂದು ರೂಪಾಯಿ ೭೫ ಪೈಸೆ ಬೀಳುತ್ತದೆ. ನಾವು ಮೊಗಸಾಲೆಯಲ್ಲಿ ಕುಡಿಯುವ ಒಂದು ಕಪ್ ಟೀಗೆ ೨ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಇವರ ಪ್ರತಿ ಊಟಕ್ಕೆ ಎಷ್ಟು ಕೊಡುತ್ತೇವೆ ಎಂದರೆ ೧ ರೂಪಾಯಿ ೭೫ ಪೈಸೆ ಮಾತ್ರ. ದಯವಿಟ್ಟು ಇದನ್ನು ಕನಿಷ್ಟ ಪಕ್ಷ ಮೂರು ಪಟ್ಟು ಹೆಚ್ಚು ಮಾಡಬೇಕು ಅಥವಾ ಇದನ್ನು ಇಮ್ಮಡಿಯಾದರೂ ಮಾಡಿ ಅಂದರೆ ಒಂದು ಊಟಕ್ಕೆ ೩ ರೂಪಾಯಿ ಆದರೂ ಕೊಡಬೇಕು. ಇಲ್ಲದೇ ಹೋದರೆ ಬಹಳ ಅನ್ಯಾಯವಾಗುತ್ತದೆ. ದಯಮಾಡಿ ಈ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಅಂಬೇಡ್ಕರ್ ಭವನ ಕಟ್ಟಲು, ಏಪ್ರಿಲ್ ೧೪ರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಫೌಂಡೇಷನ್ ಸ್ಟೋನ್ ಹಾಕಿದರು. ಅಂದು ಮಾನ್ಯ ಬಿ. ರಾಚಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಆದರೆ, ಅಲ್ಲಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ, ಪ್ರಚಾರ ಮಾತ್ರ ಆಯಿತು. ಇದರ ಬಗ್ಗೆ ಈ ಸಲದ ಬಜೆಟ್‌ನಲ್ಲಿ ಏನೂ ಇಲ್ಲ. ಆದ್ದರಿಂದ ಡಾ. ಅಂಬೇಡ್ಕರ್ ಕಲ್ಯಾಣ ಭವನದ ಬಗ್ಗೆ, ದಯಮಾಡಿ ಏನು ನಿಲುವು ತೆಗೆದುಕೊಳ್ಳುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಮಾನ್ಯ ಸದಸ್ಯರು, ಬೋರ್ಡಿಂಗ್ ಚಾರ್ಜ್ ಜಾಸ್ತಿ ಮಾಡುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎಸ್.ಸಿ. ಮತ್ತು ಎಸ್.ಟಿ. ಹಾಸ್ಟಲುಗಳು ಮತ್ತು ಬ್ಯಾಕ್‌ವರ್ಡ್‌ಕ್ಲಾಸ್‌ಹಾಸ್ಟಲು ಬೋರ್ಡಿಂಗ್ ಚಾರ್ಜ್ ಈಗ ಹನ್ನೆರಡೂವರೆ ಕೋಟಿ ಎಕ್ಸ್‌ಪೆಂಡೀಚರ್ ಇತ್ತು. ಇದನ್ನು ಈಗ ಇನ್ನೂ ೫೦ ಪರ್ಸೆಂಟ್ ಜಾಸ್ತಿ ಮಾಡಬೇಕೆಂದು ಇದ್ದೇವೆ, ಹೊಸದಾಗಿ ಆರೂಕಾಲು ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚಾಗುತ್ತಿವೆ. ನಾವು ಈ ರೀತಿ ೫೦ ಪರ್ಸೆಂಟ್ ಜಾಸ್ತಿ ಮಾಡುವುದರಿಂದ, ಮತ್ತೆ ನಮಗೆ ಆರೂಕಾಲು ಕೋಟಿ ಖರ್ಚಾಗುತ್ತಿದೆ. ನಾನು ಇದನ್ನು ಒಂದೇಸಾರಿ ಜಾಸ್ತಿ ಮಾಡಲು ಒಪ್ಪಿದ್ದೇನೆ. ಇದನ್ನು ಡಬಲ್ ಮಾಡಬೇಕೆಂದರೆ, ಹನ್ನೆರಡೂವರೆ ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಇದು ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಈಗಾಗಲೇ ಆರೂಕಾಲು ಕೋಟಿ ರೂಪಾಯಿಗಳ ಕಮಿಟ್‌ಮೆಂಟ್ ಮಾಡಿಕೊಂಡಿದ್ದೇವೆ. ಸಧ್ಯಕ್ಕೆ ಇಷ್ಟು ಸಾಕಾಗುತ್ತದೆ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ನಮಗೆ ಸ್ಯಾಟಿಸ್‌ಫೈ ಆಗುವುದಿಲ್ಲ, ಇಲ್ಲಿ ನಾವು ಶಾಸಕರಾಗಿ ಪ್ರಶ್ನೆ ಕೇಳುತ್ತೇವೆ, ತಾವು ಉತ್ತರ ಕೊಡುತ್ತೀರಿ, ಅನಂತರ ಮನೆಗೂ ಹೋಗುತ್ತೇವೆ. ನಾನು ಈ ವಿಷಯವನ್ನು ವಿರೋಧಪಕ್ಷದಲ್ಲಿದ್ದಾಗಲೂ ಕೂಡ ಹೇಳುತ್ತಿದ್ದೆ. ಬಡವರಿಗೆ ಈ ಸೀರೆ, ಪಂಚೆ ಕೊಡುತ್ತೀರಿ, ರೈತರಿಗೆ ಸಬ್ಸಿಡಿ ಕೊಡುತ್ತೀರಿ, ಆದರೆ ಇಲ್ಲಿ ಹಾಸ್ಟೆಲ್‌ನಲ್ಲಿ ವಾಸ ಮಾಡುವುದಕ್ಕೆ ೩ ರೂಪಾಯಿ ಕೊಡುವುದಕ್ಕೆ ಇಲ್ಲವೆಂದು ಹೇಳುವುದು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ, ತಮ್ಮಿಂದ ಸ್ಪಷ್ಟ ಉತ್ತರವನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ತಾವು ಎಸ್‌ಸಿ ಎಸ್‌ಟಿ ಮಕ್ಕಳಿಗೆ ಊಟಕ್ಕೆ ಹೆಚ್ಚು ಹಣ ಕೊಡುವುದಕ್ಕಾಗುವುದಿಲ್ಲವೇ ಅಥವಾ ಅವರಿಗೆ ಕೊಡತಕ್ಕ ಅವಶ್ಯಕತೆ ಇಲ್ಲವೇ? ಇವತ್ತು ೧೯ ಜನ ಆರಿಸಿ ಬಂದು ಶಾಸನ ಸಭೆಯ ಸದಸ್ಯರಾಗಿದ್ದೇವೆ. ಹರಿಜನ ಗಿರಿಜನರ ಮತ ಪಡೆದು ಇವತ್ತು ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕೊಡುವುದಕ್ಕೆ ಹಣ ಇಲ್ಲ...

ಶ್ರೀ ಎಂ. ರಾಜಶೇಖರಮೂರ್ತಿ.— ಈ ಹಿಂದೆ ಆರು ವರ್ಷಗಳ ಕಾಲ ಜನತಾ ಸರ್ಕಾರ ಇತ್ತು. ಆ ಸರ್ಕಾರದಲ್ಲಿ ಏನೂ ಮಾಡುವುದಕ್ಕಾಗಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಪ್ರಪ್ರಥಮವಾಗಿ ೫೦ ಪರ್ಸೆಂಟ್ ಜಾಸ್ತಿ ಮಾಡಿದ್ದೇವೆ. ಈ ರೀತಿಯಾಗಿ ಜಾಸ್ತಿ ಮಾಡಿದುದರ ಬಗ್ಗೆ ಒಂದು ಒಳ್ಳೆಯ ಮಾತು ಇಲ್ಲ, ಜಾಸ್ತಿ ಮಾಡಲಿಲ್ಲವೆಂದು ಮಾತ್ರ ಆಕ್ಷೇಪಣೆ ಮಾಡುತ್ತಿದ್ದಾರೆ.

ಶ್ರೀ ಎಂ.ಪಿ. ವೆಂಕಟೇಶ್. — ಮಾನ್ಯ ಅಧ್ಯಕ್ಷರೇ......

(ಗೊಂದಲ)

ಅಧ್ಯಕ್ಷರು.— ಮಾನ್ಯ ವೆಂಕಟೇಶ್ ಅವರೇ, ನೀವು ಹೊಸದಾಗಿ ಆರಿಸಿ ಬಂದಿದ್ದೀರಿ. ನೀವು ಹೊಸ ಸದಸ್ಯರು. ಮಾನ್ಯ ಅರ್ಥಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನೀವು, ನಿಮ್ಮ ಚರ್ಚೆಯನ್ನು ಮುಂದುವರಿಸುತ್ತಲೇ ಇದ್ದೀರಿ. ಇಲ್ಲಿ ನಿಮ್ಮ ಕಳಕಳಿಯ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಹಣಕಾಸಿನ ಮಂತ್ರಿಗಳು ಮಾತನಾಡುವಾಗ ಕಳೆದ ೬–೭ ವರ್ಷಗಳಲ್ಲಿ ಹಿಂದಿನ ಸರ್ಕಾರ, ಈ ಹಣವನ್ನು ಹೆಚ್ಚು ಮಾಡಿಲ್ಲವೆಂದು ಹೇಳಿದರು. ಹಿಂದಿನ ಸರ್ಕಾರ ಏನೂ ಮಾಡಿಲ್ಲವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಚಾರ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ಸಾರಿ ಹೆಚ್ಚು ಮಾಡಿದ್ದಾರೆ. ಮಾನ್ಯ ಖರ್ಗೆಯವರಿಗೂ ಇದು ಗೊತ್ತಿದೆ. ಅವರೂ ಕೂಡ ಮಾನ್ಯ ಹೆಗ್ಗಡೆಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಇದು ಮಾನ್ಯ ಬಸವಲಿಂಗಪ್ಪನವರಿಗೂ ಸಹ ಗೊತ್ತಿದೆ. ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ. ಕೇಂದ್ರ ಸರ್ಕಾರದಿಂದಲೂ ಸಹ ಇದಕ್ಕೆ ಸ್ವಲ್ಪ ಹಣ ಬರುತ್ತದೆ. ಸಮಾಜ ಕಲ್ಯಾಣ ಇಲಾಖೆ ಮೇಲಿನ ಚರ್ಚೆ ಸಂದರ್ಭದಲ್ಲಿ ನಾನು ವಿವರವಾಗಿ ಹೇಳುತ್ತೇನೆ. ವಿದ್ಯಾರ್ಥಿಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ದಯಮಾಡಿ ತಾವು ಇದನ್ನು ಮರುಪರಿಶೀಲನೆ ಮಾಡಬೇಕು. ಈಗ ಹೆಚ್ಚು ಕೊಟ್ಟಿರತಕ್ಕ ಹಣವನ್ನು ನಾನು ಸ್ವಾಗತ ಮಾಡುತ್ತೇನೆ. ದಯಮಾಡಿ ಇದನ್ನು ಇನ್ನೂ ಹೆಚ್ಚು ಮಾಡಲೇಬೇಕೆಂದು ಆಗ್ರಹ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಒಂದು ವಿಚಾರ ಕ್ಲಾರಿಫೈ ಮಾಡುತ್ತೇನೆ. ಅವರ ಸರಕಾರ ಇದ್ದಾಗ ೬೦ ರೂಪಾಯಿ ಇದ್ದುದನ್ನು ೭೫ ರೂಪಾಯಿ ಮಾಡಿದರು, ೧೫ ರೂಪಾಯಿ ಮಾತ್ರ ಎನ್‌ಹ್ಯಾನ್ಸ್ ಮಾಡಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಇಲ್ಲ ೫೦ ರೂಪಾಯಿ ಇದ್ದುದನ್ನು ೭೫ ರೂಪಾಯಿ ಮಾಡಿದೆವು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮೊದಲು ೬೦ ರೂಪಾಯಿ ಕೊಡುತ್ತಿದ್ದರು. ಅದನ್ನು ೭೫ ರೂಪಾಯಿಗಳಿಗೆ ಹೆಚ್ಚು ಮಾಡಿದರು. ಇದು ಆದ ಮೇಲೆ ನಾಲ್ಕು ವರ್ಷ ಎನ್‌ಹ್ಯಾನ್ಸ್ ಮಾಡಲಿಲ್ಲ. ಆಮೇಲೆ ಬೊಮ್ಮಾಯಿಯವರು ಬಂದ ಮೇಲೆ ಅವರು ೭೫ ರೂಪಾಯಿ ಇದ್ದುದನ್ನು ೧೦೦ ರೂಪಾಯಿ ಮಾಡುತ್ತೇನೆ, ೧೦೦ ರೂಪಾಯಿ ಇದ್ದುದನ್ನು ೧೫೦ ರೂಪಾಯಿ ಮಾಡುತ್ತೇನೆ, ೧೫೦ ರೂಪಾಯಿ ಇರುವುದನ್ನು ೨೦೦ ರೂಪಾಯಿ ಮಾಡುತ್ತೇನೆಂದು ಅನೌನ್ಸ್ ಮಾಡಿದರು. ಆದರೆ ಅವರು ಅದನ್ನು ಜಾರಿಗೆ ಕೊಡಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಸರ್ಕಾರವೇ ಹೊರಟು ಹೋಯಿತಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಎಷ್ಟು ದಿವಸ ಬೇಕು ಜಾರಿಗೆ ಕೊಡುವುದಕ್ಕೆ ಹತ್ತು ವರ್ಷ ಬೇಕಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಾವು ಏಪ್ರಿಲ್‌ನಲ್ಲಿ ಬಜೆಟ್ ಇಟ್ಟಿದ್ದೆವು. ಮೇ–ಜೂನ್‌ನಲ್ಲಿ ವಿದ್ಯಾರ್ಥಿಗಳಿಗೆ ರಜಾ ಬಂತು. ಆಗ ನಾನೇ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿದ್ದೆ. ಆಗ ನಮ್ಮ ಸರಕಾರವನ್ನು ಡಿಸ್‌ಮಿಸ್ ಮಾಡಿಬಿಟ್ಟರಲ್ಲ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ — ನಾವೆಲ್ಲಾ ಹೇಳಿದ್ದು ಟೀಕೆ ಮಾಡುವುದಕ್ಕೆ ಅಲ್ಲ. ಈಗೇನು ವಿಚಾರ ಎಂದರೆ ಅವರು ಮಾಡುತ್ತೇವೆ ಎಂದು ಹೇಳಿದ್ದನ್ನು ತೆಗೆದುಕೊಂಡು ಇಷ್ಟು ಜಾಸ್ತಿ ಮಾಡಿದ್ದಾರೆ. ಮಾಡಿದ್ದಕ್ಕೆ ನಾವು ಮಾಡಿಲ್ಲ ಎಂದು ಹೇಳುವುದಿಲ್ಲ. ಆದರೆ ಹೇಗೆ ಲೆಕ್ಕಹಾಕಿ ನೋಡಿದರೂ ಕೂಡಾ ಒಂದು ಊಟಕ್ಕೆ ೧ ರೂ ೭೫ ಪೈಸೆ ಬೀಳುತ್ತದೆ. ಇದನ್ನು ತಾವೂ ಕೂಡಾ ಅರಿತುಕೊಂಡು ಇದನ್ನು ಪುನರ್‌ಪರಿಶೀಲನೆ ಮಾಡುತ್ತೇನೆಂದು ಹೇಳಿದರೆ ಎಲ್ಲರಿಗೂ ಕೂಡಾ ಸಂತೋಷ. ಆಗ ಲಕ್ಷಾಂತರ ವಿದ್ಯಾರ್ಥಿಗಳು ನಿಮ್ಮನ್ನು ಅಭಿನಂದಿಸುತ್ತಾರೆ.

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ).— ಹಿಂದಿನ ಸರ್ಕಾರದವರು ಬೆಂಗಳೂರಿನ ಮಿಲ್ಲರ್ ಟ್ಯಾಂಕ್ ಬೆಡ್‌ನಲ್ಲಿ ಒಂದು ಎಕರೆ ಜಾಗದಲ್ಲಿ ಡಾಕ್ಟರ್ ಅಂಬೇಡ್ಕರ್ ಭವನವನ್ನು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಬೇಕೆಂದು ತೀರ್ಮಾನ ಮಾಡಿದರು. ಅದರ ಒಂದು ಶಂಕುಸ್ಥಾಪನೆಯೂ

ಆಯಿತು. ಆದರೆ ಕಟ್ಟಡ ಶುರುವಾಗಲಿಲ್ಲ. ಹಿಂದಿನ ಸರ್ಕಾರ ಹೋದರೂ ಕೂಡಾ ಈಗಿರತಕ್ಕಂಥ ನಮ್ಮ ಹಣಕಾಸಿನ ಸಚಿವರು ಇದರ ಬಗ್ಗೆ ತಮ್ಮ ಒಂದು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ಅರ್ಥಮಂತ್ರಿಗಳು ದಯವಿಟ್ಟು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ.— ನಾನು ಈ ಕಾಲದಲ್ಲಿ ಅರ್ಥಮಂತ್ರಿಯಾದುದು ಯಾವ ಜನ್ಮದ ಪಾಪವೋ ಗೊತ್ತಿಲ್ಲ. ಹಿಂದೆ ಇದ್ದವರು ಮೀಟಿಂಗ್ಸ್ ನಡೆದಾಗ, ಬೇಡಿಕೆಗಳು ಬಂದಾಗ ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳಿ ಚಪ್ಪಾಳೆ ತಟ್ಟಿಸಿಕೊಳ್ಳುತ್ತಿದ್ದರು. ಚಪ್ಪಾಳೆ ತಟ್ಟಿಸಿಕೊಂಡು ಅವರು ಹೋದರು, ನಾನು ಈಗ ಈ ಜಾಗದಲ್ಲಿ ಕುಳಿತುಕೊಂಡು ಬೈಯಿಸಿಕೊಳ್ಳಬೇಕಾಗಿದೆ. ಅಂಬೇಡ್ಕರ್ ಭವನದ ಬಗ್ಗೆ ಏನು ಪ್ರಶ್ನೆ ಎತ್ತಿದ್ದಾರೆ, ಅವರ ಬಗ್ಗೆ ನನಗೆ ಪೂರ್ತಿ ಗೌರವ ಇದೆ. ಆ ಭವನ ಕಟ್ಟಬೇಕೆಂದು ಏನು ಯೋಚನೆ ಮಾಡಿದ್ದರು ಅದು ಬಹಳ ಒಳ್ಳೆಯದು. ಇದಕ್ಕೆ ಏನು ಸಹಾಯ ಮಾಡಬೇಕೆಂಬುದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೇ, ಅಧ್ಯಕ್ಷರೇ ನಾನು ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ.

ಅಧ್ಯಕ್ಷರು.— ಭೈರೇಗೌಡರು;

ಶ್ರೀ ಸಿ. ಭೈರೇಗೌಡ.— ಸ್ವಾಮಿ ತಾವು ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಿದ್ದೀರಿ. ಸಂತೋಷ. ಆದರೆ ಆ ಪ್ರದೇಶಕ್ಕಿಂತ ಇನ್ನೂ ತಲಾವಾರು ಆದಾಯದಲ್ಲಿ ಕಡಿಮೆ ಇರತಕ್ಕಂಥದ್ದು ಇಡೀ ರಾಜ್ಯದಲ್ಲಿ ಕೋಲಾರ ಜಿಲ್ಲೆ ಎಂಬುದು ನಿಮ್ಮ ಅಂಕಿ ಅಂಶಗಳ ಪ್ರಕಾರವೇ ತಿಳಿದುಬರುತ್ತದೆ. ಆದರೆ ಎಲ್ಲಕ್ಕಿಂತ ಕನಿಷ್ಟವಾದ ಈ ಪ್ರದೇಶವನ್ನು ಅಭಿವೃದ್ಧಿ ಮಾಡತಕ್ಕಂಥಾದ್ದರ ಬಗ್ಗೆ ಯಾವ ಮಾತನ್ನೂ ತಮ್ಮ ಬಜೆಟ್‌ನಲ್ಲಿ ಹೇಳಲಿಲ್ಲ. ನಾನೂ ಕೂಡಾ ಅದನ್ನು ಪ್ರಸ್ತಾಪ ಮಾಡಿದ್ದೆ. ಕೋಲಾರ ಜಿಲ್ಲೆಗೆ ಅನ್ಯಾಯವಾಗಿದೆ. ಅದನ್ನು ಈಗಲಾದರೂ ಕೂಡಾ ಸರಿಪಡಿಸುವ ಭರವಸೆಯನ್ನು ಕೊಡುತ್ತೀರಾ?

ಎರಡನೆಯದಾಗಿ ರೇಷ್ಮೆ ಗೂಡಿನ ಬೆಲೆ ಏನು ಎಂಬುದು ಇವತ್ತಿನ ದಿವಸ ತಮಗೆ ಗೊತ್ತಿದೆ. ಒಂದು ಕೆ.ಜಿ ಗೆ ೧೦೦–೧೨೦ ರೂಪಾಯಿಗೆ ಹೋಗುತ್ತಿದ್ದುದು ಇವತ್ತು ೩೦–೪೦ ರೂಪಾಯಿಗೆ ಬಂದಿದೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ ಕೇಂದ್ರ ಸರಕಾರದವರು ಹೊರ ದೇಶಗಳಿಂದ ಪ್ರಮುಖವಾಗಿ ಚೈನಾ ದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು. ಈ ರೇಷ್ಮೆ ಬಂದರೆ ನಮ್ಮ ರೇಷ್ಮೆಗೆ ಬೆಲೆ ಇಲ್ಲದ ಹಾಗೆ ಆಗುತ್ತದೆ. ರೇಷ್ಮೆಗೆ ಯಾವಾಗ ಬೆಲೆ ಇಲ್ಲವೋ, ರೇಷ್ಮೆ ಬಟ್ಟೆಗೂ ಬೆಲೆ ಇಲ್ಲದ ಪರಿಸ್ಥಿತಿ ಬರುತ್ತದೆ. ರೇಷ್ಮೆ ಗೂಡಿಗೂ ಕೂಡಾ ಈಗ ಬೆಲೆ ಇಲ್ಲದ ಪರಿಸ್ಥಿತಿ ಬಂದಿದೆ. ಆದುದರಿಂದ ತಾವು ರೇಷ್ಮೆಯನ್ನು ಹೊರದೇಶಗಳಿಂದ ನಮ್ಮ ದೇಶಕ್ಕೆ ಇಂಪೋರ್ಟ್ ಮಾಡುವುದಕ್ಕೆ ತೀವ್ರವಾದ ಪ್ರತಿಭಟನೆಯನ್ನು ಸೂಚಿಸಿ, ಇದನ್ನು ನಿಲ್ಲಿಸತಕ್ಕ ಒಂದು ಪ್ರಯತ್ನವನ್ನು ತಾವು ದಯವಿಟ್ಟು ಮಾಡುತ್ತೀರಾ?

ಮೂರನೆಯದಾಗಿ, ರೈತರ ಬಗ್ಗೆ ಇಲ್ಲಿ ಚರ್ಚೆ ಆಯಿತು. ಅದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ಎಕ್ಸೈಸ್ ಬಗ್ಗೆ ಬಹಳ ಚರ್ಚೆ ಆಯಿತು. ತಾವೇನೋ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೀರಿ; ಅದನ್ನು ನಾನು ಪೂರ್ಣ ಹೃದಯದಿಂದ ಸ್ವಾಗತ ಮಾಡಿದ್ದೇನೆ. ಅಲ್ಲಿಂದ ಈಚೆಗೆ ಎಷ್ಟು ಆದಾಯ ಬಂದಿದೆ. ಎಷ್ಟು ಆದಾಯ ಹೆಚ್ಚಾಗಿದೆ. ತಾವು ಕ್ರಮಗಳನ್ನು ತೆಗೆದುಕೊಂಡ ಮೇಲೆ ಹಾಗೂ ರಾಜ್ಯಪಾಲರ ಆಡಳಿತ ಇದ್ದಾಗ ಕೂಡಾ ಕೆಲವು ಕ್ರಮ ತೆಗೆದುಕೊಂಡಿದ್ದರಲ್ಲ, ಆ ಕ್ರಮಗಳನ್ನು ತೆಗೆದುಕೊಂಡು ಆದ ಮೇಲೆ ಹೆಚ್ಚಾಗಿ ಎಷ್ಟು ಹಣ ಬಂದಿದೆ. ಈ ರೀತಿ ಬಂದಿರತಕ್ಕಂಥಾದ್ದರಲ್ಲಿ ಸಾರಾಯಿಯಿಂದ ಎಷ್ಟು ಲಾಭ ಬಂದಿದೆಯೆಂಬುದನ್ನು ತಿಳಿಸಬೇಕು. ಸಾರಾಯಿ ಬಗ್ಗೆ ಮಾತ್ರ ನಾನು ಕೇಳುತ್ತೇನೆ ಬೇರೆ ಎಲ್ಲವನ್ನೂ ನಾನು ಕೇಳುವುದಕ್ಕೆ ಹೋಗುವುದಿಲ್ಲ. ನನಗೆ ಗೊತ್ತಿದ್ದ ಹಾಗೆ ಈ ಸಾರಾಯಿಯಿಂದ ಎಷ್ಟು ಹಣ ಸೋರಿ ಹೋಗುತ್ತಿದೆ ಎಂದರೆ ಮಿತಿಮೀರಿ ಸೋರಿ ಹೋಗುತ್ತಿದೆ. ತಾವು ಐ.ಎಮ್.ಎಫ್.ಎಲ್. ಅನ್ನು ಏನೋ ಕಂಟ್ರೋಲ್ ಮಾಡಿದ್ದೀರಿ, ಅದನ್ನು ಸ್ವಾಗತ ಮಾಡುತ್ತೇನೆ. ಅದೇ ರೀತಿಯಲ್ಲಿ ನೀವು ಸಾರಾಯಿಯನ್ನು ಕಂಟ್ರೋಲ್ ಮಾಡಿಲ್ಲ. ನಿಮಿಷಗಳಲ್ಲಿ ಇದರಿಂದ ಕೋಟ್ಯಾಂತರ ರೂಪಾಯಿಗಳ ಹಣ ಸೋರಿ ಹೋಗುತ್ತಿದೆ. ನಾನು ಎಲ್ಲಾ ವಿವರಗಳನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಾರಾಯಿಯಿಂದ ಎಷ್ಟು ಹಣ ಇವತ್ತಿನ ದಿವಸ ಸರ್ಕಾರಕ್ಕೆ ಹೆಚ್ಚು ಬಂದಿದೆ ಎನ್ನತಕ್ಕಂಥಾದ್ದನ್ನು ದಯಮಾಡಿ ತಿಳಿಸಬೇಕು. ಇನ್ನು ನೀರಾವರಿ ಬಗ್ಗೆ ವಿಫುಲವಾದ ಚರ್ಚೆ ಈ ಮನೆಯಲ್ಲಿ ನಡೆದಿದೆ. ಸಣ್ಣ ನೀರಾವರಿ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕಂಥಾದ್ದರ ಬಗ್ಗೆ ಗೊತ್ತಿಲ್ಲ.

ಇವತ್ತು ಇರತಕ್ಕಂಥ ಕೆರೆಗಳಲ್ಲಿ ಹೂಳು ತುಂಬಿ ಹೋಗಿದೆ. ಬಹುಶಃ ಆ ಕೆರೆಗಳನ್ನು ಮೊದಲಿನ ಸ್ಥಿತಿಗೆ ತರಬೇಕಾದರೆ ತಾವು ಯಾವ ಯೋಜನೆಯನ್ನು ಹಾಕಿಕೊಳ್ಳುತ್ತೀರಿ ಈ ಬಗ್ಗೆ ತಜ್ಞರ ಸಮಿತಿ ಏನಾದರೂ ರಚನೆ ಮಾಡುತ್ತೀರಾ ಎಂದು ನಾನು ಕೇಳಿದ್ದೆ. ಅದರ ಬಗ್ಗೆ ಕೂಡ ತಾವು ಏನನ್ನೂ ಹೇಳಲಿಲ್ಲ. ದಯಮಾಡಿ ನನಗೆ ಈ ವಿಷಯಗಳಿಗೆ ಸಂಬಂಧಪಟ್ಟಂತೆ ಉತ್ತರ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.— ಕೋಲಾರ ಬಾರ್ಡರ್ ಜಿಲ್ಲೆ. ಈ ಜಿಲ್ಲೆಯನ್ನು ಅಭಿವೃದ್ಧಿ ಮಾಡಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದರು. ಆ ಜಿಲ್ಲೆ ಹಿಂದುಳಿದಿದೆ ಎನ್ನುವುದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದನ್ನು ಸಹ ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನಾವು ಈ ಸಾಲಿನ ಬಜೆಟ್‌ನಲ್ಲಿ ೫ ಕೋಟಿ ರೂಪಾಯಿಗಳನ್ನು ಬಾರ್ಡರ್ ಜಿಲ್ಲೆಗಳ ಅಭಿವೃದ್ಧಿಗೆ ಒದಗಿಸಿದ್ದೇವೆ. ಈ ಹಣವನ್ನು ಯಾವ ಹೆಡ್‌ನಲ್ಲಿ ಖರ್ಚು ಮಾಡಬೇಕು ಎನ್ನುವುದನ್ನು ಸಹ ಯೋಚನೆ ಮಾಡುತ್ತಿದ್ದೇವೆ. ಅವಶ್ಯಕತೆ ಬಿದ್ದರೆ ಇನ್ನೂ ಹೆಚ್ಚು ಹಣ ಖರ್ಚು ಮಾಡುವುದಕ್ಕೂ ಸಾಧ್ಯ ಇದೆ.

ಶ್ರೀ ಸಿ. ಭೈರೇಗೌಡ.— ತಾವು ೫ ಕೋಟಿ ರೂಪಾಯಿಗಳ ಹಣವನ್ನು ಇಟ್ಟಿರುವುದು ಇಡಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬಾರ್ಡರ್ ಜಿಲ್ಲೆಗಳ ಅಭಿವೃದ್ಧಿಗೆ ಕೋಲಾರ ಜಿಲ್ಲೆಯ ಅಭಿವೃದ್ಧಿಗೆ ೫ ಕೋಟಿ ರೂಪಾಯಿಗಳೇನೂ ಇಟ್ಟಿಲ್ಲ. ಅದನ್ನು ತಾವು ಸರಿಯಾಗಿ ಹೇಳಿ. ಕೋಲಾರ ಜಿಲ್ಲೆಗೆ ೫ ಕೋಟಿ ರೂಪಾಯಿಗಳು ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಮಹಾರಾಷ್ಟ್ರದಿಂದ ಹಿಡಿದು ಆಂಧ್ರ ಪ್ರದೇಶ ತಮಿಳುನಾಡು ಕೇರಳ ಈ ಗಡಿ ಪ್ರದೇಶಗಳೆಲ್ಲದಕ್ಕೂ ಸೇರಿ ೫ ಕೋಟಿ ರೂಪಾಯಿಗಳನ್ನು ಒದಗಿಸಿರುವುದು; ಇವತ್ತಿನ ದಿವಸ ಕೋಲಾರ ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆ. ಆದ್ದರಿಂದ ಕೋಲಾರ ಜಿಲ್ಲೆ ಅಭಿವೃದ್ಧಿಗೆ ತಾವೇನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಅದನ್ನು ದಯಮಾಡಿ ಹೇಳಿ.

ಶ್ರೀ ಎಂ. ರಾಜಶೇಖರ ಮೂರ್ತಿ.— ನಾವು ೫ ಕೋಟಿ ರೂಪಾಯಿಗಳನ್ನು ಗಡಿ ಪ್ರದೇಶಗಳ ಅಭಿವೃದ್ಧಿಗೆ ಪ್ರೊವೈಡ್ ಮಾಡಿದ್ದೇವೆ. ಈ ಪ್ರದೇಶಗಳ ಅಭಿವೃದ್ಧಿಗೆ ಆಮೇಲೆ ಹಣ ಜಾಸ್ತಿ ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಇನ್ನು ಸಿಲ್ಕ್ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿದರು. ಆ ಬಗ್ಗೆ ನಾನು ಹೇಳುವುದಾದರೆ ಈ ಸಿಲ್ಕ್‌ನ ಧಾರಣೆ ಆಗಾಗ ಏರುಪೇರುಗಳಾಗುತ್ತಿರುತ್ತದೆ. ಅದಕ್ಕೆ ಕೇಂದ್ರ ಸರ್ಕಾರದವರು ಸಿಲ್ಕ್ ಸ್ಟೆಡಿಯಿಂಗ್ ಸ್ಕೀಮ್ ಒಂದನ್ನು ಮಾಡಿ ಸಿಲ್ಕ್ ಬೋರ್ಡ್ ಸ್ಥಾಪನೆ ಮಾಡಿದರು. ಈ ಬೋರ್ಡ್‌ನ ಕೆಲಸವೇನೆಂದರೆ ಪ್ರೈಜ್ ಜಾಸ್ತಿಯಾದಾಗ ಸ್ಟಾಕ್ ರಿಲೀಜ್ ಮಾಡುವಂಥಾದ್ದು. ಪ್ರೈಜ್ ಕಡಿಮೆ ಆದಾಗ ಸಿಲ್ಕ್‌ನ್ನು ಸ್ಟಾಕ್ ಇಟ್ಟುಕೊಳ್ಳುವುದು. ಈ ಸ್ಕೀಮ್‌ನ್ನು ಜಪಾನಿನ ಹೋಲ್ಡಿಂಗ್ ಕಂಪನಿಯವರು ಮಾಡುತ್ತಿದ್ದರು, ಅದೇ ಪ್ರಕಾರ ಇಲ್ಲಿ ಸಹ ಸಿಲ್ಕ್ ಬೋರ್ಡ್ ಸ್ಥಾಪನೆ ಮಾಡಿದರು. ಯಾವ ಉದ್ದೇಶದಿಂದ ಈ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶ ಸಫಲವಾಗಲಿಲ್ಲ. ನಾನು ಸಹ ಮೊನ್ನೆ ಅಲ್ಲಿ ಹೋಗಿ ಅವರ ಜೊತೆ ಈ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡಿ ಈ ವಿಚಾರದಲ್ಲಿ ನೀವು ನಿಮ್ಮ ಕಾರ್ಯ ವೈಖರಿಯನ್ನು ವಿಚಾರ ಮಾಡಬೇಕಾಗುತ್ತದೆಂದು ಹೇಳಿ ಬಂದಿದ್ದೆ. ಇನ್ನು ಕೆರೆಗಳಲ್ಲಿ ಹೂಳು ತೆಗೆಸುವ ಬಗ್ಗೆ ಪ್ರಸ್ತಾಪ ಮಾಡಿದರು. ಕೆರೆಗಳಲ್ಲಿ ಹೂಳು ತೆಗೆಸುವ ಕೆಲಸ ಕೈಗೆತ್ತಿಕೊಂಡರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಹೊಸ ಕೆರೆಗಳಲ್ಲಿ ನಿರ್ಮಾಣಕ್ಕಿಂತ ಇದು ಜಾಸ್ತಿ ಖರ್ಚು ಬರುತ್ತದೆ. ಈ ಬಗ್ಗೆ ಒಂದು ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ತಜ್ಞರ ರಿಪೋರ್ಟ್ ತರಿಸಿ ನೋಡಿದ ಮೇಲೆ ಇದು ಕಷ್ಟದ ಕೆಲಸ ಎಂದು ಸರ್ಕಾರ ಮನಗಂಡಿದೆ.

ಶ್ರೀ ಸಿ. ಭೈರೇಗೌಡ.— ಬಹಳ ಮುಖ್ಯವಾದ ಎಕ್ಸೈಜ್ ಬಗ್ಗೆ ತಾವೇನೂ ಹೇಳಲಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.— ಎಕ್ಸೈಜ್ ಬಗ್ಗೆ ಮಾತನಾಡುತ್ತಾ ಹೋದರೆ ಬಹುಶಃ ಈ ಮನೆಯಲ್ಲಿ ಶಾಂತಿ ಭಂಗವಾಗುತ್ತದೆ.

ಶ್ರೀ ಸಿ. ಭೈರೇಗೌಡ.— ನೀವು ವಿಸ್ಕಿ ಬ್ರಾಂದಿಗೆ ಒಳಗಾಗಿಲ್ಲ. ಸಾರಾಯಿಗೆ ಒಳಗಾಗಿದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ.— ಅದರ ಬಗ್ಗೆ ಮಾನ್ಯ ಸದಸ್ಯರಿಗೇ ಚೆನ್ನಾಗಿ ಗೊತ್ತಿದೆ.

ಅಧ್ಯಕ್ಷರು.— ಶ್ರೀ ವಿನಯಕುಮಾರ್ ಸೊರಕೆ.

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಹಾಲವನ್ನು ಪೌಡರ್‌ಗಳಿಂದ ತಯಾರು ಮಾಡಿ ಮಾರುತ್ತಿದ್ದುದನ್ನು ಇನ್ನು ಮುಂದೆ ರಾಜ್ಯಾದ್ಯಂ

ನಿಷೇಧ ಮಾಡುವಂಥ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಪೌಡರ್‌ನಿಂದ ತಯಾರಾದ ಹೆಂಡ ಮತ್ತು ಕಲಬೆರಕೆ ಹೆಂಡವನ್ನು ಮಾರಾಟ ಮಾಡುವುದನ್ನು ನಿಷೇಧ ಮಾಡಿರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರದಿಂದಲೇ ಸುಮಾರು ೬ ಲಕ್ಷ ಲೀಟರ್‌ನಷ್ಟು ಹೆಂಡ ಉತ್ಪತ್ತಿಯಾಗುತ್ತದೆ. ಈ ರೀತಿ ಹೆಂಡ ತೆಗೆಯುವದರಲ್ಲಿ ಸುಮಾರು ೧೦ ಸಾವಿರದಿಂದ ೧೫ ಸಾವಿರ ಜನರವರೆಗೆ ಉದ್ಯೋಗ ಮಾಡುತ್ತಿದ್ದಾರೆ. ಹೆಂಡದ ಬಗ್ಗೆ ಒಂದು ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ತೀರ್ಮಾನ ಕೂಡ ಆಗಿದೆ. ಹೆಂಡವು ಒಂದು ರೀತಿಯ ಆಹಾರ ವಸ್ತುವೇ ಹೊರತು ಅದು ಆಲ್ಕೋಹಾಲ್ ಅಲ್ಲವೆಂದು ತೀರ್ಮಾನವಾಗಿದೆ. ಹೆಂಡ ತೆಗೆಯುವ ಉದ್ಯೋಗದ ಬಗ್ಗೆ ಅವರಿಗೆ ಬದಲಿ ವ್ಯವಸ್ಥೆ ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೫ ಸಾವಿರ ಜನರು ಹೆಂಡ ತೆಗೆಯುವ ಕೆಲಸವನ್ನು ಮಾಡುತ್ತಿದ್ದಾರೆ. ಹೆಂಡ ಮಾರಾಟವನ್ನು ನಿಷೇದ ಮಾಡಿರುವುದರಿಂದ ಅವರುಗಳಿಗೆಲ್ಲಾ ಒಂದು ದೊಡ್ಡ ಗಂಡಾಂತರವಾಗಿದೆ. ಇದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಮೊದಲು ಸಂಬಂಧಪಟ್ಟ ಶಾಸಕರ ಹತ್ತಿರ ಹಾಗೂ ಜನರ ಪ್ರತಿನಿಧಿಗಳ ಹತ್ತಿರ ಪರಸ್ಪರ ಚರ್ಚೆ ಮಾಡಿ ಇದರ ಬಗ್ಗೆ ಅವಕಾಶ ಕೊಟ್ಟು ಆಮೇಲೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕೆಲಸ ಕಳೆದುಕೊಳ್ಳುವವರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಈಗಾಗಲೇ ಫೆನ್ನಿ ಮಾಡುವ ಕಂಪನಿಗಳಿಗೆ ೨೧ ಲೈಸನ್ಸ್ ಕೊಟ್ಟಿದ್ದೇವೆ. ಇದೇ ತರಹ ಫೆನ್ನಿ ಮಾಡುವುದಕ್ಕೆ ಜನರು ಮುಂದೆ ಬಂದರೆ ಅವರುಗಳಿಗೆ ಲೈಸನ್ಸ್ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಬಹಳ ಕಳಕಳಿ ವ್ಯಕ್ತಪಡಿಸಿದ್ದೀರಿ.

ಅಧ್ಯಕ್ಷರು.—ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ೬೦ ನಿಮಿಷ ಆಗಿಹೋಯಿತು. ಸಂಕ್ಷಿಪ್ತವಾಗಿದ್ದರೆ ಮಾತ್ರ ಕೇಳಿ.

ಶ್ರೀ ವಾಟಾಳ್ ನಾಗರಾಜ್.—ಸಂಕ್ಷಿಪ್ತವಾಗಿಯೇ ಹೇಳುತ್ತೇನೆ. ಮಾಜಿ ರಾಷ್ಟ್ರಪತಿಯವರಿಗೆ ಆಗುತ್ತಿರುವಂಥ ಖರ್ಚನ್ನು ಉಳಿಸತಕ್ಕಂಥ ಯೋಚನೆ ಸರ್ಕಾರಕ್ಕಿದೆಯೇ?

ಅಧ್ಯಕ್ಷರು.—ಅದು ಬೇಡ.

ಶ್ರೀ ವಾಟಾಳ್ ನಾಗರಾಜ್.—ಲೋಕಾಯುಕ್ತವನ್ನು ರದ್ದುಪಡಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ? ಆಮೇಲೆ ಚಾಮರಾಜನಗರಕ್ಕೆ ಕಾವೇರಿ ನದಿಯ ನೀರನ್ನು ಯಾವತ್ತು ಕೊಡುತ್ತೀರಿ? ಅದರ ಬಗ್ಗೆ ಯಾವೊತ್ತು ಕೆಲಸ ಪ್ರಾರಂಭ ಮಾಡುತ್ತೀರಿ ಎಂಬ ವಿಷಯವನ್ನು ಈ ಸಭೆಯಲ್ಲಿ ಹೇಳಿದರೆ ನನಗೆ ಬಹಳ ಸಂತೋಷ ಆಗುತ್ತದೆ. ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರೆಂದು ಹೇಳಿದರೆ ಸಾಕು.

ಅಧ್ಯಕ್ಷರು.—ಈ ವರ್ಷ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದು ನನಗೇ ಇನ್ನೂ ಜ್ಞಾಪಕ ಇದೆ. ನೀವು ಕುಳಿತುಕೊಳ್ಳಿ. ಮಾನ್ಯ ಏಕಾಂತಯ್ಯನವರು.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಸಾರಾಯಿಗೆ ಇರುವ ಕೊನೆ ಹಂತದ ಮಾರಾಟ ತೆರಿಗೆಯನ್ನು ಇಟ್ಟುಕೊಂಡಿದ್ದಾರೆ. ಇದರಿಂದ ಸರ್ಕಾರಕ್ಕೆ ಹೆಚ್ಚು ತೆರಿಗೆ ಬಂದ ಹಾಗೆ ಆಗುತ್ತದೆ.

೨-೦೦ ಪಿ. ಎಂ.

ಸಾರಾಯಿಯ ಮೇಲೆ ಮಾತ್ರ ಏತಕ್ಕಾಗಿ ಕೊನೆಯ ಮಾರಾಟ ಹಂತದ ತೆರಿಗೆಯನ್ನು ಈಗ ವಜಾ ಮಾಡಿದ್ದೀರಿ? ಅದಕ್ಕೆ ಏನಾದರೂ ವಿಶೇಷ ಕಾರಣಗಳು ಇವೆಯೇ? ಅಂತೆಯೇ ರೈತರುಗಳು ವಾಣಿಜ್ಯ ಬ್ಯಾಂಕ್‌ಗಳಿಂದ ಮತ್ತು ಸಹಕಾರ ಸಂಘಗಳಿಂದ ಏನು ಸಾಲವನ್ನು ಪಡೆಯುತ್ತಾರೆ ಆಗ ಅವರು ಸಾಲಪತ್ರವನ್ನು ಬರೆದುಕೊಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ original deeds ಡಿಪಾಸಿಟ್ ಏನು ಮಾಡಬೇಕು ಅದಕ್ಕೆ stamp duty ಇರುವುದಿಲ್ಲ. Simple mortgage ಬರೆದು ಕೊಡುತ್ತೇವೆ. ರೈತರು ಮಾಡಿದಂಥ ಸಾಲಕ್ಕೆ ಸ್ಟ್ಯಾಂಪ್‌ನಿಂದ ವಿನಾಯಿತಿ ಕೊಡುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದುದರಿಂದ ಅದನ್ನು ಈಗ ತಾವುಗಳು ಮಂದುವರಿಸುತ್ತೀರಾ? ಅಂತೆಯೇ ಈಗ ಇರುವ ೧೦ ಸಾವಿರ ರೂಪಾಯಿಗಳ

ಮಿತಿಯನ್ನು ಹೆಚ್ಚು ಮಾಡುವ ಅಂದಾಜು ಸರಕಾರಕ್ಕೆ ಇದೆಯೋ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ.—ಸ್ಟ್ಯಾಂಪ್ ಡ್ಯೂಟಿಯ ಮೇಲೆ ರಿಯಾಯಿತಿ ಕೊಡುವುದು ಸರಕಾರದ ಗಮನದಲ್ಲಿ ಇಲ್ಲ. ಆದ್ದರಿಂದ ಅದನ್ನು ಕನ್ಸಿಡರ್ ಮಾಡುವುದಕ್ಕೆ ಸಾಧ್ಯ ಆಗಲಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮತ್ತೆ ಏನನ್ನು ಮಾಡುತ್ತೀರಿ ತಾವು? ರೈತರಿಗೆ ವಿನಾಯತಿ ಕೊಡುವ ಪ್ರಶ್ನೆ ಬಂದಾಗ ಇಲ್ಲ ಎನ್ನುತ್ತೀರಿ? ರೈತರಿಗೆ ಸರಿಯಾಗಿ ವಿದ್ಯುತ್ ಶಕ್ತಿ ಕೊಡುವುದಕ್ಕೆ ತಾವುಗಳು ತಯಾರಾಗಿಲ್ಲ. ರೈತರ ಸಾಲ ಮನ್ನಾ ಮಾಡುವುದಕ್ಕೂ ತಮ್ಮ ಸರಕಾರ ತಯಾರಾಗಿಲ್ಲ, ಹೀಗೆ ರೈತರ ಪರವಾಗಿ ನಿಲುವನ್ನು ತಳೆದಿಲ್ಲದ ಸರಕಾರಕ್ಕೆ, ರೈತರ ವಿರೋಧಿ ಸರಕಾರಕ್ಕೆ ಮತ್ತು ರೈತರ ವಿರೋಧಿ ನೀತಿಯನ್ನು ತಳೆದಿರುವ ಈ ಸರ್ಕಾರಕ್ಕೆ ನಾವು ವಿರೋಧ ವ್ಯಕ್ತ ಮಾಡಿ ಪ್ರತಿಭಟನೆಯನ್ನು ಸಲ್ಲಿಸಬೇಕಾಗುತ್ತದೆ. ರೈತರ ಬಗ್ಗೆ ತಾವುಗಳು ಸ್ವಲ್ಪವೂ ಕಾಳಜಿಯನ್ನು ಹೊಂದಿಲ್ಲ. ರೈತರ ಪರವಾಗಿ ಸೌಜನ್ಯಪೂರ್ವಕವಾಗಿ ಉತ್ತರ ಕೊಡುವುದೂ ತಮ್ಮಿಂದ ಆಗುತ್ತಿಲ್ಲ...

(ಗೊಂದಲ)

ಇದು ರೈತರಿಗೆ ದ್ರೋಹವನ್ನು ಮಾಡಿದ ಸರಕಾರ, ಇದು ರೈತರ ವಿರೋಧಿ ಸರಕಾರ ಎಂದು ಹೇಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ಬಿ. ಜೆ. ಪಿ. ಮತ್ತು ರೈತ ಸಂಘದ ಶಾಸಕರು ಘೋಷಣೆಗಳೊಂದಿಗೆ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಅಪ್ರೋಪ್ರಿಯೇಶನ್ ಬಿಲ್...

ಶ್ರೀ ಡಿ.ಬಿ. ಚಂದ್ರೇಗೌಡ.—ಹಾಗಿದ್ದಲ್ಲಿ ಈ ಚರ್ಚೆ ಇಲ್ಲಿಗೆ ಮುಗಿಯಿತು ಎಂದು ಅರ್ಥವೇ ?

ಅಧ್ಯಕ್ಷರು.—ಮಾನ್ಯ ಸಚಿವರು ಉತ್ತರವಾಗಿ ಒಂದೂವರೆ ಗಂಟೆ ಮಾತನಾಡಿದ್ದಾರೆ. ಅದಕ್ಕೆ ಕ್ಲಾರಿಫಿಕೇಶನ್ ಒಂದು ಗಂಟೆ ನಡೆಯಿತು.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದು ಸರಕಾರದ ನೀತಿ ಪ್ರಶ್ನೆ ಬಗ್ಗೆ. ಐಎಂಎಲ್ ಮತ್ತು ಸಾರಾಯಿ ಬಗ್ಗೆ ಸರಕಾರದ ನೀತಿ ಏನು ಎಂದು ದಯಮಾಡಿ ತಿಳಿಸಬೇಕು.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳುವುದು ಇದೆಯೋ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇಲ್ಲ. I have to move the motion......

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಕೆಲವೊಂದು ವಿಚಾರಗಳನ್ನು ಕುರಿತು ನಾವು ಗಂಟೆಗಟ್ಟಲೆ ಕೇಳುತ್ತಾ ಇದ್ದೇವೆ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾ ಇಲ್ಲ. ನಮಗೆ ಕಾವೇರಿ ನೀರನ್ನು ಕೊಡುತ್ತೀರೋ ಇಲ್ಲವೋ ಎಂದು ಹೇಳಿ ಬಿಡಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಲ್ಲಾ ಮಾನ್ಯ ಸದಸ್ಯರುಗಳು ಹೀಗೆ ಪ್ರಶ್ನೆಗಳನ್ನು ಕೇಳುತ್ತಾ ಇದ್ದಾರೆ ನನಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗಲಾರದು,

ಶ್ರೀ ವಾಟಾಳ್ ನಾಗರಾಜ್.—ತಾವುಗಳು ನಮಗೆ ಕಾವೇರಿ ನದಿ ನೀರು ಕೊಡುವ ವಿಚಾರದಲ್ಲಿ ಮೌನವಾಗಿರುವುದನ್ನು ನೋಡಿದರೆ ನನಗೆ ಭಯವಾಗುತ್ತಾ ಇದೆ. ತಾವು ಆ ವಿಚಾರದಲ್ಲಿ ಏನನ್ನು ಹೇಳಬೇಕೋ ಅದನ್ನು ಈ ಸಭೆಯಲ್ಲಿ ಹೇಳಿ. ಮಾನ್ಯ ಅಧ್ಯಕ್ಷರು ಕೂಡ ಹೇಳಿದ್ದಾರೆ. ಅಲ್ಲಿ ಬಹಳ ಭೀಕರವಾದಂಥ ಪರಿಸ್ಥಿತಿ ಇದೆ. ಇಡೀ ವರ್ಷದಲ್ಲಿ ೧೧ ತಿಂಗಳ ಕಾಲ ಅಲ್ಲಿ ಬರಗಾಲ ಇರುತ್ತದೆ. ಜನರು ತೊಂದರೆಯಲ್ಲಿದ್ದಾರೆ. ಜನರು ಸಾವಿನ ದವಡೆಯಲ್ಲಿದ್ದಾರೆಂದು ಒಂದೇ ಸಮನೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದರೂ ತಾವು ಮೌನವಾಗಿರುವುದನ್ನು ನೋಡಿದರೆ ನಮಗೆ ತುಂಬಾ ನೋವು ಉಂಟಾಗುತ್ತದೆ. ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಾ ಇದ್ದೇನೆ, ತಮ್ಮ ಬಗ್ಗೆ ಇರುವ ಅತ್ಯಂತ ಗೌರವದ ಸಲುವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ದಯವಿಟ್ಟು ಈ ವಿಚಾರದಲ್ಲಿ ತಮ್ಮ ನಿಲುವು ಏನೆಂದು ತಿಳಿಸಬೇಕು.

SRI M. RAJASHEKHARAMURTHY.—We have to move the motion...

ಅಧ್ಯಕ್ಷರು.—ಈಗ ನಿಂತಿರುವವರೆಲ್ಲ ಹಿರಿಯ ಅನುಭವೀ ಸದಸ್ಯರು. ಕ್ಲಾರಿಫಿಕೇಷನ್‌ಗೆ ಒಂದೂವರೆ ಗಂಟೆಯಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ನಾವು ಬಹಳ ಮಹತ್ವದ ಪ್ರಶ್ನೆ ಕೇಳಿದ್ದೇವೆ. ಇಲ್ಲಿ ಪ್ರಶ್ನೆ ಕೇಳುವ ಮೊದಲು ಬಹಳ ತಯಾರು ಮಾಡಿಕೊಂಡು ನಾವು ಅಲ್ಲಿ ಕೂತಿದ್ದರೆ ಏನೇನು ಮಾಡಬಹುದು ಎಂಬ ಪರಿಜ್ಞಾನ ಇಟ್ಟುಕೊಂಡು ಮಾತನಾಡಿದ್ದೇವೆ. ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಬರೀ ನಾವು ೨೪ ಜನರಿದ್ದೇವೆ. ಆದರೆ ಬಹಳ ಮಹತ್ವದ ವಿಷಯಗಳು.........

ಅಧ್ಯಕ್ಷರು.—ಕ್ಲಾರಿಫಿಕೇಷನ್‌ಗೇ ಅಂತ ಎಷ್ಟು ಟೈಮು ಕೊಡಬೇಕೆಂಬುದು ಇಲ್ಲಿ ಬಹಳ ಪ್ರಾಮುಖ್ಯವಾದ ಪ್ರಶ್ನೆ. ೪೦-೫೦ ನಿಮಿಷ ಬರೀ ಕ್ಲಾರಿಫಿಕೇಷನ್‌ಗೇ ಕೊಟ್ಟಿರೋದನ್ನು ನಾನು ಎಲ್ಲೂ ನೋಡಿಲ್ಲ. ಎಲ್ಲದಕ್ಕೂ ಒಂದು ಮಿತಿ ಇದೆ. ಇದೇ ಶಾಸನಸಭೆಯ ಹಿಂದಿನ ಕಡತಗಳನ್ನು ಸ್ವಲ್ಪ ನೋಡಿ.

ಶ್ರೀ ಆರ್. ವಿ ದೇಶಪಾಂಡೆ.—ಕೊಟ್ಟಿದ್ದಾರೆ ಸಾರ್. ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ ಮೇಲೆ ಕ್ಲಾರಿಫಿಕೇಷನ್‌ಗೆ ಒಂದೂವರೆ ಗಂಟೆ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು.—೪೩ ಜನ ಮಾನ್ಯ ಸದಸ್ಯರು ಆಯವ್ಯಯದ ಮೇಲೆ ಮಾತನಾಡಿದ್ದಾರೆ. ಪ್ರತಿಯೊಬ್ಬ ಸದಸ್ಯರ ಪ್ರತಿ ಪಾಯಿಂಟ್‌ಗೂ ಅರ್ಥ ಮಂತ್ರಿಗಳು ಉತ್ತರ ಕೊಡಲಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಕಾವೇರಿ ನೀರನ್ನು ಚಾಮರಾಜನಗರಕ್ಕೆ ಯಾವಾಗ ಪೂರೈಸುವುದು ಎಂದು ಹೇಳಲಿ. ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಆಯಿತು. ವಾಟಾಳ್ ನಾಗರಾಜ್ ಅವರು ಕೇಳಿದ್ದಕ್ಕೆ ಸಚಿವರು ಏನಾದರೂ ಹೇಳಬಯಸುವರೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಏನೂ ಇಲ್ಲ ಸ್ವಾಮಿ.

ಅಧ್ಯಕ್ಷರು.—ವಾಟಾಳ್ ನಾಗರಾಜ್‌ರವರೇ ನೀವು ಕೈಮುಗಿದು ಅಂತಃಕರಣಪೂರ್ವಕವಾಗಿ ಕೇಳಿಕೊಂಡರೂ ಸಚಿವರು ಉತ್ತರ ಕೊಡಲಿಲ್ಲ.

ಶ್ರೀ ಹರ್ಷಕುಮಾರಗೌಡ.—ಅರ್ಥ ಸಚಿವರು ೧೩೫ ಕೋಟಿ ರೂಪಾಯಿಗಳನ್ನು ಪಟ್ಟಣ ಅಭಿವೃದ್ಧಿಗಾಗಿ ಮೀಸಲಾಗಿಟ್ಟಿದ್ದಾರೆ. ನಾನು ಪ್ರಾರ್ಥಿಸುವುದೇನೆಂದರೆ ಪಟ್ಟಣಗಳಿಗೆ ನೀರು ಒದಗಿಸುವ ಕಾರ್ಯವನ್ನು ಬೇಸಿಗೆಯಿರುವುದರಿಂದ ನಿಧಾನವಾಗಬಾರದು. ಆದ್ದರಿಂದ ಇದರ ಬಗ್ಗೆ ಸಚಿವರು ಕ್ಲಾರಿಫಿಕೇಷನ್ ಕೊಡಬೇಕು.

Sri M. Rajashekaramurthy.—There is no delay with regard to taking up decisions regarding drinking water supply. The Government will move quickly in the matter.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಮಾರ್ಚಿಯೊಳಗೇ ಚಾಮರಾಜ ನಗರಕ್ಕೆ ನೀರನ್ನು ಒದಗಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಮೂಕರಾಗಿದ್ದಾರೆ. ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ.

(ಗದ್ದಲ)

ಇದು ಬಹಳ ಅನ್ಯಾಯ. ಇಡೀ ಚಾಮರಾಜನಗರ ಕಣ್ಣೀರು ಹಾಕುತ್ತಿದೆ. ಇದು ಅನ್ಯಾಯ. ನಮಗೆ ಕಾವೇರಿ ನೀರು ಬೇಕು.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಈ ಹಂತದಲ್ಲಿ ಜನತಾ ದಳದ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು. ಗೊಂದಲಮಯ ವಾತಾವರಣ)

ಶ್ರೀ ಹರ್ಷಕುಮಾರ್‌ಗೌಡ.—ಅರ್ಥ ಸಚಿವರಿಗೆ ವಾಟಾಳರು ಧನ್ಯವಾದಗಳನ್ನು ಹೇಳಬೇಕು. ನಿಮ್ಮ ಕಡೆಗೆ ಆರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ರಮಾನಾಥರೈ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹು ಭಾಗದ ಜನ ಬೀಡಿ ಉದ್ದಿಮೆಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಬೀಡಿ ಉದ್ಯಮಕ್ಕೆ ಬಹಳ ಗಂಭೀರ ಪರಿಸ್ಥಿತಿಯುಂಟಾಗಿದೆ. ವಾರದಲ್ಲಿ ಎರಡು ದಿವಸ ಮಾತ್ರ ಕೆಲಸ ಮಾಡಲಿಕ್ಕೆ ಸಾಧ್ಯ

ವಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಕಾರಣವೇನೆಂದರೆ ಮಧ್ಯಪ್ರದೇಶದಲ್ಲಿ ಬೀಡಿ ಎಲೆಯನ್ನು ರಾಷ್ಟ್ರೀಕರಣ ಮಾಡಿರುವ ಕಾರಣದಿಂದ ಬೀಡಿ ಎಲೆ ಬೆಲೆ ದುಬಾರಿಯಾಗಿದೆ. ಬೀಡಿ ದರ ಕೂಡಾ ಜಾಸ್ತಿಯಾಗಿದೆ. ಆದುದರಿಂದ ಬೀಡಿಯನ್ನು ಕಟ್ಟುವ ನೌಕರರಿಗೆ ತೊಂದರೆಯಾಗಿದೆ. ಈ ಬೀಡಿ ವ್ಯಾಪಾರದಲ್ಲಿ ಬಹಳ ಆಘಾತವುಂಟಾಗಿದೆ. ಬೀಡಿ ಮಾಲೀಕರು ಮತ್ತು ನಮ್ಮ ಜಿಲ್ಲೆಯ ಶಾಸಕರುಗಳು ಮನವಿಯನ್ನು ಮಾಡಿದ್ದಾರೆ, ಅದೇನೆಂದರೆ ಈ ಕಚ್ಚಾ ವಸ್ತುವಿಗೂ ಮತ್ತು ತಯಾರಾದ ಬೀಡಿಗೂ ಎರಡಕ್ಕೂ ಪ್ರವೇಶ ತೆರಿಗೆಯನ್ನು ಹಾಕುತ್ತಿದ್ದಾರೆ. ಇದರಲ್ಲಿ ಯಾವುದಾದರೂ ಒಂದನ್ನು ರದ್ದು ಮಾಡಿದರೆ ಬೀಡಿ ದರ ಕಡಿಮೆಯಾಗುವುದು. ಇದರಿಂದ ಬೀಡಿ ಉದ್ಯಮಕ್ಕೂ ಅನುಕೂಲವಾಗಬಹುದು ಆಗ ಬೀಡಿ ಕಟ್ಟತಕ್ಕಂಥ ಜನ ಬದುಕುತ್ತಾರೆ. ಆ ಹಿನ್ನೆಲೆಯಲ್ಲಿ ಕಚ್ಚಾ ವಸ್ತುವಿಗೂ ಮತ್ತು ತಯಾರಾದ ಬೀಡಿಗೂ ಪ್ರವೇಶ ತೆರಿಗೆಯನ್ನು ಹಾಕುವಂಥ ಸಂದರ್ಭದಲ್ಲಿ ಯಾವುದಾದರೂ ಒಂದನ್ನು ರದ್ದು ಮಾಡಲಿಕ್ಕೆ ಹಣಕಾಸಿನ ಸಚಿವರು ಪ್ರಯತ್ನವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಒದಗಿಸಿರುವ ಮೊಬಲಗು ಸಾಲದು ಎಂದು ಒಂದು ಕಡೆಯಿಂದ ಕೂಗು ಬರುತ್ತಿದೆ. ಟ್ಯಾಕ್ಸನ್ನು ಕಡಿಮೆ ಮಾಡಿ ಎಂದು ಇನ್ನೊಂದು ಕಡೆಯಿಂದ ಹೇಳುತ್ತಾರೆ ಆದ್ದರಿಂದ ಈ ಎರಡನ್ನೂ ಸರಿದೂಗಿಸುವುದು ಕಷ್ಟವಾಗುತ್ತದೆ. ಟ್ಯಾಕ್ಸ್ ಪ್ರಪೋಸಲ್ಸ್‌ನಲ್ಲಿ ರಿಯಾಯಿತಿಯನ್ನು ಕೊಡಲಿಕ್ಕೆ ಸಾಧ್ಯ ಇಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನಾವು ಕೇಳಿದ ಪ್ರಶ್ನೆಗೆ ಸಚಿವರು ಉತ್ತರವನ್ನು ಕೊಡಲಿಲ್ಲ. ಅಂದರೆ ಅದು ಪ್ರಾಮುಖ್ಯವಿಲ್ಲವೆಂದೇ ?

(ಗೊಂದಲ)

ಅಧ್ಯಕ್ಷರು.—ಪ್ರತಿ ಸದಸ್ಯರೂ ಕೇಳಿದ ಪ್ರಶ್ನೆಯು ಪ್ರಾಮುಖ್ಯ. ಅದು ಅಪ್ರಾಮುಖ್ಯ ಎನ್ನತಕ್ಕಂಥ ಪ್ರಶ್ನೆ ಇಲ್ಲ,

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನೀತಿಯ ಪ್ರಶ್ನೆಯನ್ನು ಕೇಳತಕ್ಕಂಥ ಸಂದರ್ಭದಲ್ಲೂ ಉತ್ತರವನ್ನು ಕೊಡದಿದ್ದರೆ ನಾವೇನು ಮಾಡಬೇಕು ?

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಹಿರಿಯ ಸದಸ್ಯರುಗಳು ಹಿಂದೆ ಮಂತ್ರಿಗಳಾಗಿದ್ದವರು, ಅಂತಹವರು ಈ ರೀತಿ ಸಭೆಯ ಕಾರ್ಯಕಲಾಪಕ್ಕೆ ಅಡ್ಡಿ ಮಾಡತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ಸಾರಾಯಿ ಬಗ್ಗೆ ಪ್ರಶ್ನೆ ಕೇಳಿದರೆ ಸರ್ಕಾರದಲ್ಲಿ ಉತ್ತರ ಇಲ್ಲವೇ ?

(ಗೊಂದಲ)

ಅಧ್ಯಕ್ಷರು.—ಇನ್ನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇದೆ.

ಶ್ರೀ ಹೆಚ್. ಏಕಾಂತಯ್ಯ.—ನಾವು ಕೇಳಿದ ಪ್ರಶ್ನೆ ಔಚಿತ್ಯವಿಲ್ಲವೇ ?

ಅಧ್ಯಕ್ಷರು.—ಅದು ಔಚಿತ್ಯ ಇಲ್ಲ ಎಂದು ನಾನು ಹೇಳಲಿಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಸರ್ಕಾರ ರೈತರ ಪರವಾಗಿಲ್ಲ. ಬಡವರ ಪರವಾಗಿಲ್ಲ. ಯಾವುದಾದರೂ ಒಂದು ಕೆಲಸವನ್ನಾದರೂ ಮಾಡುತ್ತೇವೆಂದು ಹೇಳಿದ್ದಾರೆಯೇ ? ಯಾವುದನ್ನೂ ಹೇಳಿಲ್ಲ,

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಗಂಗಾಕಲ್ಯಾಣದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದರ ಬಗ್ಗೆಯೂ ಉತ್ತರದಲ್ಲಿ ಹೇಳಿಲ್ಲ. ಪಂಪ್‌ಸೆಟ್‌ಗಳಿಗೆ ಒಂದು ವರ್ಷಕ್ಕೆ ಎಷ್ಟು ಪವರನು

ಕೊಡುತ್ತೀರಿ ಎಂದು ಕೇಳಿದ್ದೆ. ಅದಕ್ಕೂ ಕೂಡಾ ಉತ್ತರವನ್ನು ಕೊಟ್ಟಿಲ್ಲ. ಇವೆಲ್ಲವನ್ನೂ ಹೇಳ ದಿದ್ದರೆ ನಾವು ತಾನೇ ಇಲ್ಲಿ ಏನು ಮಾಡುವುದಕ್ಕಾಗುತ್ತದೆ ?

(ಗೊಂದಲ)

ಶ್ರೀ ಸಿ. ಬೈರೇಗೌಡ —ಒಂದು ಪಂಪುಸೆಟ್ಟಿಗೆ......

(ಗೊಂದಲ)

ಶ್ರೀ ಜಿ. ರಾಜುಗೌಡ.—ಉತ್ತರ ಹೇಳುತ್ತಾರೆ. ಕುಳಿತುಕೊಳ್ಳಿ......

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಕನಿಷ್ಟ ಪಕ್ಷ ಕೇಂದ್ರ ಸರ್ಕಾರದವರು......

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದರು. ಅದಕ್ಕೆ ನಾವು ಕ್ಲಾರಿಫಿಕೇಶನ್ ನಿಮಗೆ ಕೇಳಿದ್ದು, ಇದರಲ್ಲಿ ನಿಮ್ಮ ಪಾರ್ಟಿಸಿಪೇಷನ್ ಎಷ್ಟು ಎಂದು. ನಿಮ್ಮ ಪಾರ್ಟಿಸಿಪೇಷನ್ ಬಗ್ಗೆ ನೀವು ಹೇಳುವುದಕ್ಕೆ ಸಿದ್ಧವಿಲ್ಲ ಎಂದರೆ ನಾವು ಕೆಲಸ ಹೇಗೆ ಮಾಡಬೇಕು. ಇಷ್ಟು ದೂರ ನಾವು ಹೋಗುತ್ತೇವೆ. ನಾಲ್ಕನೇ ಒಂದು ಭಾಗ ಕೊಡುತ್ತೇವೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಈ ರೀತಿ ನೀವು ರೈತರ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿದ್ದೀರಿ. ಅನ್ಯಥಾ ಸರ್ಕಾರಕ್ಕೆ ನಾವು ವಿರೋಧ ಮಾಡಬೇಕಾಗುತ್ತದೆ. ನಿಮ್ಮ ಧೋರಣೆಯನ್ನು ಪ್ರತಿಭಟಿಸಿ ನಾವು ಸಭೆಯಿಂದ ಹೊರಗೆ ಹೋಗುತ್ತೇವೆ......

(ಗೊಂದಲ)

(ಜನತಾ ದಳದ ಸದಸ್ಯರುಗಳು ಶ್ರೀ ಡಿ. ಬಿ. ಚಂದ್ರೇಗೌಡರ ನೇತೃತ್ವದಲ್ಲಿ ಸಭಾ ತ್ಯಾಗವನ್ನು ಮಾಡಿದರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲೇ ಡಿಸೈಡ್ ಮಾಡಿದ್ದೀರಿ ಎಂದು ಕಾಣುತ್ತದೆ.......

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆ ಬಗ್ಗೆ ನಾನು ಪ್ರಶ್ನೆ ಕೇಳಿದೆ. ಒಂದು ಇರಿಗೇಷನ್ ಪಂಪ್‌ಸೆಟ್‌ಗೆ ಪವರ್ ಕೊಡುವುದಕ್ಕೆ ೩ ವರ್ಷ ತಡ ಆಗುತ್ತಿದೆ. ಈ ಬಜೆಟ್‌ನಲ್ಲಿ ಏನೂ ಇಟ್ಟಿಲ್ಲ. ಮತ್ತೆ ಇವೊತ್ತಿನ ದಿವಸ.......

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮೂರು ವರ್ಷದಿಂದ ಏನೂ ಆಗುತ್ತಿಲ್ಲ. ಒಂದು ಇರಿಗೇಷನ್ ಪಂಪ್ ಸೆಟ್‌ಗೆ ಪವರ್ ಕೊಡಬೇಕಾಗಿದ್ದರ ಬಗ್ಗೆ ಇವೊತ್ತಿನ ದಿವಸ ಈ ಬಜೆಟ್‌ನಲ್ಲಿ ಹಣ ಏನೂ ಇಟ್ಟಿಲ್ಲ. ಇದನ್ನು ನಾನು ಪ್ರತಿಭಟನೆ ಮಾಡುತ್ತೇನೆ ಹಾಗೂ ಈ ಸಭೆಯಿಂದ ಸಭಾತ್ಯಾಗ ಮಾಡುತ್ತೇನೆ.

(ಜನತಾ ಪಕ್ಷದ ಸದಸ್ಯರು ಶ್ರೀ ಬೈರೇಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು.—"೩೧-೩-೧೯೯೦ರ ಅಂತ್ಯಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ಬೇಡಿಕೆ ಸಂಖ್ಯೆ ೧ ರಿಂದ ೬೧ರ ವರೆಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನುದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ.

(ಪ್ರಸ್ತಾಪ ಅಂಗೀಕಾರವಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಇದಕ್ಕೆ ಲಗತ್ತಿಸಲಾಗಿದೆ

೧೯೯೦-೯೧ನೇ ಸಾಲಿನ ವೆಚ್ಚಕ್ಕಾಗಿ ಅನುದಾನಗಳನ್ನು ಪಡೆಯಲು ಬೇಡಿಕೆಗಳ (ಲೇಖಾನುದಾನ) ಸೂಚನೆ

ಹಣಕಾಸು ಮಂತ್ರಿಗಳು

ಅಭಿಯಾಚನೆ ಕ್ರಮಾಂಕ ೧—ಭೂಸಾರ ಮತ್ತು ಜಲ ರಕ್ಷಣೆ ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು.)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿಭೂಮಿ ಅಭಿವೃದ್ಧಿ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೩೦,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೧೩,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨—ಖುಷ್ಕಿ ಭೂಮಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ೩,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩—ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ: ರಾಜಸ್ವ ಖಾತೆಯಲ್ಲಿ ೬,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪—ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೭,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫—ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೬—ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ರೇಷ್ಮೆ ವ್ಯವಸಾಯ ಮತ್ತು ಸಹಕಾರಿ ಉದ್ಯಮಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ರೇಷ್ಮೆ ವ್ಯವಸಾಯ ಮತ್ತು ಸಹಕಾರಿ ಉದ್ಯಮಗಳ ಹೊರತು)ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೫,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೭—ಗಣಿಗಳು ಮತ್ತು ಭೂವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲ ಸರಕಾರಕ್ಕೆ

ರಾಜಸ್ವ ಖಾತೆಯಲ್ಲಿ ೨,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೮—ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೯—ಸಹಕಾರಿ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಿ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೫,೨೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೦—ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೫,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೧—ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೨೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೨—ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೦,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೩—ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೪—ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೫—ಪ್ರಾಥಮಿಕ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೦,೧೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೬—ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೦,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು,

ಅಭಿಯಾಚನೆ ಕ್ರಮಾಂಕ ೧೭—ಪರವಾನ ತೆರಿಗೆ. ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪರವಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೨,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೮—ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೯—ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೮,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೦—ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೩,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩-೮೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೧—ಸಣ್ಣ ಉಳಿತಾಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೨—ಇತರೇ ವಿವಿಧ ಸೇವೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬.೫೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೯೦,೦೦,೦೦೦ ರೂ. ಗಳಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೩—ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೪—ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೨೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೫—ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೧೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೬—ವಾಹನ ತೆರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೯೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೭—ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೬೫.೦೦೦ ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೮—ಜೈಲು ಇತ್ಯಾದಿಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೫,೦೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೯—ವಾರ್ತಾ ಮತ್ತು ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೬೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨,೦೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೦—ರಸ್ತೆ ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨,೧೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೧—ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೦,೨೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೨—ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೭೦,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨ ೯೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೩—ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೧೨,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ ೨,೧೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೪—ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯತಿಗಳಿಗೆ ಅನುದಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೨,೪೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೫—ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧೩,೧೮,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೭೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೬—ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ. ರಾಜಸ್ವ ಖಾತೆಯಲ್ಲಿ ೬೯ ೭೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೧೧,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೭—ರಾಜ್ಯ ವಿಧಾನಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧- ೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೦೦,೦೦.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೮—ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ೧೧,೩೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೯—ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ಎಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೦—ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೧—ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೧೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೨—ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೫೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೩—ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೮೮,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೬೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೪೪—ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೩೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೫—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೬—ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೧೭,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೫೦,೮೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೭—ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು:

ಅಭಿಯಾಚನೆ ಕ್ರಮಾಂಕ ೪೮ —ರೇವು ಮತ್ತು ಜಲ ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೩,೦೦,೦೦೦ ರೂ.ಗಳಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೯—ವಿದ್ಯುಚ್ಛಕ್ತಿ ಯೋಜನೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೨೨,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೪,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೦—ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪,೭೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೧—ಮುದ್ರಾಂಕಗಳು ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪು)ಗಳು ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೪೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೨—ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೨೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೩—ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೪—ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೫—ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೧೨ ೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೮೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೬—ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧-೩-೧೯೭೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೫೯,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೭—ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೨,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೮—ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೨,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೯—ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೯೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೬೦—ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೬೧—ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫,೦೦,೨೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹೊನ್ನಾವರ ಹಾಗೂ ಭಟ್ಕಳದಲ್ಲಿರುವ ಮಹಿಳಾ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳು

೪೧೪. ಶ್ರೀ ಆರ್. ಎನ್. ನಾಯಕ್ (ಭಟ್ಕಳ).— ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಎಷ್ಟು ವೈದ್ಯಾಧಿಕಾರಿ ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ (ಜಿಲ್ಲಾವಾರು ಮಾಹಿತಿ ನೀಡುವುದು) ?

ಆ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಭಟ್ಕಳ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಮಹಿಳಾ ವೈದ್ಯಾಧಿಕಾರಿ ಹಾಗೂ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ?

ಇ) ಹೊನ್ನಾವರ ಆರೋಗ್ಯ ಇಲಾಖೆಗೆ ಸೇರಿದ ಇತರ ಹುದ್ದೆಗಳು ಎಷ್ಟು ಖಾಲಿ ಇವೆ ?

ಈ) ಮುಂಗಡ ಪತ್ರದಲ್ಲಿ ಪ್ರಯುಕ್ತ ಹೊನ್ನಾವರ ತಾಲ್ಲೂಕಿಗೆ ಹೆಚ್ಚಿನ ಸಿಬ್ಬಂದಿಗಳೇನಾದರೂ ನೇಮಿಸಲಾಗಿದೆಯೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಸಚಿವೆಯವರು).—

ಅ)	ಪುರುಷ ವೈದ್ಯಾಧಿಕಾರಿಗಳು —	೨೬೬
	ಮಹಿಳಾ ವೈದ್ಯಾಧಿಕಾರಿಗಳು —	೮೦
	ಒಟ್ಟು ಖಾಲಿ ಹುದ್ದೆ	೩೪೬

ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನಮೂದಿಸಿದೆ.